ವಿಶ್ವವಾಣಿ
ವಿಶ್ವಾಸವೇ ವಿಶ್ವ

ನಟ ಯಶ್ ಮತ್ತು ರಾಧಿಕಾ ಪಂಡಿತ್ ದಂಪತಿ ಅವರು ಮುಂಬೈನಲ್ಲಿ ಅನಂತ್ ಅಂಬಾನಿ-ರಾಧಿಕಾ ಮರ್ಚೆಂಟ್ ಅವರ ಅದ್ದೂರಿ ಮದುವೆ ಸಮಾರಂಭದಲ್ಲಿ ಭಾಗಿಯಾಗಿದ್ದಾರೆ. ಮುಂಬೈ ವಿಮಾಣ ನಿಲ್ದಾಣದಲ್ಲಿ ಹೊಸ ಗೆಟಪ್‌ನಲ್ಲಿ ಕಾಣಿಸಿಕೊಂಡ ಯಶ್ ಅವರನ್ನು ನೋಡಲು ಅಭಿಮಾನಿಗಳು ಮತ್ತು ಛಾಯಾಗ್ರಾಹಕರು ಮುಗಿ ಬಿದ್ದರು.



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ

ಸಮಾಜ ಕಲ್ಯಾಣ ಇಲಾಖೆ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಹಸಿರು ಕ್ರಾಂತಿಯ ಹರಿಕಾರ, ರಾಷ್ಟ್ರನಾಯಕ, ಭಾರತದ ಮಾಜಿ ಉಪ ಪ್ರಧಾನಿ
ಇವರ ಸ್ಮರಣೆಗಾಗಿ ಬೆಂಗಳೂರಿನಲ್ಲಿ ಅತ್ಯಾಕರ್ಷಕವಾದ

ಡಾ. ಬಾಬು ಜಗಜೀವನ ರಾಮ್ ಭವನ
ಮತ್ತು ಸಂಶೋಧನಾ ಸಂಸ್ಥೆ ಉದ್ಘಾಟನಾ ಸಮಾರಂಭ

ದಿನಾಂಕ: 13-07-2024ರ ಶನಿವಾರ, ಬೆಳಗ್ಗೆ 11 ಗಂಟೆಯಿಂದ ಸಾಂಸ್ಕೃತಿಕ ಕಾರ್ಯಕ್ರಮ
ಮಧ್ಯಾಹ್ನ 3 ಗಂಟೆಗೆ ಭವನದ ಉದ್ಘಾಟನೆಯ ಕಾರ್ಯಕ್ರಮ
ಸ್ಥಳ : ನಿರಾಶ್ರಿತರ ಪರಿಹಾರ ಕೇಂದ್ರ, ಮಾಗಡಿ ರಸ್ತೆ, ಸುಮನಹಳ್ಳಿ ಸರ್ಕಲ್, ಬೆಂಗಳೂರು - 560091.

ಉದ್ಘಾಟನೆ :
ಶ್ರೀ ಸಿದ್ದರಾಮಯ್ಯ , ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ :
ಶ್ರೀ ಡಿ.ಕೆ. ಶಿವಕುಮಾರ್, ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಡಾ॥ ಹೆಚ್.ಸಿ. ಮಹದೇವಪ್ಪ , ಮಾನ್ಯ ಸಮಾಜ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ

ಗೌರವಾನ್ವಿತ ಆಹ್ವಾನಿತರು :
ಶ್ರೀಮತಿ ಮೀರಾ ಕುಮಾರ್, ಲೋಕಸಭೆಯ ಮಾಜಿ ಸ್ಪೀಕರ್

ಅಧ್ಯಕ್ಷತೆ :
ಶ್ರೀ ಮುನಿರತ್ನ, ಮಾನ್ಯ ಶಾಸಕರು, ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ

ದಯಮಾಡಿ ಬಾಬೂಜೀ ಅನುಯಾಯಿಗಳು, ಹೋರಾಟಗಾರರು ಸಂಘಟನೆಯ ಮುಖ್ಯಸ್ಥರು, ಗಣ್ಯ ನಾಗರಿಕರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶ್ವಸಿಗೊಳಿಸಬೇಕೆಂದು ಕೋರುತ್ತೇವೆ.

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯರ ಮೂಲಭೂತ ಕರ್ತವ್ಯ"

ಸರ್ವರಿಗೂ ಸುಸ್ವಾಗತ

ನಿರ್ದೇಶಕರು
ಡಾ. ಬಾಬು ಜಗಜೀವನ ರಾಮ್ ಸಂಶೋಧನಾ ಸಂಸ್ಥೆ

ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ

ಸಮಾಚಾರ ಸಣ್ಣದಲ್ಲ

ಮಹಿಳೆ ಅಡ್ಡಗಟ್ಟಿ 2 ಲಕ್ಷ ರು. ದೋಚಿದ ದುಷ್ಕರ್ಮಿಗಳು

ಬೆಂಗಳೂರು: ಬ್ಯಾಂಕ್ ಹಣ ಡ್ರಾ ಮಾಡಿಕೊಂಡು ಹೋಗುತ್ತಿದ್ದ ಮಹಿಳೆಯನ್ನು ಅಡ್ಡಗಟ್ಟಿ 2 ಲಕ್ಷ ರು. ದೋಚಿ ದುಷ್ಕರ್ಮಿಗಳು ಪರಾರಿಯಾಗಿರುವ ದುರ್ಘಟನೆ ಅಮೃತಹಳ್ಳಿಯ ಭುವನೇಶ್ವರಿನಗರದ 5ನೇ ಅಡ್ಡರಸ್ತೆಯಲ್ಲಿ ನಡೆದಿದೆ. ಭುವನೇಶ್ವರಿನಗರದ ಶೃತಿ ಅವರು ಬೆಳಗ್ಗೆ 11ರ ವೇಳೆ ಕೆನರಾ ಬ್ಯಾಂಕ್ ನಿಂದ ಎರಡು ಲಕ್ಷ ರು. ಹಣವನ್ನು ಡ್ರಾ ಮಾಡಿಕೊಂಡು ಬ್ಯಾಗ್‌ನಲ್ಲಿ ಹಣವಿಟ್ಟುಕೊಂಡು ಮನೆಗೆ ಹೋಗುತ್ತಿದ್ದರು. ಈ ವೇಳೆ ದ್ವಿಚಕ್ರ ವಾಹನದಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ಅಡ್ಡಗಟ್ಟಿ ಅವರ ಬಳಿಯಿಂದ ಹಣವಿರುವ ಬ್ಯಾಗ್ ಅನ್ನು ದೋಚಿದ್ದಾರೆ. ಕತ್ತರಿಯಿಂದ ಬ್ಯಾಗ್ ಕತ್ತರಿಸಿ ಅದರಲ್ಲಿದ್ದ 2 ಲಕ್ಷ ರು. ಗಳನ್ನು ದುಷ್ಕರ್ಮಿಗಳು ಎತ್ತಿಕೊಂಡು ಬ್ಯಾಗ್ ಎಸೆದು ಪರಾರಿಯಾಗಿದ್ದು, ಪ್ರಕರಣ ದಾಖಲಿಸಿರುವ ಅಮೃತಹಳ್ಳಿ ಪೊಲೀಸರು ಆರೋಪಿಗಳ ಪತ್ತೆಗಾಗಿ ರಸ್ತೆಯಲ್ಲಿ ಹಾಗೂ ಬ್ಯಾಂಕ್ ಹತ್ತಿರ ಅಳವಡಿಸಿರುವ ಸಿಸಿ ಕ್ಯಾಮೆರಾ ಹಾಗೂ ಇತರೆ ಸಾರ್ವಜನಿಕರನ್ನು ವಿಚಾರಿಸಿ, ದೂರನ್ನು ದಾಖಲಿಸಿ ಆರೋಪಿಗಳ ಪತ್ತೆಗಾಗಿ ತಂಡವನ್ನು ರಚಿಸಿ ಕಾರ್ಯಾಚರಣೆ ಕೈಗೊಂಡಿದ್ದಾರೆ.

ಕಾಡಾನೆ ದಾಳಿಗೆ ಅರಣ್ಯ ರಕ್ಷಕ ಸಾವು

ಬೆಂಗಳೂರು: ಕಾಡಾನೆ ದಾಳಿಗೆ ಸಿಲುಕಿ ಅರಣ್ಯ ರಕ್ಷಕರೊಬ್ಬರು ಮೃತಪಟ್ಟ ಘಟನೆ ಬನ್ನೇರುಘಟ್ಟ ಠಾಣಾ ವ್ಯಾಪ್ತಿಯ ಹಕ್ಕಿಪಿಕ್ಕಿ ಕಾಲೋನಿಯ ಬಳಿ ನಡೆದಿದೆ. ಬನ್ನೇರುಘಟ್ಟದ ಮಾದಪ್ಪ ಕಾಡಾನೆ ದಾಳಿಗೆ ಸಿಲುಕಿ ಮೃತಪಟ್ಟ ದುರ್ದೈವಿ. ಕಳೆದ 20 ವರ್ಷಗಳಿಂದ ಅರಣ್ಯ ರಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಮಾದಪ್ಪ ಗುರುವಾರ ರಾತ್ರಿ 11 ಗಂಟೆ ಸುಮಾರಿಗೆ ಹಕ್ಕಿಪಿಕ್ಕಿ ಕಾಲೋನಿ ಸಮೀಪ ಬರುತ್ತಿದ್ದಾಗ ಕಾಡಾನೆ ಕಾಣಿಸಿಕೊಂಡಿದೆ. ಆನೆಯನ್ನು ಕಾಡಿಗಟ್ಟಲು ಅರಣ್ಯ ರಕ್ಷಕ ಪ್ರಯತ್ನಿಸುವ ವೇಳೆ ಕಾಡಾನೆ ದಾಳಿ ನಡೆಸಿದ್ದು, ಆನೆ ತುಳಿತಕ್ಕೆ ಒಳಗಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.ಅರಣ್ಯ ಸಚಿವ ಈಶ್ವರ ಖಂಡ್ರೆ, ವಿಕ್ಟೋರಿಯಾ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ತಿಳಿಸಿ ಅರಣ್ಯ ಇಲಾಖೆ ವತಿಯಿಂದ ಕುಟುಂಬಸ್ಥರಿಗೆ ₹25 ಲಕ್ಷ ಪರಿಹಾರ ಘೋಷಣೆ ಮಾಡಿದ್ದು, ವಾರಸುದಾರರಿಗೆ ಅರಣ್ಯ ಇಲಾಖೆಯಲ್ಲಿ ಕೆಲಸ ನೀಡುವುದಾಗಿ ಭರವಸೆ ನೀಡಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿಗೆ ದಂಡ ವಿಧಿಸಿದ ಕೋರ್ಟ್

ವಿಜಯಪುರ: ತಮ್ಮ ವಿರುದ್ಧ ದಾಖಲಾಗಿದ್ದ ಚುನಾವಣಾ ಅರ್ಜಿಯನ್ನು ಶುಕ್ರವಾರ ಹೈಕೋರ್ಟ್ ವಜಾಗೊಳಿಸಿ, ಅರ್ಜಿದಾರರಿಗೆ ದಂಡ ವಿಧಿಸಿದ್ದಾಗಿ ವಿಜಯಪುರ ನಗರ ಶಾಸಕ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ತಿಳಿಸಿದ್ದಾರೆ.

ಬಾಲಿಯ ಸೆನೇಟರ್ ವೇದಕರ್ಣಾ ಆರ್ಯ ಜತೆ ಸಂವಾದದಲ್ಲಿ ಲಿಂಬಾವಳಿ ಅಭಿಪ್ರಾಯ

ಇಂಡೋನೇಷ್ಯಾ ಯುವಕರಿಗೆ ಹಿಂದೂ ಹೆಸರನ್ನು ತಿಳಿಸುವ ಕೆಲಸವಾಗಲಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಇಂಡೋನೇಷ್ಯಾದಲ್ಲಿರುವ ಯುವಕರಿಗೆ ಹಿಂದೂ ಧರ್ಮ, ಸಂಸ್ಕೃತಿ ಹಾಗೂ ಹೆಸರಿನ ಅರ್ಥಗಳನ್ನು ತಿಳಿಸುವ ಕೆಲಸವಾಗಬೇಕಿದೆ ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರು ಅಭಿಪ್ರಾಯಪಟ್ಟಿದ್ದಾರೆ.

ಇತ್ತೀಚಿಗೆ ಬಾಲಿಗೆ ಭೇಟಿ ನೀಡಿದ್ದ ಸಮಯದಲ್ಲಿ ಇಂಡೋನೇಷ್ಯಾದ ಬಾಲಿ ರಾಜಮನೆತನದ ವಂಶಸ್ಥ ಹಾಗೂ ಸೆನೇಟರ್ ಆಗಿರುವ ಡಾ. ಗಸ್ತಿ ವೇದಕರ್ಣಾ ಆರ್ಯ ಅವರನ್ನು ಅರವಿಂದ ಲಿಂಬಾವಳಿ ಅವರ ನೇತೃತ್ವದ ನಿಯೋಗ ಬಾಲಿಯ ಐತಿಹಾಸಿಕ ಸ್ಥಳವಾಗಿರುವ ಬೌಂಗ್ ಕರ್ಣೋದಲ್ಲಿ ಭೇಟಿಯಾಗಿ ಔಪಚಾರಿಕ ಸಭೆ ನಡೆಸಿತು. ಈ ವೇಳೆ ಹಿಂದೂಬಾಹುಳ್ಯವಾಗಿದ್ದ ಬಾಲಿಯಲ್ಲಿ ದಿನದಿಂದ ದಿನಕ್ಕೆ ಹಿಂದುಗಳ ಸಂಖ್ಯೆ ಕ್ಷೀಣಿಸುತ್ತಿದೆ ಎನ್ನುವ ಆತಂಕವನ್ನು ವೇದಕರ್ಣ ಅವರು ವ್ಯಕ್ತಪಡಿಸಿದರು.

ಇದಕ್ಕೆ ಧ್ವನಿಗೂಡಿಸಿದ ಅರವಿಂದ ಲಿಂಬಾವಳಿ ಅವರು ತಾವು ಇಂಡೋನೇಷ್ಯಾ ಹಾಗೂ ಬಾಲಿಯಲ್ಲಿ ಸುತ್ತಾಡುವಾಗ ಅನೇಕ ಯುವಕರ ಹೆಸರನ್ನು ಕೇಳಿದೆ. ಅವರೆಲ್ಲರದ್ದು ಹಿಂದೂ ಧರ್ಮದ ಪ್ರಮುಖರ ಅಥವಾ ಪ್ರಮುಖ ಘಟ್ಟದ ಹೆಸರನ್ನಿಟ್ಟುಕೊಂಡಿದ್ದಾರೆ. ಆದರೆ ಅವರಿಗೆ ಅವರ ಹೆಸರಿನ ಅರ್ಥವೇ ಗೊತ್ತಿಲ್ಲ. ಆದ್ದರಿಂದ ಸರಕಾರ ಅಥವಾ ಸ್ಥಳೀಯರಿಂದ ಯುವಕರಿಗೆ ಹಿಂದೂ ಧರ್ಮದ ವಿಶೇಷತೆ ಬಗ್ಗೆ ಧರ್ಮ ಜಾಗೃತಿ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಬೇಕು ಎಂದು ಸಲಹೆ ನೀಡಿದರು. ಇದರೊಂದಿಗೆ ಸಾಮಾಜಿಕ ಜಾಲತಾಣಗಳಲ್ಲಿ, ಹೆಸರುಗಳ ಅರ್ಥವನ್ನು ಯುವಕರಿಗೆ ತಿಳಿಸುವ ಕೆಲಸವನ್ನು ಮಾಡಬಹುದು. ಇದರಿಂದಾಗಿ, ಯುವಕರಿಗೆ ತಮ್ಮ ಹೆಸರಿನ ಮಹತ್ವ ತಿಳಿಯಲಿದೆ ಎಂದು ಅಭಿಪ್ರಾಯಪಟ್ಟರು.

ಅರವಿಂದ ಲಿಂಬಾವಳಿ ಅವರ ಈ ಸಲಹೆಯನ್ನು ಸಕಾರಾತ್ಮಕವಾಗಿ ತೆಗೆದುಕೊಂಡ ವೇದಕರ್ಣ ಅವರು, ಈ ಬಗ್ಗೆ ಗಂಭೀರವಾಗಿ ಚಿಂತನೆ ನಡೆಸಲಾಗುವುದು. ಇದಕ್ಕಾಗಿ ನಿಮ್ಮ ಸಹಾಯವೂ ಬೇಕಾಗಬಹುದು. ಬಾಲಿಯಲ್ಲಿ ವರ್ಕ್ ಈಸ್ ವರ್‌ಶಿಪ್ ಎನ್ನುವ ಬದಲಿಗೆ 'ವರ್‌ಶಿಪ್ ಈಸ್ ವರ್ಕ್' ಎನ್ನುತ್ತಾರೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಅರವಿಂದ ಲಿಂಬಾವಳಿ ಅವರು, ಧರ್ಮದ ಇತಿಹಾಸದ ಅಧ್ಯಯನಕ್ಕಾಗಿ ಒಂದು ಪ್ರತ್ಯೇಕ ತಂಡವನ್ನು ರಚಿಸಬಹುದು ಎಂದು ಸಲಹೆ ನೀಡಿದರು.

ಬೆಂಗಳೂರು-ಬಾಲಿ ಒಟ್ಟಿಗೆ ಕೆಲಸ ಮಾಡಬೇಕಿದೆ: ಇನ್ನು ಐಟಿ ರಾಜಧಾನಿಯಾಗಿರುವ ಬೆಂಗಳೂರಿ ನೊಂದಿಗೆ ವಿವಿಧ ಕ್ಷೇತ್ರದಲ್ಲಿ ಬಾಲಿ ಕಾರ್ಯನಿರ್ವಹಿಸಬೇಕಿದೆ. ಸಾಂಸ್ಕೃತಿ, ಶೈಕ್ಷಣಿಕ, ವಿಜ್ಞಾನ ಕ್ಷೇತ್ರಗಳಿಗೆ ಎರಡೂ ನಗರಗಳು ಒಟ್ಟಿಗೆ ಹೋಗಬೇಕಿದೆ. ಅದರಲ್ಲಿಯೂ ಸಾಫ್ಟ್‌ವೇರ್ ಕ್ಷೇತ್ರದಲ್ಲಿ ನಮಗೆ ನಿಮ್ಮ ಸಹಾಯ ಅಗತ್ಯವಿದೆ ಎಂದು ವೇದಕರ್ಣಾ ಆರ್ಯ ಅಭಿಪ್ರಾಯಪಟ್ಟರು. ಈ ವೇಳೆ ಅರವಿಂದ ಲಿಂಬಾವಳಿ ಅವರು, ಬೆಂಗಳೂರಿಗೆ ವೇದಕರ್ಣಾ ಅವರನ್ನು ಆಹ್ವಾನಿಸಿದರು. ನೀವು ದಿನಾಂಕ ನಿಗದಿಪಡಿಸಿ, ತಿಳಿಸಿದರೆ ಭೇಟಿ ನೀಡುವುದಾಗಿ ಭರವಸೆ ನೀಡಿದರು.

ಹಿಂದೂಗಳಿಗೆ ಸಿಗುತ್ತಿಲ್ಲ ಅನುದಾನ: ಇನ್ನು ಪ್ರಸ್ತುತ ರಾಜಕೀಯ, ಆಡಳಿತಕ್ಕೆ ಸಂಬಂಧಿಸಿದಂತೆ ನಿಯೋಗದೊಂದಿಗೆ ಮುಕ್ತವಾಗಿ ಮಾತನಾಡಿದ ವೇದಕರ್ಣಾ ಆರ್ಯ ಅವರು, ಇಂಡೋನೇಷ್ಯಾ ಮುಸ್ಲಿಂ ಬಾಹುಳ್ಯವಿರುವ ರಾಷ್ಟ್ರ. ಇಲ್ಲಿ ಹಿಂದೂಗಳು ಅಲ್ಪಸಂಖ್ಯಾತರು. ಆದ್ದರಿಂದ ಹಿಂದುಗಳಿಗೆ ಸೂಕ್ತ ಅನುದಾನ ಸಿಗುತ್ತಿಲ್ಲ. ಬಾಲಿಯಲ್ಲಿ ಹಿಂದೂಗಳ ಸಂಖ್ಯೆಯೇ ಹೆಚ್ಚಾಗಿರುವುದರಿಂದ ಇಲ್ಲಿಗೆ ಅನುದಾನ ಪಡೆಯಲು ಹೋರಾಡಬೇಕಾದ ಸನ್ನಿವೇಶವಿದೆ. ಬಾಲಿಯಿಂದಲೇ ಅತಿಹೆಚ್ಚು ತೆರಿಗೆ ಸಂಗ್ರಹವಾದರೂ, ಅನುದಾನ ಪಡೆಯುವಲ್ಲಿ ಮಾತ್ರ ಸಮಸ್ಯೆಯಾಗುತ್ತದೆ ಎಂದು ಅಲ್ಲಿನ ಸಮಸ್ಯೆ ಬಗ್ಗೆ ಮುಕ್ತವಾಗಿ ಮಾತನಾಡಿದರು. ಸಂವಾದದಲ್ಲಿ ಬಾಲಿಯಲ್ಲಿರುವ ರಮೇಶ್ ಶಾಸ್ತ್ರಿ, ವೆಂಕಟರಮಣಪ್ಪ, ನಟರಾಜ್ ಇದ್ದರು.

ಬಿಜೆಪಿಗೆ ಎಚ್ಚರಿಕೆಯ ಗಂಟೆ

ಸಂವಾದದ ಸಮಯದಲ್ಲಿ ಇತ್ತೀಚಿಗೆ ಮುಕ್ತಾಯಗೊಂಡಿರುವ ಲೋಕಸಭಾ ಚುನಾವಣಾ ಫಲಿತಾಂಶದ ಮಾಹಿತಿಯನ್ನು ವೇದಕರ್ಣಾ ಆರ್ಯ ಅವರು ಅರವಿಂದ ಲಿಂಬಾವಳಿ ಅವರಿಂದ ಪಡೆದರು. ಈ ವೇಳೆ ದೇಶದಲ್ಲಿ 303ರಿಂದ 241ಕ್ಕೆ ಕುಸಿತ, ಕರ್ನಾಟಕದಲ್ಲಿ ಬಿಜೆಪಿ 27ರಿಂದ 19 ಸ್ಥಾನಕ್ಕೆ ಕುಸಿದಿದೆ ಎಂದು ಮಾಹಿತಿ ನೀಡಿದರು. ಇದಕ್ಕೆ ಅಚ್ಚರಿ ವ್ಯಕ್ತಪಡಿಸಿದ ವೇದಕರ್ಣ ಆರ್ಯ ಅವರು, ಬಿಜೆಪಿ ಮೂರನೇ ಬಾರಿಗೆ ಅಧಿಕಾರಕ್ಕೆ ಬಂದಿರುವುದು ಶ್ಲಾಘನೀಯ. ಆದರೆ ನರೇಂದ್ರ ಮೋದಿ ಅವರ ನಾಯಕತ್ವವಿದ್ದರೂ ಈ ರೀತಿ ಕುಸಿದಿರುವುದು ಎಚ್ಚರಿಕೆಯ ಗಂಟೆ. ಬಿಜೆಪಿ ಈಗಿನಿಂದಲೇ ಪಾಠ ಕಲಿಯದಿದ್ದರೆ ಮುಂದೆ ಸಮಸ್ಯೆಯಾಗಬಹುದು ಎಂದು ಅಭಿಪ್ರಾಯಪಟ್ಟರು.

ಬಾಲಿಯಲ್ಲಿಯೂ ಕುಸಿಯುತ್ತಿದೆ ಹಿಂದೂ ಜನಸಂಖ್ಯೆ

ಒಂದು ಕಾಲದಲ್ಲಿ ಶೇ.95ರಷ್ಟು ಹಿಂದೂಗಳಿರುವ ಪ್ರಾಂತ್ಯವಾಗಿದ್ದ ಬಾಲಿಯಲ್ಲಿ ಇತ್ತೀಚಿನ ದಿನದಲ್ಲಿ ಹಿಂದೂಗಳ ಸಂಖ್ಯೆ ಕುಸಿಯುತ್ತಿದೆ ಎನ್ನುವ ಆತಂಕವನ್ನು ವೇದಕರ್ಣ ವ್ಯಕ್ತಪಡಿಸಿದರು. ಕೆಲವರ್ಷಗಳ ಹಿಂದೆ ಶೇ.93ರಷ್ಟಿದ್ದ ಜನಸಂಖ್ಯೆ ಇದೀಗ ಶೇ.75ಕ್ಕೆ ಇಳಿದಿದೆ. ಆದರೆ ಇಡೀ ಇಂಡೋನೇಷ್ಯಾದಲ್ಲಿ ಈ ಹಿಂದೆ ಕೇವಲ ಬಾಲಿಯಲ್ಲಿ ಮಾತ್ರ ಹಿಂದೂಗಳು ಆಯ್ಕೆಯಾಗುತ್ತಿದ್ದರು. ಆದರೀಗ ಜಕಾರ್ತ ಸೇರಿದಂತೆ ಹಲವೆಡೆ ಹಿಂದೂ ಸಾನೆಟರ್‌ಗಳು ಗೆಲುವು ಸಾಧಿಸುತ್ತಿರುವುದು ಸಮಾಧಾನಕರ ಸಂಗತಿ. ಈ ಬಾರಿ 32 ಸಾನೆಟರ್‌ಗಳು ಹಿಂದುಗಳು ಆಯ್ಕೆಯಾಗಿದ್ದಾರೆ ಎಂದರು.

ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ ಸಲಹೆ

ಮೊಬೈಲ್ ಫೋನ್‌ಗಳನ್ನು ಜವಾಬ್ದಾರಿಯುತವಾಗಿ ಬಳಸಿ

ಬಾಲ್ಡ್‌ವಿನ್ ಬಾಲಕಿಯರ ಪ್ರೌಢ ಶಾಲೆ ಯಲ್ಲಿ ಆಯೋಜಿಸಿದ್ದ ಐಸಿಎಸ್‌ಸಿ ಪ್ರೈಜ್ ಡೇ ಕಾರ್ಯಕ್ರಮ ವನ್ನು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಉದ್ಘಾಟಿಸಿದರು. ವಸತಿ ಸಚಿವರ ಮಾಧ್ಯಮ ಸಲಹೆಗಾರ ಎಸ್. ಲಕ್ಷ್ಮಿ ನಾರಾಯಣ, ಜೋಶುವ ಸ್ಯಾಮ್ಯೂಯಲ್ ಆಶಾ ದಾಸ್, ದಿವ್ಯಾ ರಂಗೇನಹಳ್ಳಿ ಹಾಜರಿದ್ದರು.

ಬೆಂಗಳೂರು: ಮೊಬೈಲ್ ಫೋನ್ ಒಂದು ಉಪಯುಕ್ತ ಸಾಧನ. ಆದರೆ ಒಳಿತು-ಕೆಡುಕು ಆಯ್ಕೆಮಾಡಿಕೊಳ್ಳುವುದು ನಮ್ಮ ಜವಾಬ್ದಾರಿ. ಆದ್ದರಿಂದ, ವಿದ್ಯಾರ್ಥಿಗಳು ಜವಾಬ್ದಾರಿಯುತವಾಗಿ ಮೊಬೈಲ್ ಫೋನ್ ಬಳಸುವುದನ್ನು ತಿಳಿದಿರಬೇಕು ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ತಿಳಿಸಿದರು.

ಶುಕ್ರವಾರ ನಗರದ ಬಾಲ್ಡ್ ವಿನ್ ಬಾಲಕಿಯರ ಶಾಲೆಯಲ್ಲಿ 10ನೇ ತರಗತಿಯಲ್ಲಿ ಅತಿಹೆಚ್ಚು ಅಂಕ ಗಳಿಸಿ ಉತ್ತೀರ್ಣರಾದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ, ಬಹುಮಾನ ಪ್ರಮಾಣಪತ್ರ ನೀಡುವ ವಿಶೇಷ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಶಾಲಾ ಶಿಕ್ಷಣವು ಹೈಟೆಕ್ ಆಗಿ ಮಾರ್ಪಟ್ಟಿದೆ, ಮತ್ತು ಅನೇಕರು ಮೊಬೈಲ್ ತಂತ್ರಜ್ಞಾನಕ್ಕೆ ವ್ಯಸನಿಯಾಗಿದ್ದಾರೆ. ನಾನು ಮೊಬೈಲ್ ಫೋನ್‌ಗಳನ್ನು ಸಂಪೂರ್ಣವಾಗಿ ತ್ಯಜಿಸಬೇಕೆಂದು ಎಂದು ಹೇಳುವುದಿಲ್ಲ. ಆದರೆ ಅವುಗಳನ್ನು ದುರುಪಯೋಗಪಡಿಸಿಕೊಳ್ಳಬಾರದು. ಮೊಬೈಲ್ನ ದುಷ್ಪರಿಣಾಮಗಳ ಬಗ್ಗೆ ನಾವು ಪ್ರತಿದಿನ ಓದುತ್ತೇವೆ. ಆದ್ದರಿಂದ ಮೊಬೈಲ್ ಅನ್ನು ಅಗತ್ಯ ಕೆಲಸಕ್ಕೆ ಮಾತ್ರ ಬಳಸಿ ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ಪೋಷಕರ ಕನಸುಗಳನ್ನು ಈಡೇರಿಸುವುದು ಕರ್ತವ್ಯವಾಗಿದೆ. ನೀವು ಯಾವ ವೃತ್ತಿಯನ್ನು ಆರಿಸಿಕೊಂಡರೂ, ಮೊದಲು ಉತ್ತಮ ಮನುಷ್ಯನಾಗಲು ಶ್ರಮಿಸಿ ಮತ್ತು ಸಮಾಜಕ್ಕೆ ಧನಾತ್ಮಕವಾಗಿ ಕೊಡುಗೆ ನೀಡಿ ಎಂದರು. ತಮ್ಮ ವೈಯಕ್ತಿಕ ಬದುಕಿನ ಅನುಭವಗಳನ್ನು ಹಂಚಿಕೊಂಡ ಅವರು, ಕಾರ್ಯಕ್ರಮದಲ್ಲಿ ಪ್ರಾಂಶುಪಾಲೆ ಆಶಾ ಮಾರ್ಗರೇಟ್ ದಾಸ್, ಉಪ ಪ್ರಾಂಶುಪಾಲೆ ಸುಜಾತಾ ಕ್ಯಾಥರೀನ್, ಅನಿತಾ ಐಸಾಕ್, ಎಂ. ಜೋಶುವಾ ಸ್ಯಾಮ್ಯುಯೆಲ್, ದಿವ್ಯಾ ರಂಗೇನಹಳ್ಳಿ, ಸಚಿವ ಜಮೀರ್ ಅಹಮದ್ ಖಾನ್ ಅವರ ಮಾಧ್ಯಮ ಸಂಯೋಜಕ ಲಕ್ಷ್ಮೀನಾರಾಯಣ್ ಉಪಸ್ಥಿತರಿದ್ದರು.

ತಂದೆ ಬಯಸಿದ್ದು ಐಟಿಐ: ನಾನು ಆಗಿದ್ದು ಪತ್ರಕರ್ತ

ನನ್ನ ತಂದೆ ನಾನು ಐಟಿಐ ಮಾಡಬೇಕೆಂದು ಬಯಸಿದರು. ಆದರೆ ನನಗೆ ಬರವಣಿಗೆಯ ಉತ್ಸಾಹವಿತ್ತು, ಆದ್ದರಿಂದ ನಾನು ಪತ್ರಿಕೋದ್ಯಮವನ್ನು ಆರಿಸಿದೆ. ಎಪಿಜೆ ಅಬ್ದುಲ್ ಕಲಾಂ ಅವರಂತೆ ನಾನು ಮನೆಮನೆಗೆ ಪತ್ರಿಕೆಗಳನ್ನು ಹಂಚಿದ್ದೇನೆ. ಮಾಧ್ಯಮ ಸಲಹೆಗಾರನಾಗಿ ಸೇವೆ ಸಲ್ಲಿಸುತ್ತಿರುವ ನನ್ನ ಯಶಸ್ಸಿನ ಪಯಣವು ಹಂತಹಂತವಾಗಿ ಗುರಿಮುಟ್ಟಿದೆ. ಈ ಸಮಾಜಕ್ಕೆ ಸಕಾರಾತ್ಮಕವಾಗಿ ಕೊಡುಗೆ ನೀಡುವುದು ನನ್ನ ಆಶಯ ಎಂದರು.

CreditAccess® Grameen

ಕ್ರೆಡಿಟ್‌ಆ್ಯಕ್ಸೆಸ್ ಗ್ರಾಮೀಣ್ ಲಿಮಿಟೆಡ್
ನಂ. 49, 46ನೇ ಕ್ರಾಸ್, 8ನೇ ಬ್ಲಾಕ್, ಜಯನಗರ, ಬೆಂಗಳೂರು 560070
ಟೆಲಿಫೋನ್: +91 80 22637300 / ಫ್ಯಾಕ್ಸ್: +91 80 26643433
ಈಮೇಲ್: cs@cagrameen.in ವೆಬ್‌ಸೈಟ್: www.creditaccessgrameen.in
CIN: L51216KA1991PLC053425

ಸೂಚನೆ
ಕ್ರೆಡಿಟ್‌ಆ್ಯಕ್ಸೆಸ್ ಗ್ರಾಮೀಣ್ ಲಿಮಿಟೆಡ್ ನ ಇಕ್ವಿಟಿ ಷೇರುದಾರರ ಗಮನಕ್ಕೆ

ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (ಎಂಸಿಎ) ಹೊರಡಿಸಿರುವ ಸಾಮಾನ್ಯ ಸುತ್ತೋಲೆ ಸಂಖ್ಯೆ 20/2020, 10/2022 ಮತ್ತು 09/2023 ಮತ್ತು ಇತರ ಸುತ್ತೋಲೆಗಳು ಮತ್ತು ಸೆಬಿ ಹೊರಡಿಸಿರುವ ಸುತ್ತೋಲೆ ನಂ.SEBI/HO/CFD/PoD-2/P/CIR/2023/4 ಮತ್ತು SEBI/HO/CFD/CFD-PoD-2/P/CIR/2023/167 ಅನುಸಾರ ಕಂಪನಿಯು ವಿಸಿ ಅಥವಾ ಒವಿಎವಿಎಂ (VC or OAVM) ಮೂಲಕ ವಾರ್ಷಿಕ ಸಾಮಾನ್ಯ ಸಭೆಯನ್ನು (ಎಜಿಎಂ) ಸೋಮವಾರ, ಆಗಸ್ಟ್ 12, 2024 ಬೆಳಗ್ಗೆ 11.00 ಗಂಟೆಗೆ (ಭಾ.ಕಾ.) ನಡೆಸಲಿದೆ,

ವಿ.ವ.2023-24 ರ ವಾರ್ಷಿಕ ವರದಿ ಮತ್ತು ಎಜಿಎಂ ಸೂಚನೆ ಕಂಪನಿಯ ವೆಬ್‌ಸೈಟ್ www.creditaccessgrameen.in ಮತ್ತು ಸ್ಟಾಕ್ ಎಕ್ಸ್‌ಚೇಂಜುಗಳ www.bseindia.com ಮತ್ತು www.nseindia.com ವೆಬ್‌ಸೈಟುಗಳಲ್ಲಿ ಮತ್ತು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ (ಆರ್‌ಟಿಎ) ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ (ಕೆಫಿನ್)ನ https://evoting.kfintech.com/. ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತವೆ.

ಇಮೇಲ್ ವಿಳಾಸಗಳನ್ನು ನೋಂದಾಯಿಸುವ / ನವೀಕರಿಸುವ ವಿಧಾನಗಳು:

ಎ. ಡೀಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಆದರೆ ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸದ / ನವೀಕರಿಸದಿರುವ ಷೇರುದಾರರು ತಮ್ಮ ಇಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ತಮ್ಮ ಡಿಪಾಸಿಟರಿಗಳೊಂದಿಗೆ ನೋಂದಾಯಿಸಿಕೊಳ್ಳಬಹುದು.

ಬಿ. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇಮೇಲ್ ವಿಳಾಸ ಮತ್ತು ಸಂಪರ್ಕ ವಿವರಗಳು ಮತ್ತು ಸಂಬಂಧಿತ ವಿವರಗಳನ್ನು einward.ris@kfintech.com ಗೆ ನಮೂನೆ ಸಂಖ್ಯೆ ಐಎಸ್‌ಆರ್-1 ನಲ್ಲಿ ಸಲ್ಲಿಸಿ ನವೀಕರಿಸಬೇಕೆಂದು ವಿನಂತಿ.

ಸಿ. ಪರ್ಯಾಯವಾಗಿ, ಸದಸ್ಯರು ವಾರ್ಷಿಕ ವರದಿ, ಎಜಿಎಂ ಸೂಚನೆ, ಮತ್ತು ರಿಮೋಟ್ ಇ-ವೋಟಿಂಗ್ ಸೂಚನೆಗಳನ್ನು ಪಡೆಯಲು ತಮ್ಮ ಇಮೇಲ್ ವಿಳಾಸ, ಮೊಬೈಲ್ ಸಂಖ್ಯೆ ಉಳ್ಳ ವಿನಂತಿ ಪತ್ರದ ಸ್ಕ್ಯಾನ್ ಮಾಡಿದ ಪ್ರತಿಯ ಜೊತೆಗೆ ಸ್ವಯಂ-ದೃಢೀಕರಿಸಿದ ಪಾನ್ (PAN) ಪ್ರತಿ ಮತ್ತು ಕ್ಲೈಂಟ್ ಮಾಸ್ಟರ್ ಪ್ರತಿಯನ್ನು einward.ris@kfintech.com ಗೆ ಕಳುಹಿಸಬಹುದು.

ಇ-ಮತದಾನದ ವಿಧಾನ:

ಅಂತಿಮ ದಿನಾಂಕವಾದ ಆಗಸ್ಟ್ 05, 2024 ರಂದು ಷೇರುಗಳನ್ನು ಹೊಂದಿರುವ ಸದಸ್ಯರು ಆರ್‌ಟಿಎ ಒದಗಿಸಿರುವ ವಿದ್ಯುನ್ಮಾನ ಮತದಾನ ವ್ಯವಸ್ಥೆ ('ರಿಮೋಟ್ ಇ-ವೋಟಿಂಗ್') ಮೂಲಕ ಎಜಿಎಂ ಸೂಚನೆಯಲ್ಲಿ ಸೂಚಿಸಿರುವಂತಹ ವ್ಯವಹಾರಗಳ ಬಗ್ಗೆ ವಿದ್ಯುನ್ಮಾನವಾಗಿ ಮತ ಚಲಾಯಿಸಬಹುದು.

ಸದಸ್ಯರು ದಯವಿಟ್ಟು ಗಮನಿಸಬೇಕು: ಕಂಪನಿಯು ಇ-ವೋಟಿಂಗ್ ಮತ್ತು ಎಜಿಎಂ ನಡೆಸಲು ಅನುಕೂಲವಾಗುವಂತೆ ಕೆಫಿನ್ ನ ಸೇವೆಗಳನ್ನು ಪಡೆದುಕೊಂಡಿದೆ. ಎಜಿಎಂ ಸಮಯದಲ್ಲಿನ ರಿಮೋಟ್ ಇ-ವೋಟಿಂಗ್ ಮತ್ತು ಇ-ವೋಟಿಂಗ್ ಪ್ರಕ್ರಿಯೆಯ ವಿವರಗಳನ್ನು ಎಜಿಎಂ ಕರೆಯುವ ಸೂಚನೆಯಲ್ಲಿ ಒದಗಿಸಲಾಗುವುದು.

ಒಂದೊಮ್ಮೆ ಡಿವಿಡೆಂಡನ್ನು ಪ್ರಕಟಿಸಿದರೆ ಅದನ್ನು ಪಡೆಯಲು ಆದೇಶವನ್ನು ಒದಗಿಸುವ ವಿಧಾನ,

ಎ. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಮತ್ತು ಇಸಿಎಸ್ ಅಥವಾ ಇತರ ಯಾವುದೇ ವಿಧಾನಗಳ ಮೂಲಕ ನೇರವಾಗಿ ತಮ್ಮ ಬ್ಯಾಂಕ್ ಖಾತೆಗಳಿಗೆ ಡಿವಿಡೆಂಡನ್ನು ಜಮಾ ಮಾಡಲು ತಮ್ಮ ಆದೇಶವನ್ನು ನವೀಕರಿಸದಿರುವವರು ಈ ಕೆಳಗಿನ ದಾಖಲೆಗಳನ್ನು ನಮ್ಮ ಆರ್‌ಟಿಎ, ಕೆಫಿನ್ ಗೆ ಕಳುಹಿಸಬೇಕಾಗಿ ವಿನಂತಿ: ವಿಧ್ಯುಕ್ತವಾಗಿ ಭರ್ತಿಮಾಡಿದ ಮತ್ತು ಹಿಡುವಳಿದಾರರೆಲ್ಲ ಸಹಿ ಮಾಡಿರುವ ಐಎಸ್‌ಆರ್-1 ಅನ್ನು ಮತ್ತು ಬ್ಯಾಂಕ್‌ನ ಹೆಸರು, ಬ್ಯಾಂಕ್ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ಕೋಡ್, ಎಂಐಸಿಆರ್ ಕೋಡ್, ಷೇರುಗಳನ್ನು ಜಂಟಿಯಾಗಿ ಹೊಂದಿದ್ದರೆ ಎಲ್ಲ ಸದಸ್ಯರ ಅಥವಾ ಮೊದಲ ಹಿಡುವಳಿದಾರನ ಹೆಸರನ್ನು ಹೊಂದಿರುವ ರದ್ದು ಮಾಡಿದ ಚೆಕ್‌ನ ಪ್ರತಿ, ಪ್ಯಾನ್ ಕಾರ್ಡ್‌ನ ಸ್ವಯಂ-ದೃಢೀಕೃತ ಪ್ರತಿ, ಕಂಪನಿಯೊಂದಿಗೆ ನೋಂದಾಯಿಸಿದಂತೆ ಸದಸ್ಯರ ವಿಳಾಸವನ್ನು ಬೆಂಬಲಿಸುವ ಯಾವುದೇ ದಾಖಲೆಯ (ಉದಾಹರಣೆಗೆ ಆಧಾರ್ ಕಾರ್ಡ್, ಡ್ರೈವಿಂಗ್ ಲೈಸೆನ್ಸ್, ಚುನಾವಣಾ ಗುರುತಿನ ಚೀಟಿ, ಪಾಸ್‌ಪೋರ್ಟ್) ಸ್ವಯಂ-ದೃಢೀಕರಿಸಿದ ಪ್ರತಿ ಇವುಗಳನ್ನು ಸಲ್ಲಿಸಿದರೆ ಕಂಪನಿಯು ವಿದ್ಯುನ್ಮಾನ ವಿಧಾನದ ಮೂಲಕ ಲಾಭಾಂಶವನ್ನು ಪಾವತಿಸಲು ಸಾಧ್ಯವಾಗುತ್ತದೆ.

ಬಿ. ಡೀಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ದಯವಿಟ್ಟು ಗಮನಿಸಿ: ಡಿವಿಡೆಂಡನ್ನು ಜಮಾ ಮಾಡಲು, ಡಿಪಾಸಿಟರಿಗಳಿಗೆ ಅನ್ವಯವಾಗುವ ನಿಯಮಗಳ ಪ್ರಕಾರ ಡಿಪಾಸಿಟರಿಗಳು ಕಂಪನಿಗೆ ಒದಗಿಸಿದ ತಮ್ಮ ಬ್ಯಾಂಕ್ ವಿವರಗಳನ್ನು ಪರಿಗಣಿಸಲಾಗುತ್ತದೆ ಮತ್ತು ಕಂಪನಿಯು ಅಂತಹ ಸದಸ್ಯರಿಂದ ಬ್ಯಾಂಕ್ ವಿವರಗಳಲ್ಲಿನ ಯಾವುದೇ ಬದಲಾವಣೆ / ಸೇರ್ಪಡೆ / ಅಳಿಸುವಿಕೆ ಕುರಿತಂತೆ ಯಾವುದೇ ನೇರ ಮನವಿಯನ್ನು ಪುರಸ್ಕರಿಸುವುದಿಲ್ಲ. ಡೀಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು: ತಮ್ಮ ವಿದ್ಯುನ್ಮಾನ ಬ್ಯಾಂಕ್ ಆದೇಶವನ್ನು ತಮ್ಮ ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೆ ನವೀಕರಿಸಬೇಕಾಗಿ ವಿನಂತಿ.

ಟಿಡಿಎಸ್ ಸೂಚನೆ:

ಹಣಕಾಸು ಕಾಯಿದೆ, 2020 ರ ಅನುಸಾರ 1 ಏಪ್ರಿಲ್ 2020 ರಿಂದ ಡಿವಿಡೆಂಡ್ ಆದಾಯಕ್ಕೆ ಸದಸ್ಯರೇ ತೆರಿಗೆ ಪಾವತಿಸಬೇಕಾಗುತ್ತದೆ ಮತ್ತು ಕಂಪನಿಯು ಆದಾಯ ತೆರಿಗೆ ಕಾಯಿದೆ, 1961 ('ಐಟಿ ಕಾಯಿದೆ') ಪ್ರಕಾರ ನಿಗದಿತ ದರಗಳಲ್ಲಿ ಸದಸ್ಯರಿಗೆ ಪಾವತಿಸಿದ ಡಿವಿಡೆಂಡ್‌ನಿಂದ ಮೂಲದಲ್ಲಿ ತೆರಿಗೆಯನ್ನು ಕಡಿತಗೊಳಿಸಬೇಕಾಗುತ್ತದೆ ('ಟಿಡಿಎಸ್'). ಸಾಮಾನ್ಯವಾಗಿ, ಟಿಡಿಎಸ್ ಅಗತ್ಯತೆಗಳ ಪಾಲನೆಗಾಗಿ ಸದಸ್ಯರು ಐಟಿ ಕಾಯಿದೆಯ ಪ್ರಕಾರ ತಮ್ಮ ನಿವಾಸದ ಸ್ಥಿತಿಗತಿ, ಪ್ಯಾನ್, ವರ್ಗ ಇವುಗಳನ್ನು ತಮ್ಮ ಡಿಪಾಸಿಟರಿಗೆ ಒದಗಿಸಲು ಮತ್ತು/ಅಥವಾ ನವೀಕರಿಸಬೇಕೆಂದು ವಿನಂತಿ. ಮತ್ತು ಡಿವಿಡೆಂಡ್ ಮೊತ್ತದ ಮೇಲೆ ತೆರಿಗೆ ವಿನಾಯಿತಿ ಪಡೆಯಲು ಷೇರುದಾರರು ಆರ್‌ಟಿಎ ವೆಬ್‌ಸೈಟ್ https://ris.kfintech.com/form15/ ಗೆ ಭೇಟಿ ನೀಡಬೇಕಾಗಿ ಅಥವಾ ಸಂಪೂರ್ಣ ತೆರಿಗೆ ವಿನಾಯಿತಿ ದಾಖಲೆಗಳ ಸಹಿತ einward.ris@kfintech.com ನಲ್ಲಿ ಆರ್‌ಟಿಎ ಗೆ ಇಮೇಲ್ ಕಳುಹಿಸಬೇಕಾಗಿ ವಿನಂತಿ. ಟಿಡಿಎಸ್ ಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ಈಗಾಗಲೇ ಜುಲೈ 10, 2024 ರಂದು ಷೇರುದಾರರಿಗೆ ವಿತರಿಸಲಾಗಿದೆ ಮತ್ತು ಇದು ಕಂಪನಿಯ www.creditaccessgrameen.in ವೆಬ್‌ಸೈಟ್‌ನಲ್ಲಿ ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ಲಭ್ಯವಿದೆ.

ಪುಸ್ತಕ ಮುಚ್ಚುವಿಕೆ:

ಕಂಪನಿಗಳ ಕಾಯಿದೆ, 2013 ರ ಕಲಮು 91 ರ ನಿಬಂಧನೆಗಳು ಮತ್ತು ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಪ್ರಕಾರ, ಕಂಪನಿಯ ಎಜಿಎಂ ಇರುವ ಕಾರಣ, ಸದಸ್ಯರ ನೋಂದಣಿಯನ್ನು ಜುಲೈ 27, 2024 ರಿಂದ ಎಜಿಎಂ ದಿನದವರೆಗೆ ಮುಚ್ಚಲಾಗುವುದು ಎಂದು ಈ ಮೂಲಕ ಸೂಚನೆ ನೀಡಲಾಗಿದೆ.

ಕ್ರೆಡಿಟ್‌ಆ್ಯಕ್ಸೆಸ್ ಗ್ರಾಮೀಣ್ ಲಿಮಿಟೆಡ್ ಗಾಗಿ
ಸಹಿ/-
ಎಮ್.ಜೆ. ಮಹಾದೇವ್ ಪ್ರಕಾಶ್
ಕಂಪನಿ ಸೆಕ್ರೆಟರಿ & ಚೀಫ್ ಕಂಪ್ಲಯನ್ಸ್ ಆಫೀಸರ್

ಸ್ಥಳ: ಬೆಂಗಳೂರು
ದಿನಾಂಕ: ಜುಲೈ 12, 2024

ಸರಕಾರಿ ಅಧಿಕಾರಿ ಹೆಸರಿನಲ್ಲಿ ವಂಚನೆ: ಓರ್ವನ ಬಂಧನ

ಬೆಂಗಳೂರು: ಜಂಟಿ ಕಾರ್ಯದರ್ಶಿ, ಜಿಲ್ಲಾಧಿಕಾರಿ, ನ್ಯಾಯಾಧೀಶರ ಹೆಸರಿನಲ್ಲಿ ವಂಚನೆ ಮಾಡುತ್ತಿದ್ದ ಸುರೇಶ್ ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಮುಖ್ಯಮಂತ್ರಿ ಜಂಟಿ ಕಾರ್ಯದರ್ಶಿ ರಾಮಯ್ಯ ಅವರ ಹೆಸರಿನಲ್ಲಿ ಮಹಿಳಾ ಅಧಿಕಾರಿಯಿಂದ 7 ಲಕ್ಷ ರು. ಹಣ ಪಡೆದು ವಂಚನೆ ಮಾಡಿದ್ದ. ಬಾಗಲಕೋಟೆ ಡಿಎಚ್‌ಓ ಡಾ. ಜಯಶ್ರೀ ಅವರಿಗೆ ವರ್ಗಾವಣೆ ಮಾಡಿಸುವುದಾಗಿ ಹೇಳಿ ಹಂತ ಹಂತವಾಗಿ ಹಣ ಪಡೆದಿದ್ದ. ಅಂದಹಾಗೇ ಡಾ.ಜಯಶ್ರೀ ಜಾಗಕ್ಕೆ ಮಾಜಿ ಸಚಿವ ಮೇಟಿ ಅಳಿಯ ರಾಜಕುಮಾರ್ ವರ್ಗಾವಣೆಯಾಗಿದ್ದರು. ಇದನ್ನು ತೆರವುಗೊಳಿಸಲು ಜಯಶ್ರೀ ವಿಧಾನಸೌಧಕ್ಕೆ ಅಲೆದಾಡಿ ಮುಖ್ಯಮಂತ್ರಿ ಮತ್ತು ಸಚಿವರಿಗೆ ಮನವಿ ಸಲ್ಲಿಸಿದ್ದರು.

ಇದನ್ನು ಗಮನಿಸಿದ ವಂಚಕ ಸುರೇಶ, ಜಯಶ್ರೀ ಪತ್ರ ನೋಡಿ ಅದರಲ್ಲಿದ್ದ ಫೋನ್ ನಂಬರ್ ಗಮನಿಸಿದ್ದಾನೆ. ಬಳಿಕ ಜಯಶ್ರೀಗೆ ಕರೆ ಮಾಡಿ ನಾನು ಸಿಎಂ ಜಂಟಿ ಕಾರ್ಯದರ್ಶಿ ರಾಮಯ್ಯ ಮಾತನಾಡೋದು. ನಿಮ್ಮ ಲೆಟರ್ ನೋಡಿದ್ದೇನೆ, ನಾನು ಮಿನಿಸ್ಟರ್ ಬಳಿ ಮಾತನಾಡುತ್ತೇನೆ. ಆದರೆ ಸ್ವಲ್ಪ ಹಣ ಖರ್ಚಾಗುತ್ತದೆ ಎಂದು ಸುಮಾರು 7 ಲಕ್ಷ ರು. ಪಡೆದು ವಂಚನೆ ಮಾಡಿದ್ದ.

ಇನ್ನೂ ಈ ಖತರ್ನಾಕ್ ಸುರೇಶ್ ಈ ಹಿಂದೆ ತಾನೊಬ್ಬ ನ್ಯಾಯಾಧೀಶ ಎಂದು ಫೋನ್ ಮಾಡಿ ಈ ಹಿಂದೆ ವಿಜಯಸಂಕೇಶ್ವರ್ ಅವರಿಗೂ ವಂಚಿಸಲು ಯತ್ನಿಸಿದ್ದ. ದೇವಸ್ಥಾನ ಕಟ್ಟೋದಿದೆ ನಾನು ಹಣ ಹಾಕಿದ್ದೇನೆ, ನೀವು ಸ್ವಲ್ಪ ಸಹಾಯ ಮಾಡಿ ಎಂದು ಹೇಳಿದ್ದ. ಇದಕ್ಕೆ ಸಮ್ಮತಿಸಿದ್ದ ಸಂಕೇಶ್ವರ್ ಹಣ ಕೊಡಲು ಮುಂದಾದಾಗ ಬೇರೆ ಅಕೌಂಟ್ ನಂಬರ್ ನೋಡಿ ನಕಲಿ ಎಂದು ಗೊತ್ತಾಗಿತ್ತು. ಬಳಿಕ ಹುಬ್ಬಳ್ಳಿಯ ಕೇಶವಪುರ ಠಾಣೆಯಲ್ಲಿ ಈ ಬಗ್ಗೆ ದೂರು ದಾಖಲಾಗಿತ್ತು. ಇಷ್ಟೇ ಅಲ್ಲದೆ ಮದ್ದೂರು, ಮಂಡ್ಯದಲ್ಲಿ ಹೋಟೆಲ್‌ಗಳಲ್ಲಿ ರೂಮ್ ಬುಕ್ ಮಾಡಿ ತಾನು ಜಿಲ್ಲಾಧಿಕಾರಿ ಎಂದು ಹೇಳಿ ಬಿಲ್ ಕೊಡದೆಯೂ ಹೋಗಿದ್ದಾನೆ ಎಂದು ಆರೋಪವಿದೆ.

ಜು.14 ರಿಂದ 16ರ ವರೆಗೆ ಕರಾವಳಿ ಭಾಗಕ್ಕೆ ಕಟ್ಟೆಚ್ಚರ ಘೋಷಣೆ

ರಾಜ್ಯದಲ್ಲಿ ಚುರುಕುಗೊಂಡ ಮುಂಗಾರು

ಬೆಂಗಳೂರು: ಕರಾವಳಿ ಕರ್ನಾಟಕದಲ್ಲಿ ಮುಂಗಾರು ಮಳೆ ಬಿರುಸುಗೊಂಡಿದ್ದು, ಆರೆಂಜ್ ಮತ್ತು ರೆಡ್ ಅಲರ್ಟ್ ಘೋಷಿಸಲಾಗಿದೆ.

ಮುಂದಿನ ಐದು ದಿನ ಕರಾವಳಿ ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳಿಗೆ ಹೈ ಅಲರ್ಟ್ ನೀಡಲಾಗಿದೆ. ನಾಳೆ ಮತ್ತು ನಾಡಿದ್ದು ರೆಡ್ ಅಲರ್ಟ್ ಇದ್ದರೆ, ಇಂದು ಜುಲೈ 15 ಮತ್ತು 16 ರಂದು ಆರೆಂಜ್ ಅಲರ್ಟ್ ಕೊಡಲಾಗಿದೆ. ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ ಜಿಲ್ಲೆಗಳಿಗೆ ಇಂದು ಯೆಲ್ಲೋ ಮತ್ತು ಮುಂದಿನ ನಾಲ್ಕು ದಿನ ಆರೆಂಜ್ ಅಲರ್ಟ್ ಕೊಡಲಾಗಿದೆ. ಹಾಸನ ಜಿಲ್ಲೆಗೆ ಜುಲೈ 14, 16 ರಂದು ಯೆಲ್ಲೋ ಮತ್ತು ಜುಲೈ 15 ಕ್ಕೆ ಆರೆಂಜ್ ಅಲರ್ಟ್ ನೀಡಲಾಗಿದೆ. ಮೈಸೂರು ಜಿಲ್ಲೆಗೆ ಜುಲೈ 14, 15 ರಂದು ಯೆಲ್ಲೋ, ದಾವಣಗೆರೆ ಜಿಲ್ಲೆಗೆ ಜುಲೈ 15 ಮತ್ತು 16 ರಂದು, ಚಿತ್ರದುರ್ಗ ಜಿಲ್ಲೆಗೆ 14ಕ್ಕೆ, ತುಮಕೂರು, ವಿಜಯನಗರ ಜಿಲ್ಲೆಗೆ ಜುಲೈ 15 ರಂದು ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ದಕ್ಷಿಣ ಗುಜರಾತ್ - ಉತ್ತರ ಕೇರಳದ ಕರಾವಳಿಯಲ್ಲಿ ಸಮುದ್ರಮಟ್ಟದಲ್ಲಿ ನೈಋತ್ಯ ಮುಂಗಾರು ಮಾರುತಗಳು ಇದ್ದು, ಸರಾಸರಿ 5.8 ಕಿಮೀ ಎತ್ತರದಲ್ಲಿ ಇದೆ.
-ಡಾ. ಎನ್ ಪುವಿಯರಸನ್,
ಬೆಂಗಳೂರು ಹವಾಮಾನ ಕೇಂದ್ರದ ಹಿರಿಯ ವಿಜ್ಞಾನಿ

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಒಂದು ಅಥವಾ ಎರಡು ಸ್ಥಳಗಳಲ್ಲಿ 30 ರಿಂದ 40 ಕಿಲೋಮೀಟರ್ ಪ್ರತಿ ಗಂಟೆಗೆ ಗಾಳಿ ಬೀಸಲಿದ್ದು, ಭಾರಿ ಮಳೆಯಾಗಲಿದೆ. ಉತ್ತರ ಒಳನಾಡು ಭಾಗದ ಬೆಳಗಾವಿ, ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ಒಂದು ಅಥವಾ ಎರಡು ಸ್ಥಳಗಳಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಹೇಳಿದೆ.

ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳಲ್ಲಿ ಭಾರಿ ಮಳೆ ಮತ್ತು ನಿರಂತರ ಗಾಳಿ ಇರಲಿದೆ. ಉತ್ತರ ಒಳನಾಡಿನ ಬಾಗಲಕೋಟೆ, ಬೀದರ್, ಧಾರವಾಡ, ಗದಗ್, ಹಾವೇರಿ, ಕೊಪ್ಪಳ, ರಾಯಚೂರು, ವಿಜಯಪುರ ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗಲಿದೆ. ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಹಾಸನ, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ತುಮಕೂರು, ವಿಜಯನಗರ ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ಸಾಧಾರಣ ಮಳೆಯಾಗಲಿದೆ ಎಂದಿದೆ. ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಸ್ಥಳಗಳಲ್ಲಿ ಮುಂದಿನ 48 ಗಂಟೆಗಳ ಕಾಲ ಸಾಮಾನ್ಯವಾಗಿ ಮೋಡ ಕವಿದ ಆಕಾಶ ಇರಲಿದ್ದು, ಹಗುರದಿಂದ ಸಾಧಾರಣ ಮಳೆಯಾಗಲಿದೆ. ನಿರಂತರ ಗಾಳಿ ಇರಲಿದೆ. ಗರಿಷ್ಠ ಮತ್ತು ಕನಿಷ್ಠ ತಾಪಮಾನವು ಕ್ರಮವಾಗಿ 29 ಡಿಗ್ರಿ ಮತ್ತು 21 ಡಿಗ್ರಿ ದಾಖಲಾಗಲಿದೆ.

ಅತ್ತೆ ಮನೆಯಲ್ಲಿ ಕಳ್ಳತನ ಮಾಡಿದ್ದ ಅಳಿಯನ ಬಂಧನ

ಬೆಂಗಳೂರು: ಅತ್ತೆ ಮನೆಯಲ್ಲಿಯೇ ಕಳ್ಳತನ ಮಾಡಿದ್ದ ಅಳಿಯನನ್ನು ರಾಜಗೋಪಾಲನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕುರುಬರಹಳ್ಳಿಯ ಪರಶುರಾಮ್(29) ಬಂಧಿತ. ಆರೋಪಿಯಿಂದ 3.80 ಲಕ್ಷ ರು. ಮೌಲ್ಯದ 70 ಗ್ರಾಂ ತೂಕದ ಚಿನ್ನಾಭರಣ ಜಪ್ತಿ ಮಾಡಲಾಗಿದೆ. ಜು.2 ರಂದು ಲಗ್ಗೆರೆ ರಾಜೀವ್‌ಗಾಂಧಿನಗರ ನಿವಾಸಿ ಸುವರ್ಣಮ್ಮ ಎಂಬುವವರ ಮನೆಯಲ್ಲಿ ಚಿನ್ನಾಭರಣ ಕಳ್ಳತನವಾಗಿತ್ತು. ಈ ಸಂಬಂಧ ದಾಖಲಾದ ದೂರಿನ ಮೇರೆಗೆ ತನಿಖೆ ಕೈಗೊಂಡು ಆರೋಪಿಯನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಪರಾಧ ಸುದ್ದಿಗಳು

ದೂರುದಾರೆ ಸುವರ್ಣಮ್ಮ ಹುಟ್ಟುಹಬ್ಬವಿದ್ದ ಹಿನ್ನೆಲೆಯಲ್ಲಿ ಜು.2ರಂದು ಹಿರಿಯ ಮಗಳು ರೇಣುಕಾ ಮತ್ತು ಅಳಿಯ ಪರಶುರಾಮ್ ಮನೆಗೆ ಬಂದಿದ್ದರು. ಬೆಳಗ್ಗೆ ಸುಮಾರು 10.45ಕ್ಕೆ ದೇವಸ್ಥಾನಕ್ಕೆ ತೆರಳುವಾಗ ಸುವರ್ಣಮ್ಮ ಮನೆಗೆ ಬೀಗ ಹಾಕಿದ್ದರು. ಈ ವೇಳೆ ಜತೆಯಲ್ಲೇ ಇದ್ದ ಮಗಳು ರೇಣುಕಾ ತಮ್ಮ ಬಳಿಯೇ ಬೀಗ ಕೀ ಇರಿಸಿಕೊಂಡಿದ್ದರು. ಈ ವೇಳೆ ಪರಶುರಾಮ್ ಪತ್ನಿಗೆ ಗೊತ್ತಾಗದಂತೆ ಮನೆಯ ಬೀಗ ಕೀ ತೆಗೆದುಕೊಂಡಿದ್ದಾನೆ. ಇತ್ತ ಪತ್ನಿ ಮತ್ತು ಅತ್ತೆ ದೇವಸ್ಥಾನಕ್ಕೆ ಹೋಗುತ್ತಿದ್ದಂತೆ ಪರಶುರಾಮ್ ಮನೆ ಬೀಗ ತೆರೆದು ಬೀರುವಿನಲ್ಲಿದ್ದ ಚಿನ್ನಾಭರಣ ಕಳ್ಳತನ ಮಾಡಿದ್ದಾನೆ. ಬಳಿಕ ಯಾರಿಗೂ ಅನುಮಾನಬಾರದಂತೆ ಮನೆಗೆ ಬೀಗ ಹಾಕಿಕೊಂಡು ದೇವಸ್ಥಾನಕ್ಕೆ ತೆರಳಿದ್ದಾನೆ. ಬಳಿಕ ಬೀಗದ ಕೀ ಅನ್ನು ಪತ್ನಿ ರೇಣುಕಾ ಬ್ಯಾಗ್‌ಗೆ ಇರಿಸಿದ್ದಾನೆ. ಬೆಳಗ್ಗೆ 11.45ಕ್ಕೆ ದೇವಸ್ಥಾನದಿಂದ ಮನೆಗೆ ವಾಪಾಸ್ ಬರಲಾಗಿದೆ. ಈ ವೇಳೆ ರೇಣುಕಾ ಹಾಗೂ ಪರಶುರಾಮ್, ಮಕ್ಕಳನ್ನು ಶಾಲೆಯಿಂದ ಕರೆದುಕೊಂಡು ಬರಬೇಕು ಎಂದು ಕುರುಬರಹಳ್ಳಿಗೆ ತೆರಳಿದ್ದಾರೆ.

ತಪ್ಪೊಪ್ಪಿಕೊಂಡ ಪರಶುರಾಮ್

ಮಧ್ಯಾಹ್ನ ಸುವರ್ಣಮ್ಮ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಚಿನ್ನಾಭರಣ ಧರಿಸಲು ಬೀರು ತೆರೆದು ನೋಡಿದಾಗ ಚಿನ್ನಾಭರಣ ಇಲ್ಲದಿರುವುದು ಕಂಡು ಬಂದಿದೆ. ಬಳಿಕ ದೇವಸ್ಥಾನಕ್ಕೆ ಹೋಗುವಾಗ ಮಗಳ ಬಳಿ ಮನೆ ಬೀಗದ ಕೀ ಇದುದ್ದರಿಂದ ಆಕೆಯ ಬಗ್ಗೆ ಅನುಮಾನಗೊಂಡು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಬಳಿಕ ಪೊಲೀಸರು ರೇಣುಕಾ ಮತ್ತು ಪರಶುರಾಮ್‌ನನ್ನು ಕರೆಸಿ ವಿಚಾರಣೆ ಮಾಡಿದಾಗ, ಪರಶುರಾಮ್ ತಾನೇ ಕಳ್ಳತನ ಮಾಡಿದ್ದಾಗಿ ತಪ್ಪೊಪ್ಪಿಕೊಂಡಿದ್ದಾನೆ. ಈ ಹಿನ್ನೆಲೆಯಲ್ಲಿ ಆತನನ್ನು ಬಂಧಿಸಿ, ಚಿನ್ನಾಭರಣ ಜಪ್ತಿ ಮಾಡಲಾಗಿದೆ. ಸದ್ಯ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಕ್ರಮ ಫ್ಲೆಕ್ಸ್, ಬ್ಯಾನರ್: ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡ ಹೈಕೋರ್ಟ್

ಬೆಂಗಳೂರು: ರಾಜಧಾನಿ ಬೆಂಗಳೂರು ನಗರದಲ್ಲಿ ಅಕ್ರಮವಾಗಿ ಫ್ಲೆಕ್ಸ್ ಮತ್ತು ಹೋರ್ಡಿಂಗ್ಸ್‌ಗಳನ್ನು ಅಳವಡಿಸಿರುವ ಕುರಿತಂತೆ ಮಾಧ್ಯಮಗಳ ವರದಿ ಆಧರಿಸಿ, ಹೈಕೋರ್ಟ್ ಸ್ವಯಂಪ್ರೇರಿತ ಸಾರ್ವಜನಿಕ ಅರ್ಜಿ ದಾಖಲಿಸಿಕೊಂಡಿದೆ.

ಶುಕ್ರವಾರ ಬೆಳಗ್ಗೆ ವಿಚಾರಣೆ ಪ್ರಾರಂಭವಾಗುತ್ತಿದ್ದಂತೆ ಮಾಧ್ಯಮಗಳಲ್ಲಿ ಪ್ರಕಟವಾಗಿರುವ ವರದಿ ಪ್ರಸ್ತಾಪಿಸಿದ ಮುಖ್ಯನ್ಯಾಯಮೂರ್ತಿ ಎನ್. ವಿ ಅಂಜಾರಿಯಾ ಮತ್ತು ನ್ಯಾಯಮೂರ್ತಿ ಕೆ.ವಿ. ಅರವಿಂದ ಅವರಿದ್ದ ನ್ಯಾಯಪೀಠ ಈ ಅರ್ಜಿ ದಾಖಲಿಸಿಕೊಂಡಿತು.

ಅಲ್ಲದೇ, ನ್ಯಾಯಾಂಗ ಆದೇಶಗಳನ್ನು ಉಲ್ಲಂಘಿಸಿದ ಪರಿಣಾಮ ನ್ಯಾಯಾಂಗ ನಿಂದನೆ ಕ್ರಮವನ್ನು ಏಕೆ ಪ್ರಾರಂಭಿಸಬಾರದು ಎಂಬುದಕ್ಕೆ ಜುಲೈ 26 ರ ಒಳಗಾಗಿ ಪ್ರತಿಕ್ರಿಯಿಸುವಂತೆ ಬಿಬಿಎಂಪಿ ಮತ್ತು ಪೊಲೀಸ್ ಆಯುಕ್ತರಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆ ಮುಂದೂಡಿತು. ರಾಜ್ಯದಲ್ಲಿ 6.8 ಲಕ್ಷ ಅಕ್ರಮ ಜಾಹೀರಾತುಗಳನ್ನು ಅಳವಡಿಸಲಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ಜತೆಗೆ, ಅಕ್ರಮ ಜಾಹೀರಾತುಗಳ ಅಳವಡಿಕೆ ಮುಂದುವರಿದಿದ್ದು, ಇದರಿಂದಾಗಿ ಪಾದಚಾರಿಗಳಿಗೆ ತೊಂದರೆಯಾಗುತ್ತಿದ್ದು, ವಾಹನ ದಟ್ಟಣೆಗೂ ಕಾರಣವಾಗುತ್ತಿದೆ. ಹೈಕೋರ್ಟ್ ಆದೇಶವನ್ನು ಸರಕಾರದ ಪ್ರಾಧಿಕಾರಗಳು ಪಾಲನೆ ಮಾಡದೇ ನಿರ್ಲಕ್ಷ್ಯವಹಿಸುತ್ತಿವೆ ಎಂದು ಫ್ಲೆಕ್ಸ್‌ಗಳ ಹಾವಳಿ ತಡೆಗಟ್ಟಲು ವಿಫಲವಾಗಿರುವ ಪೊಲೀಸ್ ಆಯುಕ್ತರ ಕ್ರಮಕ್ಕೆ ತೀವ್ರ ತರಾಟೆಗೆ ತೆಗೆದುಕೊಂಡಿತು.

ಈ ವೇಳೆ, ಸರಕಾರದ ಪರ ವಾದ ಮಂಡಿಸಿದ ಹೆಚ್ಚುವರಿ ಅಡ್ವೋಕೇಟ್ ಜನರಲ್ ಪ್ರತಿಮಾ ಹೊನ್ನಾಪುರ, ರಾಜ್ಯ ಸರಕಾರದ ಅನುಮೋದನೆಯೊಂದಿಗೆ ಜಾಹೀರಾತು ನಿಯಮ ರೂಪಿಸಲಾಗಿದೆ. ಈ ಸಂಬಂಧ ಬಿಬಿಎಂಪಿ ಕರಡು ಬೈಲಾ ಪ್ರಕಟಿಸಬೇಕಾಗಿದೆ ಎಂದು ಮಾಹಿತಿ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಪೀಠ, ಪ್ರತಿಯೊಂದು ಅಕ್ರಮ ಜಾಹೀರಾತು ತಡೆಗೆ ವಿಫಲವಾದಲ್ಲಿ 1 ಲಕ್ಷ ರು. ದಂಡ ನೀಡಬೇಕು ಎಂದು ಹೈಕೋರ್ಟ್ ಆದೇಶವಿದೆ. ಆದರೂ ಕೋರ್ಟ್ ಆದೇಶ ಪಾಲಿಸಲು ಬಿಬಿಎಂಪಿ ನಿರ್ಲಕ್ಷ್ಯ ವಹಿಸುತ್ತಿದೆ. ಫ್ಲೆಕ್ಸ್ ಹಾವಳಿ ತಡೆಯುವುದಕ್ಕಾಗಿ ಸರಕಾರದ ಪ್ರಾಧಿಕಾರಗಳು ಸದಾ ಸನ್ನದ್ಧರಾಗಿರಬೇಕು ಎಂದು ತಿಳಿಸಿ ವಿಚಾರಣೆಯನ್ನು ಮುಂದೂಡಿತು.

ಬಿಬಿಎಂಪಿ ಪರ ವಕೀಲರು, ಅಕ್ರಮವಾಗಿ ಜಾಹೀರಾತುಗಳ ಅಳವಡಿಸಿರುವ ಸಂಬಂಧ ಹಲವು ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ ಎಂದು ವಿವರಿಸಿದರು. ಇದಕ್ಕೆ ಪೀಠ, ಬಿಬಿಎಂಪಿ ತನ್ನ ವೇಗವನ್ನು ಹೆಚ್ಚಳ ಮಾಡಬೇಕು ಎಂದು ತಿಳಿಸಿ ವಿಚಾರಣೆ ಮುಂದೂಡಿತು.

ರೇವಣ್ಣ ಜಾಮೀನು ರದ್ದು ಕೋರಿದ್ದ ಅರ್ಜಿ ವಿಚಾರಣೆ ಮುಂದೂಡಿಕೆ

ಬೆಂಗಳೂರು: ಅತ್ಯಾಚಾರಕ್ಕೆ ಒಳಗಾದ ಸಂತ್ರಸ್ತೆ ಅಪಹರಣ ಪ್ರಕರಣದಲ್ಲಿ ಜೆಡಿಎಸ್ ಶಾಸಕ ಎಚ್.ಡಿ. ರೇವಣ್ಣಗೆ ವಿಚಾರಣಾಧೀನ ನ್ಯಾಯಾಲಯ ಮಂಜೂರು ಮಾಡಿರುವ ಜಾಮೀನು ರದ್ದು ಕೋರಿ ಸರಕಾರ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಮುಂದೂಡಿದೆ.



ಜತೆಗೆ, ಸಂತ್ರಸ್ತೆ ಅಪಹರಣ ಪ್ರಕರಣದಲ್ಲಿ ಎರಡನೇ ಆರೋಪಿಯಾಗಿರುವ ಸತೀಶ್ ಬಾಬು ಅಲಿಯಾಸ್ ಸತೀಶ್ ಬಾಬಣ್ಣ, ಕೆ ಎ ರಾಜಗೋಪಾಲ್, ಎಚ್.ಕೆ. ಸುಜಯ್, ಎಚ್.ಎನ್. ಮಧು, ಎಸ್ ಟಿ ಕೀರ್ತಿ ಜಾಮೀನು ಕೋರಿ ಪ್ರತ್ಯೇಕವಾಗಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ಹೈಕೋರ್ಟ್ ಜುಲೈ 19ಕ್ಕೆ ಮುಂದೂಡಿದೆ.

ವಿಚಾರಣೆ ಆರಂಭವಾಗುತ್ತಿದ್ದಂತೆ ವಿಶೇಷ ಸರಕಾರಿ ಅಭಿಯೋಜಕರಾದ ಪ್ರೊ. ರವಿವರ್ಮ ಕುಮಾರ್, ಎಲ್ಲಾ ಅರ್ಜಿಗಳ ಆಕ್ಷೇಪಣೆ ಸಿದ್ಧವಾಗಿದೆ. ನಾವು ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ವರದಿಗಾಗಿ ಕಾಯುತ್ತಿದ್ದೇವೆ. ಮುಂದಿನ ಬುಧವಾರದ ವೇಳೆಗೆ ಆಕ್ಷೇಪಣೆ ಸಲ್ಲಿಕೆ ಮಾಡಲಾಗುವುದು. ಜುಲೈ 19ರಂದು ವಿಚಾರಣೆ ಕೈಗೆತ್ತಿಕೊಳ್ಳಬಹುದು ಎಂದರು.

ಅರ್ಜಿದಾರರ ಪರವಾಗಿ ವಾದಿಸಿದ ವಕೀಲರು, ಈ ಪ್ರಕರಣಕ್ಕೆ ಎಫ್‌ಎಸ್‌ಎಲ್ ವರದಿಯ ಅಗತ್ಯವಿಲ್ಲ. ಮೊದಲ ಆರೋಪಿ ಎಚ್.ಡಿ. ರೇವಣ್ಣ ಈಗಾಗಲೇ ಜಾಮೀನಿನ ಮೇಲೆ ಹೊರಗಿದ್ದಾರೆ. ಅರ್ಜಿದಾರರು 2 ತಿಂಗಳಿಂದ ಕಸ್ಟಡಿಯಲಿದ್ದಾರೆ. ಅವರೆಲ್ಲರೂ ಕೃಷಿಕರಾಗಿದ್ದಾರೆ. ಏಳನೇ ಆರೋಪಿ ಕೆ ಎ ರಾಜಗೋಪಾಲ್ ಅವರಿಗೆ 71 ವರ್ಷ ವಯಸ್ಸಾಗಿದ್ದು, ಅವರಿಗೆ ಓಡಾಡಲು ಕಷ್ಟವಾಗಿದೆ ಎಂದು ವಿವರಿಸಿದರು.

@vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಶನಿವಾರ 13.07.2024 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಜೇಮ್ಸ್ ಆಂಡರ್ಸನ್ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ

ಇಂಗ್ಲೆಂಡ್‌ನ ಹಿರಿಯ ವೇಗಿ ಜೇಮ್ಸ್ ಆಂಡರ್ಸನ್ ಅವರು ವೆಸ್ಟ್ ಇಂಡೀಸ್ ವಿರುದ್ಧದ ಮೊದಲನೇ ಟೆಸ್ಟ್ ಪಂದ್ಯದ ಮೂಲಕ ತಮ್ಮ ಎರಡು ದಶಕಗಳ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ. ಇಂಗ್ಲೆಂಡ್ ಗೆಲುವು ಸಾಧಿಸಿದ ಈ ಪಂದ್ಯದಲ್ಲಿ ಜೇಮ್ಸ್ ಆಂಡರ್ಸನ್ 4 ವಿಕೆಟ್‌ಗಳನ್ನು ಕಬಳಿಸಿದರು. ಆ್ಯಂಡರ್ಸನ್ ಒಟ್ಟು 188 ಟೆಸ್ಟ್ ಪಂದ್ಯಗಳಿಂದ ಅವರು 704 ವಿಕೆಟ್‌ಗಳನ್ನು ಪಡೆದಿದ್ದಾರೆ. ಮೂರು ಬಾರಿ 10 ವಿಕೆಟ್ ಸಾಧನೆ ಮಾಡಿದ್ದರೆ, 32 ಬಾರಿ 5 ವಿಕೆಟ್ ಸಾಧನೆ ಮಾಡಿದ್ದಾರೆ.

ಪುಟ ತೆರೆದಂತೆ...

ಮೋದಿ ಪುಟಿನ್ ಭೇಟಿ ರಾಜತಾಂತ್ರಿಕ ಸಂದೇಶ
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
ಸಂ.ಪುಟ | 6

ಡೆಂಘೀ ಜ್ವರದಲ್ಲಿ ಆಯುರ್ವೇದೋಕ್ತ ಉಪಚಾರ

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
ಸಂ.ಗಮ | 7

ಮಾತಂದ್ರೆ ಮಾತು

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ತಪ್ಪು ಮಾಡಿದ್ದರೆ ಒಪ್ಪಿಕೊಂಡು ಬಿಡಬೇಕು. ಅದು ಅಲ್ಲಿಗೇ ಮುಗಿದುಹೋಗುತ್ತದೆ. ಒಂದು ಸುಳ್ಳು ಮುಚ್ಚಿಡುವುದಕ್ಕೆ ಮತ್ತಷ್ಟು ಸುಳ್ಳು ಹೇಳಬಾರದು. ಅವರು ತಪ್ಪು ಮಾಡಿದ್ದರೆ ಖಂಡಿತ ನಮಗೂ ಮುಜುಗರ ಆಗುತ್ತದೆ. ಸಚಿವರು, ಶಾಸಕರು ಇದರಲ್ಲಿ ಭಾಗಿಯಾಗಿದ್ದರೆ ಸರಕಾರಕ್ಕೆ ಅದರಿಂದ ಕಳಂಕ.

ಸತೀಶ ಜಾರಕಿಹೊಳಿ
ಲೋಕೋಪಯೋಗಿ ಸಚಿವ

ದಾರಿದೀಪೋಕ್ತಿ

ಒಂದು ಸಮಸ್ಯೆ ಇಬ್ಬರಿಗೆ ಎದುರಾದರೆ ಅದನ್ನು ಅವರು ನಿಭಾಯಿಸುವ ರೀತಿ ಒಂದೇ ರೀತಿ ಆಗಿರುವುದಿಲ್ಲ, ತಮ್ಮ ಮೂಗಿನ ನೇರಕ್ಕೆ ಸಮಸ್ಯೆಗಳನ್ನು ಅರ್ಥೈಸಿಕೊಂಡು ಅದನ್ನು ನಿಭಾಯಿಸಲು ಮುಂದಾಗುತ್ತಾರೆ. ಅಂದರೆ ಒಂದು ಸಮಸ್ಯೆಗೆ ನಾವು ಹೇಗೆ ಸ್ಪಂದಿಸುತ್ತೇವೆ ಎಂಬುದು ಮುಖ್ಯ. ಯಾವ ಮಾರ್ಗ ಅನುಸರಿಸಬೇಕು ಎಂಬುದು ಮುಖ್ಯ.

ವಕ್ರತುಂಡೋಕ್ತಿ

ಬಡವರಂತೆ ಕಾಣುವುದು ಸುಲಭವಲ್ಲ, ಅದಕ್ಕೂ ಸಾಕಷ್ಟು ಖರ್ಚಾಗುತ್ತದೆ.

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ: ವಿಚಾರಣೆ ಬಳಿಕ ಮಾಜಿ ಸಚಿವ ಇ.ಡಿ. ಕಸ್ಟಡಿಗೆ | ಆಪ್ತ ಸಹಾಯಕರ ತಪ್ಪೊಪ್ಪಿಗೆ ಹೇಳಿಕೆಯಲ್ಲಿ ಇಬ್ಬರು ಶಾಸಕರು ಹೆಸರು ಬಯಲು

ನಾಗೇಂದ್ರ ಬಂಧನ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ ಬಹುಕೋಟಿ ಹಗರಣ ಸಂಬಂಧ ಮಾಜಿ ಸಚಿವ ಬಿ. ನಾಗೇಂದ್ರ ಅವರನ್ನು ಶುಕ್ರವಾರ ಜಾರಿ ನಿರ್ದೇಶನಾಲಯ (ಇ.ಡಿ) ಕೊನೆಗೂ ಬಂಧಿಸಿದೆ.

ಪ್ರಕರಣ ಸಂಬಂಧ ಜಾರಿ ನಿರ್ದೇಶನಾಲಯದ ನಾಲ್ವರು ಅಧಿಕಾರಿಗಳ ತಂಡ ಬುಧವಾರ ನಾಗೇಂದ್ರ ಮತ್ತು ಶಾಸಕ ಬಸವನಗೌಡ ದದ್ದಲ್ ಅವರ ನಿವಾಸ ಸೇರಿ 18 ಕಡೆಗಳಲ್ಲಿ ದಾಳಿ ನಡೆಸಿತ್ತು. ಬಳಿಕ ಮಾಜಿ ಸಚಿವರನ್ನು ವಶಕ್ಕೆ ಪಡೆದ ಪಡೆದ ಅಧಿಕಾರಿಗಳು ಸತತ ವಿಚಾರಣೆಗೆ ಒಳಪಡಿಸಿದ್ದರು. ಗುರುವಾರ ದಿನವಿಡೀ ನಾಗೇಂದ್ರ ಹಾಗೂ ಕುಟುಂಬದವರನ್ನು ಮನೆಯಿಂದ ಹೊರಬಿಡದೆ ಇಡಿ ಅಧಿಕಾರಿಗಳು ನಿರಂತರವಾಗಿ ಪ್ರಶ್ನೆ ಮಾಡಿದ್ದರು. ಶುಕ್ರವಾರ ಶಾಂತಿನಗರದ ಕಚೇರಿಗೆ ಕರೆತಂದ ಅಧಿಕಾರಿಗಳು ಮತ್ತೆ ವಿಚಾರಣೆಗೆ ಗುರಿಪಡಿಸಿದ್ದರು. ವಾಲ್ಮೀಕಿ ನಿಗಮದಲ್ಲಿ ನಡೆದ 185 ಕೋಟಿ ರುಪಾಯಿಗಳ ಅವ್ಯವಹಾರದ ಬಗ್ಗೆ ತಮಗೆ ಯಾವುದೇ ಸುಳಿವು ಇರಲಿಲ್ಲ ಎಂದೇ ನಾಗೇಂದ್ರ ಹೇಳಿದ್ದರು. ಆದರೆ ನಾಗೇಂದ್ರ ಅವರ ಆಪ್ತ ಸಹಾಯಕ ಹರೀಶ್ ಹೇಳಿಕೆಯಿಂದಾಗಿ ಮಾಜಿ ಸಚಿವರ ಕೈವಾಡದ ಬಗ್ಗೆ ಅನುಮಾನ ಮೂಡಿದ್ದು ಸುದೀರ್ಘ ವಿಚಾರಣೆ ಬಳಿಕ ಅವರನ್ನು ಇ.ಡಿ. ಅಧಿಕಾರಿಗಳು ಬಂಧಿಸಿದ್ದಾರೆ.

ನಾಗೇಂದ್ರ ಆಪ್ತ ಸಹಾಯಕ ಹರೀಶ್ ಗುರುವಾರದಿಂದ ಇ.ಡಿ ವಶದಲ್ಲಿದ್ದಾರೆ. ಯೂನಿಯನ್ ಬ್ಯಾಂಕ್‌ನಲ್ಲಿ ಸುಳ್ಳು ದಾಖಲೆ ನೀಡಿ ಅಕ್ರಮ ಖಾತೆ ತೆರೆದು ಕೋಟ್ಯಂತರ ರುಪಾಯಿ ನಿಗಮದ ಹಣವನ್ನು ವರ್ಗಾಯಿಸಿರುವ ಬಗ್ಗೆ ಹರೀಶ್ ಹೇಳಿಕೆ ನೀಡಿದ್ದಾರೆ ಎನ್ನಲಾಗಿದ್ದು, ಈ ಸಂಬಂಧ ತನಿಖಾ ಸಂಸ್ಥೆಗೆ ಹಲವು ಸಾಕ್ಷಿಗಳು ಲಭ್ಯವಾಗಿವೆ. ಬ್ಯಾಂಕ್ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲನೆ ಮಾಡಿದಾಗಲೂ, ಹರೀಶ್ ಹಾಗೂ ಶಾಸಕ ದದ್ದಲ್ ಅವರ ಮಾಜಿ ಆಪ್ತ ಸಹಾಯಕ ಪಂಪಣ್ಣ ಅಲ್ಲಿಗೆ ಬಂದು ಹೋಗಿರುವ ದಾಖಲೆ ಲಭ್ಯವಾಗಿದೆ. ಅಕ್ರಮ ಬ್ಯಾಂಕ್ ಖಾತೆ ತೆರೆಯುವ ಸಂಬಂಧ 50 ಲಕ್ಷ ಡೀಲ್ ನಡೆಸಿರುವ ಕುರಿತು ಬಂಧಿತ ಬ್ಯಾಂಕ್ ಅಧಿಕಾರಿಗಳು ಬಾಯಿ ಬಿಟ್ಟಿದ್ದಾರೆ. ಹೀಗಾಗಿ ಅಂತಿಮವಾಗಿ ತನಿಖೆಯ ಉರುಳು ನಾಗೇಂದ್ರ ಕೊರಳಿಗೆ ಸುತ್ತಿಕೊಂಡಿದೆ.

→ 4

ಏನಿದು ಪ್ರಕರಣ?

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಲೆಕ್ಕಪರಿಶೋಧಕರಾಗಿದ್ದ ಚಂದ್ರಶೇಖರನ್ ಅವರು ಆತ್ಮಹತ್ಯೆ ಮಾಡಿಕೊಂಡ ಬೆನ್ನಲ್ಲೇ ನಿಗಮದಲ್ಲಿ ಕೋಟ್ಯಂತರ ರುಪಾಯಿ ಅವ್ಯವಹಾರ ನಡೆದಿರುವುದು ಬೆಳಕಿಗೆ ಬಂದಿತ್ತು. ಡೆತ್ ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದ ಚಂದ್ರಶೇಖರನ್, ನಿಗಮದಲ್ಲಿ ಅಕ್ರಮ ಹಣ ವರ್ಗಾವಣೆ ಹಾಗೂ ಅನುದಾನದ ದುರುಪಯೋಗದ ಆರೋಪ ಮಾಡಿದ್ದರು. ಡೆತ್ ನೋಟ್‌ನಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಚಿವರಾಗಿದ್ದ ಶಾಸಕ ಬಿ.ನಾಗೇಂದ್ರ ಅವರ ಹೆಸರನ್ನೂ ಉಲ್ಲೇಖಿಸಿದ್ದರು. ಈ ಹಿನ್ನೆಲೆಯಲ್ಲಿ ಬಿ.ನಾಗೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಪ್ರತಿಪಕ್ಷಗಳು ಒತ್ತಾಯಿಸಿದ್ದವು. ಬಳಿಕ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಎಸ್‌ಐಟಿ ದದ್ದಲ್ ಹಾಜರ್

ಶಾಸಕ ಬಸನಗೌಡ ದದ್ದಲ್ ಅವರು ಎಸ್‌ಐಟಿ ಎದುರು ವಿಚಾರಣೆಗೆ ಹಾಜರಾಗಿ ಅಚ್ಚರಿ ಮೂಡಿಸಿದರು. ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು ಹಗರಣದ ಬಗ್ಗೆ ದದ್ದಲ್ ಅವರಿಗೆ ಪ್ರಶ್ನೆಗಳನ್ನು ಕೇಳಿ ಮಾಹಿತಿಗಳನ್ನು ಪಡೆದುಕೊಂಡರು. ಬುಧವಾರ ಇ.ಡಿ ಅಧಿಕಾರಿಗಳು ದದ್ದಲ್ ಅವರ ಬೆಂಗಳೂರಿನ ಯಲಹಂಕದ ನಿವಾಸ, ಕಚೇರಿ ಹಾಗೂ ರಾಯಚೂರಿನ ನಿವಾಸ ಸೇರಿದಂತೆ ಹಲವೆಡೆ ದಾಳಿ ಮಾಡಿ ಶೋಧ ನಡೆಸಿದ್ದರು. ಗುರುವಾರ ಶಾಸಕರ ಸಮ್ಮುಖದಲ್ಲಿಯೇ ಆಪ್ತರು ಸೇರಿದಂತೆ ಹಲವರನ್ನು ಇ.ಡಿ ಅಧಿಕಾರಿಗಳು ವಿಚಾರಣೆ ನಡೆಸಿದ್ದರು. ಇ.ಡಿ. ಬಂಧನದಿಂದ ತಪ್ಪಿಸಿಕೊಳ್ಳಲು ಶಾಸಕ ದದ್ದಲ್ ಅವರು ಶುಕ್ರವಾರ ಬೆಳಿಗ್ಗೆಯೇ ಎಸ್‌ಐಟಿ ಎದುರು ವಿಚಾರಣೆಗೆ ಹಾಜರಾಗಿದ್ದಾರೆ ಎನ್ನಲಾಗುತ್ತಿದೆ.

ರಿಷಬ್ ಅತ್ಯುತ್ತಮ ನಟ ಚಾರ್ಲಿಗೆ ಪ್ರಶಸ್ತಿಯ ಗರಿ

ಫಿಲ್ಮ್ ಫೇರ್ ಪ್ರಶಸ್ತಿ ಪ್ರಕಟ

ಬೆಂಗಳೂರು: 2023ನೇ ಸಾಲಿನ ಫಿಲ್ಮ್‌ಫೇರ್ ಪ್ರಶಸ್ತಿ ಘೋಷಣೆಯಾಗಿದೆ. ಈ ಸಾಲಿನಲ್ಲಿ ಹಲವು ಕನ್ನಡದ ಹಲವು ಚಿತ್ರಗಳು ಪ್ರಶಸ್ತಿ ಪಡೆದುಕೊಂಡಿವೆ. ಅತ್ಯುತ್ತಮ ನಟ, ನಟಿಯರು, ನಿರ್ದೇಶಕರು, ಸಿನಿಮಾಗಳು, ಸಂಗೀತ ನಿರ್ದೇಶಕರು ಹಾಗೂ ತಂತ್ರಜ್ಞರಿಗೆ ಹಲವು ವಿಭಾಗಗಳಲ್ಲಿ ಪ್ರಶಸ್ತಿ ಘೋಷಿಸಲಾಗಿದೆ. ಕಾಂತಾರ ಸಿನಿಮಾ ಪ್ರಶಸ್ತಿಯಲ್ಲಿ ಸಿಂಹಪಾಲು ಪಡೆದಿದೆ. ಕಾಂತಾರದ ಅದ್ಭುತ ನಟನೆಗೆ ರಿಷಬ್ ಶೆಟ್ಟಿ ಅತ್ಯುತ್ತಮ ನಟ ಪ್ರಶಸ್ತಿ ಪಡೆದರೆ, ಚಾರ್ಲಿ 777 ಚಿತ್ರದ ನಿರ್ದೇಶನಕ್ಕಾಗಿ ಕಿರಣ್‌ರಾಜ್ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ ಮುಡುಗೇರಿ ಸಿಕೊಂಡಿದ್ದಾರೆ.

- ಅತ್ಯುತ್ತಮ ಸಿನಿಮಾ: ಕಾಂತಾರ
- ಅತ್ಯುತ್ತಮ ನಿರ್ದೇಶಕ: ಕಿರಣ್ ರಾಜ್ ಕೆ (777 ಚಾರ್ಲಿ)
- ಅತ್ಯುತ್ತಮ ನಟ: ರಿಷಬ್ ಶೆಟ್ಟಿ (ಕಾಂತಾರ)
- ಅತ್ಯುತ್ತಮ ನಟಿ: ಚೈತ್ರಾ ಆಚಾರ್ (ತಲೆದಂಡ)
- ಅತ್ಯುತ್ತಮ ಚಿತ್ರ: (ವಿಮರ್ಶಾತ್ಮಕ) ಧರಣಿ ಮಂಡಲ ಮಧ್ಯದೊಳಗೆ (ಶ್ರೀಧರ್ ಶಿಕಾರಿಪುರ)
- ಅತ್ಯುತ್ತಮ ನಟಿ: (ವಿಮರ್ಶಕರ ಮೆಚ್ಚಿನ) ಸಪ್ತಮಿಗೌಡ (ಕಾಂತಾರ)
- ಅತ್ಯುತ್ತಮ ನಟ: (ವಿಮರ್ಶಕರ ಮೆಚ್ಚಿನ) ನವೀನ್ ಶಂಕರ್ (ಧರಣಿ ಮಂಡಲ ಮಧ್ಯದೊಳಗೆ)
- ಅತ್ಯುತ್ತಮ ಪೋಷಕ ನಟ: ಅಚ್ಯುತ್ ಕುಮಾರ್ (ಕಾಂತಾರ)
- ಅತ್ಯುತ್ತಮ ಪೋಷಕ ನಟಿ: ಎನ್.ಮಂಗಳಾ (ತಲೆದಂಡ)
- ಅತ್ಯುತ್ತಮ ಗಾಯಕ: ಸಾಯಿ ವಿಘ್ನೇಶ್ (ವರಾಹ ರೂಪಂ-ಕಾಂತಾರ)
- ಅತ್ಯುತ್ತಮ ಗಾಯಕಿ: ಸುನಿಧಿ ಚೌಹಾಣ್ (ರಾ ರಾ ರಕ್ಕಮ್ಮ-ವಿಕ್ರಾಂತ್ ರೋಣ)
- ಅತ್ಯುತ್ತಮ ಸಂಗೀತ ನಿರ್ದೇಶನ: ಅಜನೀಶ್.ಬಿ. ಲೋಕನಾಥ್ (ಕಾಂತಾರ)
- ಅತ್ಯುತ್ತಮ ಸಾಹಿತ್ಯ: ವಿ.ನಾಗೇಂದ್ರ ಪ್ರಸಾದ್ (ಬೆಳಕಿನ ಕವಿತೆ-ಬನಾರಸ್)

ಸಿಡಬ್ಲ್ಯುಆರ್‌ಸಿ ಆದೇಶ ಪಾಲನೆ ಕುರಿತು ಚರ್ಚೆ ಮೇಲ್ಮನವಿ ಸಲ್ಲಿಸಲು ರಾಜ್ಯ ಸರಕಾರ ತೀರ್ಮಾನ

ಸರ್ವಪಕ್ಷ ಸಭೆ ನಾಳೆ

ಬೆಂಗಳೂರು: ಕೆಆರ್‌ಎಸ್ ಸೇರಿದಂತೆ ಕಾವೇರಿ ನದಿಪಾತ್ರದ ಜಲಾಶಯಗಳು ತುಂಬುವ ಮೊದಲೇ, ನೀರು ಬಿಡುಗಡೆಗೆ ಕಾವೇರಿ ನೀರು ನಿಯಂತ್ರಣ ಸಮಿತಿಯ ಆದೇಶವನ್ನು ಪ್ರಶ್ನಿಸಿ, ಕಾವೇರಿ ನಿರ್ವಹಣಾ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸುವುದರೊಂದಿಗೆ, ರಾಜ್ಯದ ಮುಂದಿನ ನಡೆ ಚರ್ಚಿಸಲು ಭಾನುವಾರ ಸರ್ವಪಕ್ಷ ಸಭೆಯನ್ನು ಕರೆಯಲು ಸರಕಾರ ತೀರ್ಮಾನಿಸಿದೆ.

- ಈ ಬಾರಿ ವಾಡಿಕೆ ಮಳೆಯಾಗುವುದೆಂಬ ಮುನ್ಸೂಚನೆಯಿದ್ದರೂ ಶೇ.28ರಷ್ಟು ಒಳಹರಿವಿನ ಕೊರತೆ ಇದೆ
- ಕಾವೇರಿ ಜಲಾನಯನದ ಪ್ರಮುಖ ಅಣೆಕಟ್ಟುಗಳಲ್ಲಿ ಸರಾಸರಿ ಶೇ.62ರಷ್ಟು ಮಾತ್ರ ನೀರಿನ ಲಭ್ಯತೆ ಇದೆ
- ಹಾರಂಗಿ ಶೇ.73, ಹೇಮಾವತಿ ಶೇ.55, ಕೆಆರ್‌ಎಸ್ ಶೇ.54, ಕಬಿನಿಯಲ್ಲಿ ಶೇ.96ರಷ್ಟು ನೀರಿನ ಪ್ರಮಾಣ

ಗೃಹ ಕಚೇರಿ ಕೃಷ್ಣದಲ್ಲಿ ನಡೆದ ತುರ್ತು ಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ನೀರಾವರಿ ಇಲಾಖೆ ಹಿರಿಯಧಿಕಾರಿಗಳೊಂದಿಗೆ ಚರ್ಚಿಸಿದ ಬಳಿಕ ಈ ತೀರ್ಮಾನಕ್ಕೆ ಬರಲಾಗಿದೆ. ಸರ್ವಪಕ್ಷ ಸಭೆಯನ್ನು ಕರೆಯುವ ಬಗ್ಗೆ ಸಭೆಯ ಬಳಿಕ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಈ ಬಾರಿ ವಾಡಿಕೆ ಮಳೆಯಾಗುವುದೆಂಬ ಮುನ್ಸೂಚನೆಯಿದ್ದರೂ ಶೇ.28ರಷ್ಟು ಒಳಹರಿವಿನ ಕೊರತೆ ಇದೆ. ಇದನ್ನು ಸಮಿತಿ ಮುಂದೆ ಸ್ಪಷ್ಟವಾಗಿ ಹೇಳಿದ್ದೆವು. ಇದರೊಂದಿಗೆ ಜುಲೈ ಅಂತ್ಯದವರೆಗೆ ಯಾವುದೇ ತೀರ್ಮಾನ ಮಾಡದಂತೆ ಮನವಿ ಮಾಡಿದ್ದೆವು. ಆದರೂ ಜುಲೈ 12 ರಿಂದ ಪ್ರತಿದಿನ ಒಂದು ಟಿಎಂಸಿ ನೀರು ಬಿಡುಗಡೆ ಮಾಡುವಂತೆ ತಿಳಿಸಿದ್ದಾರೆ.

→ 4

ನೀರಿನ ಕೊರತೆ ಇದೆ

ಸಭೆಯ ಬಳಿಕ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಾವೇರಿ ಜಲಾನಯನದ ಪ್ರಮುಖ ಅಣೆಕಟ್ಟುಗಳಲ್ಲಿ ಸರಾಸರಿ ಶೇ.62ರಷ್ಟು ಮಾತ್ರ ನೀರಿನ ಲಭ್ಯತೆ ಇದೆ. ಸುಮಾರು 19 ಟಿಎಂಸಿಯಷ್ಟು ನೀರಿನ ಕೊರತೆ ಅಂದರೆ ಶೇ.28ರಷ್ಟು ನೀರಿನ ಕೊರತೆ ಕಂಡುಬಂದಿದೆ. ಹಾರಂಗಿ ಶೇ.73, ಹೇಮಾವತಿ ಶೇ.55, ಕೆಆರ್‌ಎಸ್ ಶೇ.54, ಕಬಿನಿಯಲ್ಲಿ ಶೇ.96ರಷ್ಟು ನೀರಿನ ಪ್ರಮಾಣವಿದೆ. ಕಳೆದ ವರ್ಷ ಸಾಕಷ್ಟು ಕೊರತೆ ಉಂಟಾಗಿತ್ತು. ನಾಲ್ಕು ವರ್ಷಗಳ ಹಿಂದೆ ಸಮೃದ್ಧವಾಗಿ ಮಳೆಯಾದ ಕಾರಣ ಕೊರತೆ ಕಂಡು ಬಂದಿರಲಿಲ್ಲ. ಈಗಾಗಲೇ ಕಬಿನಿ ಶೇ.96ರಷ್ಟು ತುಂಬಿದ್ದು ಅಣೆಕಟ್ಟಿನ ಸುರಕ್ಷತೆ ದೃಷ್ಟಿಯಿಂದ ಒಳಹರಿವಿನ ಪ್ರಮಾಣದಷ್ಟೇ ನೀರನ್ನು ಹೊರಗೆ ಬಿಡಲಾಗುತ್ತಿದೆ ಎಂದರು.

ಸಾವು-ನೋವು ಅನುಭವಿಸಿದ ಲಕ್ಷಾಂತರ ಜನರ ಹೋರಾಟ, ತ್ಯಾಗ ಸ್ಮರಣೆ

ಜೂನ್ 25 ಸಂವಿಧಾನ ಹತ್ಯಾ ದಿವಸ

ದೆಹಲಿ: ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು 1975ರಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದ್ದ ಜೂನ್ 25 ಅನ್ನು 'ಸಂವಿಧಾನ ಹತ್ಯಾ ದಿವಸ' ಎಂದು ಆಚರಿಸಲು ಕೇಂದ್ರ ಸರಕಾರ ನಿರ್ಧರಿಸಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.ಈ ದಿನದಂದು (ಜೂನ್ 25) ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಅಮಾನವೀಯ ನೋವುಗಳನ್ನು ಸಹಿಸಿಕೊಂಡವರ ಅಪಾರ ಕೊಡುಗೆಯನ್ನು ಸ್ಮರಿಸಲಾಗುತ್ತದೆ ಎಂದು ತಿಳಿಸಿದ್ದಾರೆ. ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರು ಸರ್ವಾಧಿಕಾರಿ ಮನಸ್ಥಿತಿಯ ನಿರ್ಲಜ್ಜ ಪ್ರದರ್ಶನದಿಂದಾಗಿ ತುರ್ತು ಪರಿಸ್ಥಿತಿಯನ್ನು ಹೇರುವ ಮೂಲಕ ಪ್ರಜಾಪ್ರಭುತ್ವದ ಆತ್ಮವನ್ನು ಕತ್ತು ಹಿಸುಕಿದ್ದರು. ಆಗ ಲಕ್ಷಾಂತರ ಜನರನ್ನು ತಮ್ಮದಲ್ಲದ ತಪ್ಪಿಗೆ ಜೈಲಿಗೆ ಹಾಕಲಾಗಿತ್ತು. ಜತೆಗೆ, ಮಾಧ್ಯಮಗಳ ಧ್ವನಿಯನ್ನು ಅಡಗಿಸಲಾಗಿತ್ತು ಎಂದು ಶಾ ತಿಳಿಸಿದ್ದಾರೆ.

ಕರಾಳ ಅಧ್ಯಾಯ

ಚುನಾವಣಾ ಪ್ರಚಾರಕ್ಕಾಗಿ ಸರಕಾರಿ ಯಂತ್ರಗಳನ್ನು ದುರುಪಯೋಗಪಡಿಸಿಕೊಂಡ ಆರೋಪದಲ್ಲಿ ಇಂದಿರಾ ಗಾಂಧಿ ಅವರನ್ನು ಲೋಕಸಭೆ ಸ್ಥಾನದಿಂದ ಪದಚ್ಯುತಗೊಳಿಸುವ ಅಲಹಾಬಾದ್ ಹೈಕೋರ್ಟ್ ತೀರ್ಪಿನ ವಿರುದ್ಧ ಕುಪಿತಗೊಂಡಿದ್ದ ಪ್ರಧಾನಿ ಇಂದಿರಾ ಗಾಂಧಿ ಅವರು 1975ರ ಜೂನ್ 25ರಂದು ತುರ್ತು ಪರಿಸ್ಥಿತಿ ಘೋಷಿಸಿ ದ್ದರು. 21 ತಿಂಗಳು ತುರ್ತು ಪರಿಸ್ಥಿತಿ ಜಾರಿಯಲ್ಲಿತ್ತು. ಇದೇ ವೇಳೆ ಲಕ್ಷಾಂತರ ಜನರನ್ನು ಜೈಲಿಗೆ ಕಳುಹಿಸಲಾ ಗಿತ್ತು. ಮಾಧ್ಯಮ ಸಂಸ್ಥೆಗಳನ್ನು ಮುಚ್ಚಲಾಗಿತ್ತು. ತಮ್ಮ ವಿರುದ್ಧ ವರದಿ ಪ್ರಕಟಿಸುವ ಪತ್ರಿಕೆಗಳನ್ನು ಮುಚ್ಚಲು ಇಂದಿರಾ ಗಾಂಧಿ ಆದೇಶಿಸಿದ್ದರು. ಜನರ ಹಕ್ಕುಗಳನ್ನು ಕಸಿಯಲಾಗಿತ್ತು. ಹಾಗಾಗಿ, ತುರ್ತು ಪರಿಸ್ಥಿತಿಯು ದೇಶದ ಪ್ರಜಾಪ್ರಭುತ್ವದ ಕರಾಳ ಅಧ್ಯಾಯ ಎನಿಸಿದೆ.

ನೇಪಾಳ: 'ಪ್ರಚಂಡ' ಸರಕಾರ ಪತನ

ಕಠ್ಮಂಡು: ನೇಪಾಳದ ಪ್ರಧಾನಿ ಪುಷ್ಪ ಕಮಲ್ ದಹಾಲ್ (ಪ್ರಚಂಡ) ಸಂಸತ್ತಿನಲ್ಲಿ ವಿಶ್ವಾಸ ಮತ ಕಳೆದುಕೊಂಡಿದ್ದು, ಅಧಿಕಾರಕ್ಕೆ ಬಂದ 19 ತಿಂಗಳಿಗೇ ಸರಕಾರ ಪತನವಾಗಿದೆ. ಮಾಜಿ ಪ್ರಧಾನಿ ಕೆ.ಪಿ.ಶರ್ಮಾ ಓಲಿ ನೇತೃತ್ವದ ಸಿಪಿಎನ್-ಯುಎಂಎಲ್ ಪಕ್ಷ ಸರಕಾರಕ್ಕೆ ನೀಡಿದ್ದ ಬೆಂಬಲವನ್ನು ಹಠಾತ್ ಹಿಂತೆಗೆದುಕೊಂಡಿದ್ದು, 'ಪ್ರಚಂಡ' ವಿಶ್ವಾಸಮತ ಸಾಬೀತುಪಡಿಸುವಲ್ಲಿ ವಿಫಲರಾಗಿದ್ದಾರೆ.

ಕೊಚ್ಚಿಹೋದ 2 ಬಸ್: 65 ಜನ ನಾಪತ್ತೆ

ಕಠ್ಮಂಡು: ನೇಪಾಳದಲ್ಲಿ ಮುಂಗಾರು ಅಬ್ಬರಿಸುತ್ತಿದ್ದು, ಇದರಿಂದ ಉಂಟಾದ ಗುಡ್ಡ ಕುಸಿತದಲ್ಲಿ ಪ್ರಯಾಣಿಕರಿದ್ದ ಎರಡು ಬಸ್ಸುಗಳು ಕೊಚ್ಚಿಹೋಗಿವೆ. ಇದರಲ್ಲಿದ್ದ 62 ಜನ ನಾಪತ್ತೆಯಾಗಿದ್ದಾರೆ. ಚಿತ್ವಾನ್ ಜಿಲ್ಲೆಯಲ್ಲಿ ಈ ಘಟನೆ ಸಂಭವಿಸಿದ್ದು, ನಾಪತ್ತೆಯಾದವರ ಶೋಧ ಕಾರ್ಯದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಭಾಗಿಯಾಗಿದ್ದಾರೆ. ಬಸ್‌ಗಳು ನದಿಯಲ್ಲಿ ಮುಳುಗಿರುವುದರಿಂದ ಶೋಧ ಕಾರ್ಯಕ್ಕೆ ಅಡ್ಡಿಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ವಾಲ್ಮೀಕಿ ನಿಗಮ ಹಗರಣ: ದುಡ್ಡು ತಿಂದ ತಿಮಿಂಗಿಲಗಳು



ಕನ್ನಡದ ಸ್ವರ ರಾಣಿಗೆ ಕಣ್ಣೀರ ವಿದಾಯ

ಬೆಂಗಳೂರು: ಶ್ವಾಸಕೋಶದ ಕ್ಯಾನ್ಸರ್‌ನಿಂದ ನಿಧನರಾದ ನಿರೂಪಕಿ, ನಟಿ ಅಪರ್ಣಾ ಅವರ ಅಂತ್ಯಕ್ರಿಯೆ ಶುಕ್ರವಾರ ಬನಶಂಕರಿ ಚಿತಾಗಾರದಲ್ಲಿ ನಡೆಯಿತು. ಅಪರ್ಣಾ ಅವರ ಪಾರ್ಥಿವ ಶರೀರವನ್ನು ಬನಶಂಕರಿಯಲ್ಲಿರುವ ಮನೆಯಲ್ಲಿ ಅಂತಿಮ ದರ್ಶನಕ್ಕೆ ಇಡಲಾಗಿತ್ತು. ನಟರಾದ ಶ್ರೀನಾಥ್, ಸೃಜನ್ ಲೋಕೇಶ್ ಸೇರಿದಂತೆ ಚಿತ್ರರಂಗದ ಅನೇಕರು ಅಂತಿಮ ದರ್ಶನ ಪಡೆದರು. ಸರಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಬಿಜೆಪಿ ನಾಯಕರರನ್ನು ಟೋಲ್‌ನಲ್ಲೇ ತಡೆದ ಪೊಲೀಸರು

ಮೈಸೂರು ಚಲೋಗೆ ತಡೆ

ಬೆಂಗಳೂರು: ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ, ಮೈಸೂರು ಚಲೋ ಮಾಡಲು ಮುಂದಾದ ಬಿಜೆಪಿ ನಾಯಕರನ್ನು ಬೆಂಗಳೂರಿನಲ್ಲಿಯೇ ಪೊಲೀಸರು ಬಂಧಿಸಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಬೆಂಗಳೂರಿನಿಂದ ಮೈಸೂರಿನವರೆಗೆ ಬೈಕ್ ಹಾಗೂ ಕಾರು ರ‍್ಯಾಲಿಗೆ ಬಿಜೆಪಿ ನಾಯಕರು ಮುಂದಾಗಿದ್ದರು. ಆದರೆ ನೈಸ್ ಜಂಕ್ಷನ್ ಬಳಿಯೇ ವಿಜಯೇಂದ್ರ ಸೇರಿದಂತೆ ಹಲವು ನಾಯಕರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈ ನಡುವೆ ರಸ್ತೆ ತಡೆಗೆ ಬಿಜೆಪಿ ನಾಯಕರು ಮುಂದಾಗಿ ದ್ದರಿಂದ, ಪೊಲೀಸರು ಹಾಗೂ ಕಾರ್ಯಕರ್ತರ ನಡುವೆ ವಾಕ್ಸಮರ ನಡೆಯಿತು.

ನಿಗದಿಯಂತೆ ಬೆಂಗಳೂರು-ಮೈಸೂರು ರಸ್ತೆಯ ನೈಸ್ ರಸ್ತೆ ಜಂಕ್ಷನ್‌ನಿಂದ ರ‍್ಯಾಲಿ ಆರಂಭವಾಗಬೇಕಿತ್ತು. ವಿಜ ಯೇಂದ್ರ, ಸೇರಿದಂತೆ ಹಲವು ನಾಯಕರು ಕಾರುಗಳಲ್ಲಿ ಮೈಸೂರಿಗೆ ತೆರಳಲು ನಿರ್ಧರಿಸಿದ್ದರು.

- ಮುಡಾ ಪ್ರತಿಭಟನೆಯಲ್ಲಿ ಭಾಗವಹಿಸಲು ಅವಕಾಶ ನೀಡದ ಪೊಲೀಸರು
- ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹ

ನೈಸ್ ಜಂಕ್ಷನ್ ಬಳಿಯೇ ವಿಜಯೇಂದ್ರ ಸೇರಿದಂತೆ ಹಲವು ನಾಯಕರನ್ನು ವಶಕ್ಕೆ ಪಡೆದ ಪೊಲೀಸರು.

ದೇವರಾಜ ಅರಸು ಟರ್ಮಿನಲ್ ಬಹುಕೋಟಿ ಹಗರಣ

ಡಿ.ಎಸ್.ವೀರಯ್ಯ ಬಂಧನ

ಬೆಂಗಳೂರು: ದೇವರಾಜ ಅರಸು ಟರ್ಮಿನಲ್ ಬಹುಕೋಟಿ ಹಗರಣಕ್ಕೆ ಸಂಬಂಧಿಸಿ ಬಿಜೆಪಿ ಮಾಜಿ ಎಂಎಲ್‌ಸಿ ಡಿ.ಎಸ್. ವೀರಯ್ಯ ಅವರನ್ನು ಬಂಧಿಸಲಾಗಿದೆ. 2021ರಿಂದ 2023ರವರೆಗೆ ಡಿ.ಎಸ್.ವೀರಯ್ಯ ಅವರು ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್ ನಿಗಮದ ಅಧ್ಯಕ್ಷರಾಗಿದ್ದಾಗ ನಡೆದಿದ್ದ ಸುಮಾರು 47 ಕೋಟಿ ರು. ಅಕ್ರಮದ ಬಗ್ಗೆ ಹಾಲಿ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್.ಶಿವಪ್ರಸಾದ್ ವಿಲ್ಸನ್ ಗಾರ್ಡನ್ ಠಾಣೆಗೆ ದೂರು ನೀಡಿದ್ದರು. ಈ ಪ್ರಕರಣವನ್ನು ರಾಜ್ಯ ಸರಕಾರ ಸಿಐಡಿ ತನಿಖೆಗೆ ವಹಿಸಿತ್ತು. ಪ್ರಕರಣದ ಬಗ್ಗೆ ತನಿಖೆ ನಡೆಸಿದ್ದ ಸಿಐಡಿ, 600ಕ್ಕೂ ಹೆಚ್ಚು ದಾಖಲೆಗಳನ್ನು ವಶಕ್ಕೆ ಪಡೆದಿತ್ತು. ಇದೀಗ ಮಾಜಿ ಎಂಎಲ್‌ಸಿ ವೀರಯ್ಯ ಅವರನ್ನು ಬಂಧಿಸಿದೆ.

ಒಂದೆಡೆ ಎಸ್‌ಐಟಿ, ಇನ್ನೊಂದೆಡೆ ಇಡಿ, ಸಿಬಿಐ
ಏಕಕಾಲಕ್ಕೆ ಮೂರು ಸಂಸ್ಥೆಗಳಿಂದ ವಿಚಾರಣೆ

ವಾಲ್ಮೀಕಿ ನಿಗಮ: ಒಂದೇ ಪ್ರಕರಣ ಪ್ರತ್ಯೇಕ ಸಂಸ್ಥೆಯಿಂದ ತನಿಖೆ!

ಬೆಂಗಳೂರು: ರಾಷ್ಟ್ರಮಟ್ಟದಲ್ಲಿ ಭಾರಿ ಸದ್ದು ಮಾಡಿರುವ ವಾಲ್ಮೀಕಿ ಅಭಿವೃದ್ಧಿ ಪ್ರಾಧಿಕಾರ ಹಗರಣದಲ್ಲಿ ಸದ್ಯ ಮಾಜಿ ಸಚಿವ ನಾಗೇಂದ್ರ ಇ.ಡಿ. ಬಂಧನಕ್ಕೆ ಒಳಗಾಗಿದ್ದಾರೆ. ಇನ್ನೊಂದೆಡೆ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್‌ಗೆ ಎಸ್‌ಐಟಿ ಡ್ರಿಲ್ ಆರಂಭಿಸಿದೆ. ಮತ್ತೊಂದೆಡೆ ಸಿಬಿಐ ಕೂಡ ಪ್ರತ್ಯೇಕ ತನಿಖೆಯಲ್ಲಿ ತೊಡಗಿದೆ!

ಈ ರೀತಿ ಒಂದೇ ಪ್ರಕರಣದಲ್ಲಿ ಮೂರು ಪ್ರತ್ಯೇಕ ತಂಡಗಳಿಂದ ತನಿಖೆ ನಡೆಯುತ್ತಿರುವುದು ಇದೀಗ ಇಡೀ ಪ್ರಕರಣದಲ್ಲಿ ಗೊಂದಲಕ್ಕೆ ಕಾರಣವಾಗಿದೆ. ಮುಂದಿನ ದಿನದಲ್ಲಿ ತನಿಖಾ ತಂಡಗಳ ನಡುವೆಯೇ ಇನ್ನಷ್ಟು ಗೊಂದಲ ಸೃಷ್ಟಿಯಾಗುವ ಸಾಧ್ಯತೆಯಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಹಗರಣ ಬೆಳಕಿಗೆ ಬರುತ್ತಿದ್ದಂತೆ ರಾಜ್ಯ ಸರಕಾರ ವಿಶೇಷ ತನಿಖಾ ತಂಡವನ್ನು ರಚಿಸಿ, ತನಿಖೆಗೆ ಆದೇಶಿಸಿದೆ. ಇನ್ನೊಂದೆಡೆ ಯೂನಿಯನ್ ಬ್ಯಾಂಕ್ ಅಧಿಕಾರಿಗಳು ಸಿಬಿಐ ಕದ ತಟ್ಟಿದ್ದಾರೆ.

→ 4

ಜಾರ್ಜ್‌ಶೀಟ್ ಸಲ್ಲಿಕೆ ವೇಳೆ ಸಮಸ್ಯೆ

ಕಾನೂನು ತಜ್ಞರ ಪ್ರಕಾರ ಒಂದೇ ಪ್ರಕರಣದಲ್ಲಿ ಮೂರು ಪ್ರತ್ಯೇಕ ಜಾರ್ಜ್‌ಶೀಟ್ ಅನ್ನು ಸಲ್ಲಿಸಲು ಸಾಧ್ಯವಿಲ್ಲ. ಇದನ್ನು ಕೋರ್ಟ್ ಒಪ್ಪುವುದಿಲ್ಲ. ಆದ್ದರಿಂದ ತನಿಖೆಯ ವೇಳೆ ಪ್ರತ್ಯೇಕವಾಗಿ ತನಿಖೆ ನಡೆಸಿದರೂ, ಅಂತಿಮವಾಗಿ ಯಾವುದಾದರೂ ಒಂದು ಸಂಸ್ಥೆ ಪ್ರಕರಣವನ್ನು ಹಸ್ತಾಂತರ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಇಡಿ ಹಾಗೂ ಸಿಬಿಐ ಹೊಂದಾಣಿಕೆ ಮಾಡಿಕೊಂಡು ಒಬ್ಬರು ಚಾರ್ಜ್‌ಶೀಟ್ ಸಲ್ಲಿಸುತ್ತಾರೆ. ಆದರೆ ಎಸ್‌ಐಟಿ ಹಾಗೂ ಕೇಂದ್ರ ತನಿಖಾ ಸಂಸ್ಥೆಗಳು ಯಾವ ರೀತಿ ನಿಭಾಯಿಸಲಿದೆ ಎನ್ನುವುದು ಹಲವರ ಪ್ರಶ್ನೆಯಾಗಿದೆ.

ಸತ್ಯಶೋಧನಾ ಸಮಿತಿ ಮುಂದೆ ಸಚಿವರ ವಿರುದ್ಧ ಆರೋಪ
ಕೋಲಾರ ಸೋಲಿಗೆ ಮುನಿಯಪ್ಪ ವಿರುದ್ಧ ರಮೇಶ್ ಕುಮಾರ್ ಬಣ

ವರಿಷ್ಠರ ಮುಂದೆ ಎರಡನೇ ದಿನವೂ ದೂರಿನ ಸುರಿಮಳೆ

ಬೆಂಗಳೂರು: ಲೋಕಸಭಾ ಚುನಾವಣೆಯ ಹಿನ್ನಡೆಗೆ ಕಾರಣವೇನೆಂದು ಅರಿಯಲು ಎಐಸಿಸಿ ಕಳುಹಿಸಿರುವ ಸತ್ಯಶೋಧನಾ ಸಮಿತಿ ಮುಂದೆ ಮತ್ತೆ ದೂರಿನ ಸುರಿಮಳೆಗಳು ಕಾಣಿಸಿಕೊಂಡಿವೆ.

ಗುರುವಾರ ಬೆಂಗಳೂರಿಗೆ ಆಗಮಿಸಿರುವ ಮಧುಸೂದನ್ ಮಿಸ್ತ್ರಿ ನೇತೃತ್ವದ ಸತ್ಯಶೋಧನಾ ಸಮಿತಿ ಮುಂದೆ ಶುಕ್ರವಾರವೂ ಪರಾಜಿತ ಅಭ್ಯರ್ಥಿ ಹಾಗೂ ವಿವಿಧ ನಾಯಕರು ತಮ್ಮ ಕ್ಷೇತ್ರಗಳಲ್ಲಿನ ಸೋಲಿಗೆ ಕಾರಣವೇನೆಂದು ನಾಯಕರ ಮುಂದೆ ವರದಿ ನೀಡಿದ್ದಾರೆ. ಶುಕ್ರವಾರದ ಸಭೆಯಲ್ಲಿ ಪ್ರಮುಖವಾಗಿ ಸಚಿವ ಮುನಿಯಪ್ಪ ಬಣ ಹಾಗೂ ರಮೇಶ್‌ಕುಮಾರ್ ಬಣ ಆರೋಪ-ಪ್ರತ್ಯಾರೋಪ ಮಾಡಿರುವುದು ಬಹಿರಂಗವಾಗಿದೆ.

ಸಭೆಯಲ್ಲಿ ಕೋಲಾರ ಸೋಲಿನ ವಿವರಣೆಯನ್ನು ರಮೇಶ್ ಕುಮಾರ್ ಬಣ ಹಾಗೂ ಕೆ ಎಚ್ ಮುನಿಯಪ್ಪ ಬಣ ನೀಡಿದೆ. ಎರಡು ಬಣಗಳು ತಮ್ಮ ತಮ್ಮ ವಾದವನ್ನು ಮಂಡಿಸಿದೆ. ಸಚಿವ ಮುನಿಯಪ್ಪ ಲೋಕಸಭೆ ಚುನಾವಣಾ ಪ್ರಚಾರ ಕಾರ್ಯದಿಂದ ದೂರ ಉಳಿದಿದ್ದರು. ದಲಿತ ಎಡಗೈ ಸಮುದಾಯದ ಮತಗಳು ಬಾರದಂತೆ ನೋಡಿಕೊಂಡಿದ್ದಾರೆ ಎಂದು ಆರೋಪಿಸಿದ್ದಾರೆ. ಬಲಗೈ ಸಮುದಾಯ ವಿರೋಧದ ನಡುವೆಯೂ ಮತಗಳು ಬಂದಿವೆ.

→ 4

ಮುನಿಯಪ್ಪ ವಾದ ಏನು?

ಸಚಿವ ಕೆಎಚ್ ಮುನಿಯಪ್ಪ ಇದೇ ಸಂದರ್ಭದಲ್ಲಿ ತಮ್ಮದೇ ಆದ ವಾದ ಮಂಡಿಸಿದ್ದಾರೆ. ಅಭ್ಯರ್ಥಿ ಆಯ್ಕೆಯಲ್ಲಿ ಸಾಕಷ್ಟು ಗೊಂದಲ ಆಯಿತು. ಕ್ಷೇತ್ರಕ್ಕೆ ಅಭ್ಯರ್ಥಿ ಹೊಸಬರು , ರೀಚ್ ಆಗಲು ಆಗಿಲ್ಲ. ನಾನು ಪಕ್ಷದ ಪರವಾಗಿ ಕೆಲಸ ಮಾಡಿದ್ದೇನೆ. ನಮ್ಮ ಕುಟುಂಬದವರಿಗೆ ಕೊಟ್ಟಿದ್ದರೆ ಅನುಕೂಲ ಆಗುತ್ತಿತ್ತು ನಿಜ. ಆದರೆ ನಾನು ಪಕ್ಷದ ಗೆಲುವಿಗೆ ಪ್ರಾಮಾಣಿಕ ಕೆಲಸ ಮಾಡಿದ್ದೇನೆ ಎಂದು ಸಮರ್ಥಿಸಿಕೊಂಡಿದ್ದಾರೆ.

ಸುಪ್ರೀಂ ಮಧ್ಯಂತರ ಜಾಮೀನು
ಸಿಬಿಐ ಪ್ರಕರಣದಲ್ಲಿ 25ರವರೆಗೂ ನ್ಯಾಯಾಂಗ ಬಂಧನ

ಕೇಜ್ರಿಗೆ ಜಾಮೀನು ಸಿಕ್ಕರೂ ಬಿಡುಗಡೆ ಇಲ್ಲ

ದೆಹಲಿ: ಅಬಕಾರಿ ನೀತಿ ಹಗರಣದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಮೊದಲಿಗೆ ಇ.ಡಿಯಿಂದ ಬಂಧನಕ್ಕೊಳಗಾಗಿ ಸದ್ಯ ತಿಹಾರ್ ಜೈಲಿನಲ್ಲಿರುವ ದೆಹಲಿ ಸಿಎಂ ಅರವಿಂದ್ ಕೇಜ್ರಿವಾಲ್‌ಗೆ ಸುಪ್ರೀಂಕೋರ್ಟ್ ಶುಕ್ರವಾರ ಮಧ್ಯಂತರ ಜಾಮೀನು ನೀಡಿದೆ. ಹಾಗಿದ್ದೂ ಕೇಜ್ರಿವಾಲ್‌ಗೆ ಜೈಲಿನಿಂದ ಬಿಡುಗಡೆ ಭಾಗ್ಯ ಇಲ್ಲವಾಗಿದೆ. ಎರಡು ದಿನಗಳ ಹಿಂದಷ್ಟೇ ಭ್ರಷ್ಟಾಚಾರ ಪ್ರಕರಣದಡಿ ಸಿಬಿಐ ಬಂಧಿಸಿದ್ದು, ಪ್ರಕರಣದ ವಿಚಾರಣೆ ನಡೆಸುತ್ತಿರುವ ದೆಹಲಿಯ ರೋಸ್ ಅವಿನ್ಯೂ ಕೋರ್ಟ್, ಆರೋಪಿಯ ನ್ಯಾಯಾಂಗ ಬಂಧನ ಅವಧಿಯನ್ನು ಜು.25ರವರೆಗೂ ವಿಸ್ತರಿಸಿ ಶುಕ್ರವಾರ ಆದೇಶ ಹೊರಡಿಸಿದೆ.

ಸಮಾಚಾರ ಸಣ್ಣದಲ್ಲ

ಮೈಸೂರು ಚಲೋಗೆ ತಡೆ

← ಮೊದಲಪುಟದಿಂದ

ನೈಸ್ ರಸ್ತೆಯ ಜಂಕ್ಷನ್‌ನಲ್ಲಿ ನೂರಾರು ಬಿಜೆಪಿ ಕಾರ್ಯಕರ್ತರು ಜಮಾವಣೆಗೊಂಡಿದ್ದರು. ಹಾಗೆಯೇ ರಸ್ತೆತಡೆಯನ್ನು ಸಹ ನಡೆಸಿದ್ದರು. ಆಗ ಪೊಲೀಸರು ವಿಜ ಯೇಂದ್ರ ಸೇರಿದಂತೆ ಕಾರ್ಯಕರ್ತರು ಹಾಗೂ ಮುಖಂಡರನ್ನು ವಶಕ್ಕೆ ಪಡೆದು ಬಸ್‌ಗೆ ಹತ್ತಿಸಿ ಕರೆದೊಯ್ದು, ಬಿಜೆಪಿ ನಾಯಕರ ಮೈಸೂರು ಚಲೋವನ್ನು ತಡೆದರು.

ಒಂದೇ ಪ್ರಕರಣ; ಪ್ರತ್ಯೇಕ ಸಂಸ್ಥೆ ತನಿಖೆ

← ಮೊದಲಪುಟದಿಂದ

ಇದೀಗ ಸಿಬಿಐ–ಇಡಿ ಕೇಂದ್ರ ಸರಕಾರದ ಸುಪರ್ದಿಯಲ್ಲಿ ಬರುವುದರಿಂದ, ಈ ಇಬ್ಬರು ಪ್ರತ್ಯೇಕ ತನಿಖೆ ಮಾಡಿದರೂ, ಅಂತಿಮವಾಗಿ ಒಬ್ಬರಿಗೊಬ್ಬರು ಪ್ರಕರಣವನ್ನು ವರ್ಗಾವಣೆ ಮಾಡಿಕೊಳ್ಳುವ ಸಾಧ್ಯತೆಯಿರುತ್ತದೆ. ಆದರೆ ಎಸ್‌ಐಟಿ ಹಾಗೂ ಕೇಂದ್ರೀಯ ಸಂಸ್ಥೆಗಳ ತನಿಖೆಯೇ ಇದೀಗ ಬಹುದೊಡ್ಡ ಗೊಂದಲಕ್ಕೆ ವೇದಿಕೆಯಾಗಲಿದೆ ಎನ್ನಲಾಗಿದೆ.

ಎಸ್‌ಐಟಿ, ಇಡಿ ಇಬ್ಬರಿಂದಲೂ ನೋಟಿಸ್: ಕಳೆದ ಮೂರು ದಿನಗಳ ಪ್ರಕರಣದ ವಿಚಾರಣೆಯನ್ನು ಗಮನಿಸಿದರೆ, ಗೊಂದಲದ ಬಗ್ಗೆ ಸ್ಪಷ್ಟ ಚಿತ್ರಣ ಸಿಗುತ್ತದೆ. ಒಂದೆಡೆ ಇಡಿ ಅಧಿಕಾರಿಗಳು ನಾಗೇಂದ್ರ ಹಾಗೂ ದದ್ದಲ್ ಅವರನ್ನು ವಿಚಾರಣೆಗೆ ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಇನ್ನೊಂದೆಡೆ ಎಸ್‌ಐಟಿಯಿಂದಲೂ ವಿಚಾರಣೆಗೆ ಹಾಜರಾಗಲು ನೋಟಿಸ್ ನೀಡಲಾಗಿತ್ತು. ಈ ನೋಟಿಸ್‌ಗೆ ಉತ್ತರಿಸದಿದ್ದರೆ ಅಥವಾ ವಿಚಾರಣೆಗೆ ಹಾಜರಾಗದಿದ್ದರೆ, ಕಾನೂನಾತ್ಮಕವಾಗಿಯೂ ಸಮಸ್ಯೆಯಾಗುತ್ತದೆ. ಇದರಿಂದ ವಿಚಾರಣೆಗೆ ಒಳಗಾಗುವವರಿಗೆ ಗೊಂದಲ ಹೆಚ್ಚಾಗುವ ಸಾಧ್ಯತೆಯಿದೆ.

ಮುಡಾ ಪ್ರಕರಣ ಸಿಬಿಐಗೆ ವಹಿಸಲು ಬಿಜೆಪಿ ಒತ್ತಾಯ | ಕಮಲ ನಾಯಕರ ವಿರುದ್ಧ ಕಾಂಗ್ರೆಸಿಗರ ವಾಕ್ಸಮರ

ಸಿಎಂ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯ ಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ, ಮೈಸೂರು ಚಲೋ ಮಾಡಲು ಮುಂದಾದ ಬಿಜೆಪಿ ನಾಯಕರನ್ನು ಬೆಂಗಳೂರಿನಲ್ಲಿಯೇ ಪೊಲೀಸರು ಬಂಧಿಸಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಬೆಂಗಳೂರಿನಿಂದ ಮೈಸೂರಿನವರೆಗೆ ಬೈಕ್ ಹಾಗೂ ಕಾರು ರ್‍ಯಾಲಿಗೆ ಬಿಜೆಪಿ ನಾಯಕರು ಮುಂದಾಗಿದ್ದರು. ಆದರೆ ನೈಸ್ ಜಂಕ್ಷನ್ ಬಳಿಯೇ ವಿಜಯೇಂದ್ರ ಸೇರಿದಂತೆ ಹಲವು ನಾಯಕರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈ ನಡುವೆ ರಸ್ತೆ ತಡೆಗೆ ಬಿಜೆಪಿ ನಾಯಕರು ಮುಂದಾಗಿದ್ದರಿಂದ, ಪೊಲೀಸರು ಹಾಗೂ ಕಾರ್ಯಕರ್ತರ ನಡುವೆ ವಾಕ್ಸಮರ ನಡೆಯಿತು.

ನಿಗದಿಯಂತೆ ಬೆಂಗಳೂರು–ಮೈಸೂರು ರಸ್ತೆಯ ನೈಸ್ ರಸ್ತೆ ಜಂಕ್ಷನ್‌ನಿಂದ ರ್‍ಯಾಲಿ ಆರಂಭವಾಗಬೇಕಿತ್ತು. ವಿಜಯೇಂದ್ರ, ಸೇರಿದಂತೆ ಹಲವು ನಾಯಕರು ಕಾರುಗಳಲ್ಲಿ ಮೈಸೂರಿಗೆ ತೆರಳಲು ನಿರ್ಧರಿಸಿದ್ದರು. ನೈಸ್ ರಸ್ತೆಯ ಜಂಕ್ಷನ್‌ನಲ್ಲಿ ನೂರಾರು ಬಿಜೆಪಿ ಕಾರ್ಯಕರ್ತರು ಜಮಾವಣೆಗೊಂಡಿದ್ದರು. ಹಾಗೆಯೇ ರಸ್ತೆತಡೆಯನ್ನು ಸಹ ನಡೆಸಿದ್ದರು. ಆಗ ಪೊಲೀಸರು ವಿಜಯೇಂದ್ರ ಸೇರಿದಂತೆ ಕಾರ್ಯಕರ್ತರು ಹಾಗೂ ಮುಖಂಡರನ್ನು ವಶಕ್ಕೆ ಪಡೆದು ಬಸ್ಗೆ ಹತ್ತಿಸಿ ಕರೆದೊಯ್ದು, ಬಿಜೆಪಿ ನಾಯಕರ ಮೈಸೂರು ಚಲೋವನ್ನು ತಡೆದರು.

ವಿಜಯೇಂದ್ರ ಆಕ್ರೋಶ: ಮೈಸೂರು ಚಲೋಗೆ ಅವಕಾಶ ಕೊಡದ ರಾಜ್ಯ ಸರಕಾರದ ವಿರುದ್ಧ ಆಕ್ರೋಶ ಹೊರ ಹಾಕಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ನಮ್ಮ ಮೈಸೂರು ಚಲೋ ತಡೆಯಬೇಡಿ. ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರನ್ನು ಬಂಧಿಸುವ ಪ್ರಯತ್ನ ಖಂಡನೀಯ. ಬಂಧನದ ಮೂಲಕ ರಾಜ್ಯಾದ್ಯಂತ ಬೆಂಕಿ ಹಚ್ಚಲು ನೀವೆ ಕಾರಣರಾಗುತ್ತೀರಿ ಎಂದು ಎಚ್ಚರಿಕೆ ನೀಡಿದರು.

ಮುಡಾದಲ್ಲಿ ಸಾವಿರಾರು ಕೋಟಿ ಹಗರಣ ನಡೆದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಪತ್ನಿ ಸಹ ನಿವೇಶನ ಪಡೆದಿದ್ದಾರೆ. ಹಗರಣ ಬಯಲಾಗಿರುವುದರಿಂದ ಮುಖ್ಯಮಂತ್ರಿಗಳು ಆತಂಕಗೊಂಡಿದ್ದಾರೆ. ಕೂಡಲೇ ಮುಡಾ ಹಗರಣದ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿಗಳು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಮಾಜಿ ಸಚಿವ ಮುನಿರತ್ನ, ಶಾಸಕ ಕೃಷ್ಣಪ್ಪ, ಧೀರಜ್ ಮುನಿರಾಜು, ರಾಜ್ಯ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ, ರಾಜ್ಯ ಕಾರ್ಯದರ್ಶಿಗಳಾದ ರಮೇಶ್‌ಗೌಡ, ಶರಣು ತಲ್ಲಿಕೆರೆ, ಮುನಿರಾಜು, ಜಿಲ್ಲಾಧ್ಯಕ್ಷ ಹರೀಶ್ ಸಪ್ತಗಿರಿಗೌಡ ಸೇರಿದಂತೆ ಅನೇಕರಿದ್ದರು.

ಗೂಡ್ಸ್ ಟೆಂಪೋದಲ್ಲಿ ಮೈಸೂರಿಗೆ ಹೋದ ಅಶೋಕ್

ಇನ್ನು ಮೈಸೂರು ಚಲೋದಲ್ಲಿ ಭಾಗವಹಿಸುವವರನ್ನು ಪೊಲೀಸರು ಬಂಧಿಸುತ್ತಾರೆ ಎನ್ನುವುದನ್ನು ಅರಿತ ಪ್ರತಿಪಕ್ಷ ನಾಯಕ ಅಶೋಕ್ ಹಾಗೂ ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ, ಪೊಲೀಸರ ಕಣ್ತಪ್ಪಿಸಿ ಗೂಡ್ಸ್ ಟೆಂಪೋದಲ್ಲಿ ಮೈಸೂರಿಗೆ ತೆರಳಿ ಮೈಸೂರಿನಲ್ಲಿ ಮುಡಾ ಮುಂದೆ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದರು. ಬೆಂಗಳೂರಿನಿಂದ ತೆರಳಬೇಕಿದ್ದ ತಂಡ ತೆರಳದಿದ್ದರೂ, ಮೈಸೂರು ಸ್ಥಳೀಯ ಕಾರ್ಯಕರ್ತರು ಹಾಗೂ ನಾಯಕರು ಪ್ರತಿಭಟನೆ ನಡೆಸಿದರು. ಈ ಪ್ರತಿಭಟನೆಯಲ್ಲಿ ಅಶೋಕ್, ಅಶ್ವತ್ಥನಾರಾಯಣ ಭಾಗಿಯಾದರು. ಪ್ರತಿಭಟನೆ ನಡೆಸಿದ ಎಲ್ಲರನ್ನು ಪೊಲೀಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು.

> ಮುಡಾ ಹಗರಣದ ವಿರುದ್ಧ ಬಿಜೆಪಿ ಪ್ರತಿಭಟನೆ ವಿಚಾರವಾಗಿ ಕೇಳಿದಾಗ ವಿಧಾನಸಭಾ ಕಲಾಪ ಬರುತ್ತಿರುವ ಕಾರಣ ಬಿಜೆಪಿಯವರು ರಾಜಕಾರಣ ಮಾಡುತ್ತಿದ್ದಾರೆ. ಅವರು ಮಾಡಿರುವ ದರಿದ್ರವನ್ನು ಅವರೇ ಬಯಲು ಮಾಡುತ್ತಿದ್ದಾರೆ. ಇದಕ್ಕೆ ಸದನದಲ್ಲಿ ಏನು ಉತ್ತರ ಕೊಡಬೇಕೊ ಅದನ್ನು ಕೊಡುತ್ತೇವೆ.
> **–ಡಿ.ಕೆ.ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

> ಪೋಕ್ಸೋ ಕೇಸ್ ಮುಚ್ಚಿಹಾಕಲು ಬಿಜೆಪಿ ಮುಡಾ ಮತ್ತು ವಾಲ್ಮೀಕಿ ಹಗರಣ ವಿಚಾರ ತೆಗೆದಿದ್ದಾರೆ. ಯಡಿಯೂರಪ್ಪ ಪೋಕ್ಸೋ ಕೇಸ್ ಮುಚ್ಚಿ ಹಾಕಲು ಇದೀಗ ಪ್ರತಿಭಟನೆ ಮಾಡುತ್ತಿದ್ದಾರೆ. ಬಿಜೆಪಿಯವರು ಯಡಿಯೂರಪ್ಪ ಹೆಸರು ಎತ್ತುತ್ತಿಲ್ಲ. ನಮ್ಮ ತನಿಖೆ ಆಗುವವರೆಗೂ ಕಾಯಬೇಕಿತ್ತು. ಬಿಜೆಪಿಯವರಿಗೆ ಬಹಳ ಆತಂಕಯಿದೆ. ಐಟಿ ಕರೆಸುವುದು, ಇಡಿ ಕರೆಸುವುದು, ಸಿಬಿಐ ಕರೆಸುವುದು ಮಾಡುತ್ತಿದ್ದಾರೆ.
> **–ಪ್ರಿಯಾಂಕ್ ಖರ್ಗೆ,** ಸಚಿವ

ನಾಗೇಂದ್ರ ಬಂಧನ

← ಮೊದಲಪುಟದಿಂದ

ಶಾಸಕರಾದ ಬಿ.ನಾಗೇಂದ್ರ, ಹಾಗೂ ಬಸವನಗೌಡ ದದ್ದಲ್ ನಿವಾಸಗಳ ಜತೆಗೆ ಮೂವರು ಯೂನಿಯನ್ ಬ್ಯಾಂಕ್ ಸಿಬ್ಬಂದಿ ಮನೆ, ವಸಂತನಗರದಲ್ಲಿರುವ ವಾಲ್ಮೀಕಿ ನಿಗಮದ ಕಚೇರಿಯಲ್ಲೂ ಇ.ಡಿ ತಪಾಸಣೆ ನಡೆಸಿ ದಾಖಲೆಗಳನ್ನು ವಶಕ್ಕೆ ಪಡೆದಿದೆ. ರೇಡ್ ಮಾಡಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಅಕ್ರಮ ಹಣ ವರ್ಗಾವಣೆ ಆರೋಪದ ಹಿನ್ನೆಲೆಯಲ್ಲಿ ಇಡಿ ದಾಳಿ ನಡೆಸಿ ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆದಿದೆ. ಫಸ್ಟ್ ಫೈನಾನ್ಸ್ ಸಹಕಾರಿ ಬ್ಯಾಂಕ್ ಸತ್ಯನಾರಾಯಣ್‌ನಿಂದ ವಾಲ್ಮೀಕಿ ನಿಗಮದ ಎಂ.ಡಿ.ಪದ್ಮನಾಭ್ ಹಣ ತಂದಿದ್ದರು ಎನ್ನಲಾಗಿದೆ. ಆ ಹಣದಲ್ಲಿ ನಾಗೇಂದ್ರ ಆಪ್ತ ಸಹಾಯಕ ಹರೀಶ್ 25 ಲಕ್ಷ ಹಣ ಪಡೆದಿದ್ದ. ದದ್ದಲ್ ಪಿಎ ಪಂಪಣ್ಣ ಕೂಡ 55 ಲಕ್ಷ ಹಣ ಪಡೆದಿದ್ದ. ಈ ಬಗ್ಗೆ ಪರಿಶೀಲನೆ ವೇಳೆ ಹರೀಶ್ ಬಾಯ್ಬಿಟ್ಟ ಹಿನ್ನೆಲೆಯಲ್ಲಿ ಆತನನ್ನು ಇಡಿ ವಶಕ್ಕೆ ಪಡೆದಿದೆ. ಪ್ರಕರಣದಲ್ಲಿ ಸಚಿವ ನಾಗೇಂದ್ರ, 50ರಿಂದ 60 ಕೋಟಿ ಅವ್ಯವಹಾರ ನಡೆಸಿರುವ ಆರೋಪಗಳು ಕೇಳಿಬಂದ ಹಿನ್ನೆಲೆಯಲ್ಲಿ ಹೆಚ್ಚಿನ ವಿಚಾರಣೆ ನಡೆದಿದೆ.

ಎರಡನೇ ದಿನವೂ ದೂರಿನ ಸುರಿಮಳೆ

← ಮೊದಲಪುಟದಿಂದ

ಒಂದು ವೇಳೆ ಅಭ್ಯರ್ಥಿ ಗೆದ್ದರೆ ದಲಿತ ಎಡಗೈ ನಾಯಕತ್ವ ಜಿಲ್ಲೆಯಲ್ಲಿ ಬೆಳೆಯುತ್ತದೆ. ನಾಯಕತ್ವ ಬೆಳೆದರೆ ಅಸ್ತಿತ್ವಕ್ಕೆ ದಕ್ಕೆ ಬರಲಿದೆ ಎಂದು ಕೆಲಸ ಮಾಡಿಲ್ಲ ಎಂದು ದೂರು ನೀಡಿದ್ದಾರೆ ಎಂದು ತಿಳಿದುಬಂದಿದೆ.

ಹೊಂದಾಣಿಕೆ ರಾಜಕೀಯವಿಲ್ಲ: ಡಿಕೆಶಿ: ಇನ್ನು ಗುರುವಾರದ ಸಭೆಯಲ್ಲಿ ಹೊಂದಾಣಿಕೆ ಆರೋಪವನ್ನು ಕೆಲ ನಾಯಕರು ಹೋರಿಸಿದ್ದರು. ಈ ಬಗ್ಗೆ ಸ್ಪಷ್ಟನೆ ನೀಡಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಲೋಕಸಭಾ ಚುನಾವಣೆಯಲ್ಲಿ ಯಾವ ಹೊಂದಾಣಿಕೆ ರಾಜಕಾರಣವೂ ನಡೆದಿಲ್ಲ. ಎಲ್ಲವೂ ಸುಳ್ಳು. ರಾಜ್ಯದಲ್ಲಿ ಎಲ್ಲಾ ಕಾರ್ಯಕರ್ತರು ಒಟ್ಟಾಗಿ ದುಡಿದಿದ್ದಾರೆ ಎಂದು ತಿಳಿಸಿದ್ದಾರೆ. ಚುನಾವಣೆ ಹೊತ್ತಿನಲ್ಲಿ ತಳಮಟ್ಟದ ಪರಿಸ್ಥಿತಿಯನ್ನು ಸರಿಯಾಗಿ ಅರಿಯಲಾಗಲಿಲ್ಲ, ಎಲ್ಲಾ ಕಾರ್ಯಕರ್ತರು ಒಟ್ಟಾಗಿ ದುಡಿದಿದ್ದು, ಪಕ್ಷ ಒಗ್ಗಟ್ಟಾಗಿ ಕೆಲಸ ಮಾಡಲಿ ಎಂದು ಒಂದಷ್ಟು ಸಚಿವರಿಗೆ ತಮ್ಮ ಕುಟುಂಬದ ಸದಸ್ಯರನ್ನು ಚುನಾವಣೆಗೆ ನಿಲ್ಲಿಸಿ ಎಂದು ಹೇಳಿದ್ದೆವು. ಇದರಲ್ಲಿ ಕೆಲವರು ಗೆದ್ದಿದ್ದಾರೆ, ಇನ್ನು ಕೆಲವರು ಸೋತಿದ್ದು, ಮುಂದಿನ ದಿನಗಳಲ್ಲಿ ಪಕ್ಷಕ್ಕೆ ದೊಡ್ಡ ಆಸ್ತಿಯಾಗಿ ಬೆಳೆಯುತ್ತಾರೆ ಎಂದರು. ಎಲ್ಲಾ ಕಾರ್ಯಕರ್ತರು, ಮುಖಂಡರು, ಗೆದ್ದವರು, ಸೋತವರು ಎಲ್ಲರೂ ಸೇರಿ ಎಐಸಿಸಿ ಸತ್ಯಶೋದನಾ ಸಮಿತಿಗೆ ಪರಿಸ್ಥಿತಿ ಅರಿಯಲು ಅಹವಾಲು ಸಲ್ಲಿಸಿದ್ದು, ಅದರಂತೆ ಎಲ್ಲರೂ ಸಮಿತಿಯ ಮುಂದೆ ತಮ್ಮ ಅಭಿಪ್ರಾಯ ತಿಳಿಸಿ, ಮುಂದೆ ಯಾವ ರೀತಿ ಕಾರ್ಯನಿರ್ವಹಿಸಬೇಕು ಎನ್ನುವ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಹೇಳಿದರು.

ಸರ್ವಪಕ್ಷ ಸಭೆ ನಾಳೆ

← ಮೊದಲಪುಟದಿಂದ

ಸರಕಾರ ಈ ಆದೇಶದ ವಿರುದ್ಧ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಬೇಕೆಂದು ತೀರ್ಮಾನಿಸಲಾಯಿತು. ಇದರೊಂದಿಗೆ ಜುಲೈ 14 ರಂದು ಸಂಜೆ 4 ಗಂಟೆಗೆ ಸರ್ವಪಕ್ಷ ಸಭೆ ನಡೆಸಲು ತೀರ್ಮಾನಿಸಲಾಯಿತು. ಕರ್ನಾಟಕದ ನೀರಿನ ವಿಚಾರದಲ್ಲಿ ಎಲ್ಲ ಪಕ್ಷದವರೂ ಒಟ್ಟಾಗಿದ್ದೇವೆ. ಆದ್ದರಿಂದ ಸರ್ವಪಕ್ಷ ಸಭೆ ನಡೆಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಕೇಂದ್ರ ಸಚಿವರಿಗೂ ಆಹ್ವಾನ: ಸರ್ವಪಕ್ಷ ಸಭೆಯಲ್ಲಿ ಬಿಜೆಪಿ, ಜೆಡಿಎಸ್ ರಾಜ್ಯಾಧ್ಯಕ್ಷರು, ಸಭಾನಾಯಕರು ಸೇರಿದಂತೆ ಕೇಂದ್ರ ಸಚಿವರು, ಕಾವೇರಿ ಭಾಗದ ಲೋಕಸಭೆ, ರಾಜ್ಯಸಭೆ ಸದಸ್ಯರು ಮತ್ತು ಶಾಸಕರನ್ನು ಸಹ ಸಭೆಗೆ ಆಹ್ವಾನಿಸಲಾಗುವುದು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸರಕಾರದ ಮುಂದಿನ ನಡೆ ಕುರಿತು ತೀರ್ಮಾನಿಸಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

> ಕಾವೇರಿ ಜಲಾನಯನ ಪ್ರದೇಶದ ಎಲ್ಲ ನಾಲ್ಕು ಜಲಾಶಯಗಳಲ್ಲಿ ಒಟ್ಟು ಕೇವಲ 60 ಟಿಎಂಸಿ ನೀರು ಲಭ್ಯವಿದೆ. ಕೃಷಿ ಚಟುವಟಿಕೆಗಳಿಗೂ ನಾವು ನೀರು ಒದಗಿಸಬೇಕಾಗಿದೆ. ಮಳೆ ಕೊರತೆಯನ್ನು ಗಮನದಲ್ಲಿರಿಸಿ ಜುಲೈ ಅಂತ್ಯದವರೆಗೆ ಕಾಯಲು ಮನವಿ ಮಾಡಿದ್ದೇವೆ.
> **–ಸಿದ್ದರಾಮಯ್ಯ** ಸಿಎಂ

> ನಮಗೆ ಮಳೆ ಕೊರತೆ ಉಂಟಾಗಿದೆ. ಕಾವೇರಿ ನೀರು ನಿಯಂತ್ರಣ ಸಮಿತಿಯು ತಮಿಳುನಾಡಿಗೆ ಒಂದು ಟಿಎಂಸಿ ನೀರು ಹರಿಸಬೇಕು ಎಂದು ಹೇಳಿದೆ. ನಾನು ದೆಹಲಿಯಲ್ಲಿ ಇರುವ ವಕೀಲರಾದ ಮೋಹನ್ ಕಾತರಕಿ, ಶ್ಯಾಮ್ ದಿವಾನ್ ಅವರ ಬಳಿ ಮಾತನಾಡಿದ್ದೇನೆ. ಅವರು ಒಂದಷ್ಟು ಸಲಹೆ ನೀಡಿದ್ದಾರೆ.
> **–ಡಿ.ಕೆ.ಶಿವಕುಮಾರ್** ಡಿಸಿಎಂ

ಕರ್ನಾಟಕ ಸರ್ಕಾರ

ಯಲಹಂಕ ತಾಲ್ಲೂಕು ಪಂಚಾಯಿತಿ

ಮಿನಿ ವಿಧಾನಸೌಧ, 2ನೇ ಮಹಡಿ, ಯಲಹಂಕ, ಬೆಂಗಳೂರು–560064.
ಫೋನ್ : 080–28460315

ಸಂಖ್ಯೆ: ಯ.ತಾ.ಪಂ./ಮರುಟೆಂಡರ್/ಹೊರಗುತ್ತಿಗೆ/2024–25 ದಿನಾಂಕ: 09.07.2024

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

ಯಲಹಂಕ ತಾಲ್ಲೂಕು ಪಂಚಾಯಿತಿ ಕಛೇರಿಗೆ ಅವಶ್ಯವಿರುವ ಒಂದು ವಾಹನಚಾಲಕ ಸಿಬ್ಬಂದಿಯ ಹುದ್ದೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಹೊರ ಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆದುಕೊಳ್ಳಲು ಉದ್ದೇಶಿಸಿ ಈ ಸಂಬಂಧ ದ್ವಿ–ಲಕೋಟೆ ಪದ್ಧತಿಯಲ್ಲಿ ಮರು ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಇ–ಟೆಂಡರ್ ವೆಬ್‌ಸೈಟ್ www.kppp.karnataka.gov.in ನಲ್ಲಿ ದಿನಾಂಕ: 09.07.2024 ರಂದು ಪ್ರಕಟಿಸಲಾಗಿದೆ. ಹೊರ ನೇಮಕಾತಿ ಏಜೆನ್ಸಿಯವರು ದಿನಾಂಕ: 19.07.2024 ರಂದು 4.30 ಗಂಟೆಯೊಳಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ದಿನಾಂಕ: 20.07.2024 ರಂದು ಸಂಜೆ 5.21 ಗಂಟೆಗೆ ತಾಂತ್ರಿಕ ಬಿಡ್‌ನ್ನು ತೆರೆಯಲಾಗುವುದು ಹಾಗೂ ದಿನಾಂಕ : 07.07.2024 ರಂದು ಸಂಜೆ 5.30 ಗಂಟೆಗೆ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು.

ಕ್ರ. ಸಂ.	ಹುದ್ದೆಗಳ ವಿವರ	ಹುದ್ದೆಗಳ ಸಂಖ್ಯೆ
1	ವಾಹನ ಚಾಲಕ	1

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ
ಯಲಹಂಕ ತಾಲ್ಲೂಕು ಪಂಚಾಯಿತಿ,
ಬೆಂಗಳೂರು

ವಾಸಾಸಂಇ/ವಾ.ಪ್ರ./ಶಿರಡಿ ಸಾಯಿ/898/2024–25

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗಾವಿ. ಫ್ಯಾಕ್ಸ್/ದೂರವಾಣಿ ಸಂಖ್ಯೆ: 0831–2470342, 2470257 ಇ–ಮೇಲ್: belagavibuda@gmail.com

No: BUDA/PWD/E-TENDER/2024-25/976 Date: 12-07-2024

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ ಮತ್ತು ನಿಯಮಾವಳಿಗಳನ್ವಯ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಅನ್ವಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಯ ಇ–ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು, ಕಾರ್ಯಕಾರಿ ಅಭಿಯಂತರರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ ಇವರಿಂದ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. (ದೂರವಾಣಿ ಸಂಖ್ಯೆ: 0831–2470342) ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್: https://kppp.karnataka.gov.in ರಲ್ಲಿ ಪಡೆಯಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಇಂಡೆಂಟ್ ನಂ.	ಮುಂಗಡ ಠೇವಣಿ (ರೂ. ಗಳಲ್ಲಿ)
1	E-Auction for deposit BUDA fund for maximum one year period (Only Nationalised banks should participate).	BGMUDA/2024-25 AUCTION16	2,10,000/-

ಟೆಂಡರ್ ಫಾರ್ಮ ಬೆಲೆ ಇ–ಪ್ರೊಕ್ಯೂರ್‌ಮೆಂಟ್‌ದಲ್ಲಿದ್ದಂತೆ: 1) ಟೆಂಡರ್ ಕ್ವಾರಿಸ್ ಸಲ್ಲಿಸಲು ಕೊನೆಯ ದಿನಾಂಕ: 09–08–2024 ರಂದು ಸಾಯಂಕಾಲ 5.00 ಘಂಟೆಯವರೆಗೆ. 2) ಆಕ್ಷನ್‌ನಲ್ಲಿ ಭಾಗವಹಿಸಲು ಆಸಕ್ತಿ ವ್ಯಕ್ತಪಡಿಸುವಿಕೆಗಾಗಿ ಕೊನೆಯ ದಿನಾಂಕ: 12–08–2024 ರಂದು ಸಾಯಂಕಾಲ 5.00 ಘಂಟೆಗೆ. 3) ಆಕ್ಷನ್ ಪ್ರಾರಂಭ ದಿನಾಂಕ: 13–08–2024 ರಂದು ಮುಂಜಾನೆ 10.00 ಘಂಟೆಗೆ. 4) ಆಕ್ಷನ್ ಮುಕ್ತಾಯ ದಿನಾಂಕ: 14–08–2024 ರಂದು ಸಾಯಂಕಾಲ 5.00 ಘಂಟೆಯವರೆಗೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ.

ವಾಸಾಸಂಇ/ಬೆಳಗಾವಿ/371/ಅಡ್ವರ್ಟೋರ್/2024–25

ಸಹಿ/– ಆಯುಕ್ತರು
ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ.

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ–571 401
(Autonomous Medical Institution, Government of Karnataka)
(Fax & Phone: 08232-231001, 222086,
E-mail: mimanmandya@gmail.com)
Website: www.mimsmandya.org

ಇ–ಟೆಂಡರ್ ಪ್ರಕಟಣೆ
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಗದು ವಿಭಾಗ. ಹಾಗೂ ಇತರೆ ವಿಭಾಗಗಳಿಗೆ ಅವಶ್ಯವಿರುವ ಕಂಪ್ಯೂಟರ್ ಉಪಕರಣಗಳು ಹಾಗೂ ಇತ್ಯಾದಿಗಳನ್ನು ಸರಬರಾಜು ಪಡೆಯಲು ಉತ್ಪಾದಕ /ನೊಂದಾಯಿಸಲ್ಪಟ್ಟ ಅರ್ಹ ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ.
ಕ್ರಸಂ : 01. ಟೆಂಡರ್ ಪ್ರಕಟಣೆ ಸಂಖ್ಯೆ : MIMS/Sup/Com & Others Items/e-tender//2024-25 ದಿನಾಂಕ:08.07.2024. ಟೆಂಡರ್ ವಿವರ : Computers & Others Items ಗಳನ್ನು ಪಡೆಯಲು ಪ್ರಾರಂಭದ ದಿನಾಂಕ : 09.07.2024 ರಿಂದ ಅಂತಿಮ ದಿನಾಂಕ: 24.07.2024 ಸಂಜೆ 5.30 ಗಂಟೆವರೆಗೆ. ಟೆಂಡರ್ ಅಂದಾಜು ಮೊತ್ತ (ರೂ.ಗಳಲ್ಲಿ) : 23,35,000/– (ಇಪ್ಪತ್ತ ಮೂರು ಲಕ್ಷದ ಮೂವತ್ತೈದು ಸಾವಿರ ಮಾತ್ರ). ಇ.ಎಂ.ಡಿ ಮೊತ್ತ ರೂ. : 50,000/– ಟೆಂಡನ್ನು ಇ–ಪೋರ್ಟಲ್ ಮುಖಾಂತರ ನಿಗದಿತ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) ದೊಂದಿಗೆ ಸಲ್ಲಿಸುವುದು ಇತರೆ ವಿವರಗಳನ್ನು ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ http://www kppp.karnataka.gov.in ವೆಬ್ ಸೈಟ್ ನಲ್ಲಿ ನೋಡಬಹುದು. ಹೆಚ್ಚಿನ ಮಾಹಿತಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ(ರಜಾ ದಿನಗಳನ್ನು ಹೊರತುಪಡಿಸಿ) ಪಡೆಯಬಹುದಾಗಿದೆ.

ಸಹಿ/–ಮುಖ್ಯ ಆಡಳಿತಾಧಿಕಾರಿಗಳು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/166/2024–25

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ, ಶಿಡ್ಲಘಟ್ಟ
ಶ್ರೀರಾಮ ಬಿನ್ ಲೇಟ್ ಶ್ರೀರಾಮಪ್ಪ ರವರ ಬಿಲ್ಡಿಂಗ್, ನಿಸರ್ಗ ನಿಲಯ, ನ್ಯೂ ಡಿಲೆಕ್ಸ್ ಬೇಕರಿ ಹಿಂಭಾಗ, ಚಿಕ್ಕಬಳ್ಳಾಪುರ ಮತ್ತು ಚಿಂತಾಮಣಿ ಮುಖ್ಯರಸ್ತೆ, ಕನಕನಗರ, ಶಿಡ್ಲಘಟ್ಟ ನಗರ, ಚಿಕ್ಕಬಳ್ಳಾಪುರ ಜಿಲ್ಲೆ–562 105
ದೂರವಾಣಿ ಸಂಖ್ಯೆ: 08158–256497 ಮೇಲ್:cdposid2@gmail.com

ಸಂ.ಶಿಅಯೋ/ಶಿಘ/ಹೊ.ಗು.ನೌ.ಟೆಂ.ಪ್ರ/2024–25 ದಿನಾಂಕ:08.07.2024

ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ
(ಹೊರಗುತ್ತಿಗೆ ನೌಕರರ ಸೇವೆಯನ್ನು ಪಡೆಯುವ ಬಗ್ಗೆ ಟೆಂಡರ್)

- ವಿದೇಶ ಪ್ರಯಾಣ ಹೋಗಿದ್ದಿದ್ದರೆ ಎದೆ ನೋವು ಕಾಣಿಸಿಕೊಳ್ಳುತ್ತಿರಲಿಲ್ಲವೇನೋ?!

• ರವೀಶ ಜೋಶಿ, ಬೆಂಗಳೂರು
ಭಟ್ರೇ, ನಿಮ್ಮ ಅನಾರೋಗ್ಯದಿಂದ ಹಾನಿಯಾಗಿದ್ದು ಯಾರಿಗೆ?
- ಏರ್ ಲೈನ್ಸ್ ಕಂಪನಿಗಳಿಗೆ!

• ಸಂಗೀತಾ ಮಾನ್ಯ, ಮಾನ್ವಿ
ಸಾರ್, 'ನನಗೆ ಎದೆನೋವು ಬಂದಿತ್ತು' ಎಂಬ ಪುಸ್ತಕವನ್ನು ನಿಮ್ಮಿಂದ ನಿರೀಕ್ಷಿಸಬಹುದಾ?
- 'ಎದೆನೋವು : ಆಳ-ಅಗಲ' ಎಂಬ ಶೀರ್ಷಿಕೆ ಹೇಗೆ?!

• ಆರ್. ಶ್ರೀಧರ, ಕೋಣನಕುಂಟೆ
ಭಟ್ರೇ, ನಿಮಗೆ ಮಾಡಲು ಬೇರೆ ಕೆಲಸ ಇದೆಯಾ?
- ನಿಮಗೆ ಮಾಡಲು ಬೇರೆ ಕೆಲಸ ಇಲ್ಲವಾ ಅಂತ ಕೇಳಿದ್ದರೆ, ಕೆಡ್ಡಿಗೆ ಬಾ ಅಂತ ಅಂತಿದ್ದೆ!

• ಕೃಷ್ಣಕುಮಾರ್ ಎ., (ಇಮೇಲ್ ಮೂಲಕ)
ಭಟ್ರೇ, ನಾನು ದಿನಪತ್ರಿಕೆ ಆಗಿ ಹುಟ್ಟಬೇಕಿತ್ತು, ಆಗ ನಿಮ್ಮ ಕೈಯಲ್ಲೇ ಇರ್ತಿದ್ದೆ ಅಂತಾರಲ್ಲ?
- ಪ್ರತಿದಿನ ಬದಲಿಸಬೇಕಾಗುತ್ತೆ ಅನ್ನೋದು ಗೊತ್ತಿಲ್ಲ ಅಂತ ಕಾಣುತ್ತೆ!

• ಸಿದ್ದೇಶ ತುಮಕೂರು, (ಇಮೇಲ್ ಮೂಲಕ)
ಭಟ್ರೇ, ಎದೆನೋವಿನ ನಂತರ ನಿಮ್ಮ ಎದೆ ಮತ್ತಷ್ಟು ವಿಶಾಲವಾಗಿದೆಯಂತೆ?
- ಎದೆನೋವಿಗೆ ಕಾರಣವಾಗಿದ್ದೂ ಅದೇ!

• ರವಿ ಕಣವಿ, ಧಾರವಾಡ
ಭಟ್ರೇ, ನೋಡಲು ಆಯಾಸವಾಗಿರುವ ಗಂಡಸರನ್ನು ಹೆಂಗಸರು ಇಷ್ಟಪಡ್ತಾರಂತೆ?
- ನನ್ನ ಸಮಸ್ಯೆಯನ್ನು ನಿನಗೆ ಹೇಳೋದು ಗೊತ್ತಾಗ್ತಾ ಇಲ್ಲ!

• ಲಿಂಗೇಶ, (ಇಮೇಲ್ ಮೂಲಕ)
ಭಟ್ರೇ, ಲವ್ವರುಗಳು ಯಾವ ಭಾಷೆಯಲ್ಲಿ ಮಾತಾಡುತ್ತಾರೆ?
- ಅದು ಎಂಡ್ -ಟು-ಎಂಡ್ ಎನ್‌ಕ್ರಿಪ್ಟ್ ಆಗಿರುತ್ತದೆ!

• ರಮೇಶ ಗೌಡ, ಮಳವಳ್ಳಿ
ಭಟ್ರೇ, ಜಯಪ್ರಕಾಶ ಶೆಟ್ಟರ ಒಂದು ಮಾತು ಈ ಪರಿ ಪ್ರಸಿದ್ಧ ಆಗಿದ್ದೇಯಾ?
- ಅಷ್ಟು ಫೇಮಸ್ ಆಗುತ್ತೆ ಅಂತ ಗೊತ್ತಿದ್ದಿದ್ದರೆ 'ನಿಮಗೆ ಮಾಡಲು ಬೇರೆ ಕೆಲಸ ಇಲ್ವಾ?' ಎಂದು ಬಿಜೆಪಿ ನಾಯಕರಿಗೆ ಹೇಳ್ತಾ ಇದ್ದೆ ಅಂದ್ರಂತೆ ಸಿದ್ದರಾಮಯ್ಯ!

ಡೆಂಘೀ ಜ್ವರದಲ್ಲಿ ಆಯುರ್ವೇದೋಕ್ತ ಉಪಚಾರ

ಮಳೆಗಾಲದಲ್ಲಿ ಜ್ವರದ ಸೋಂಕು ಹಲವರನ್ನು ಕಾಡುತ್ತಿರುವುದನ್ನು ನಾವು ಗಮನಿಸುತ್ತೇವೆ. ಡೆಂಘೀ ಸಹ ಅಂತಹ ಜ್ವರಗಳಲ್ಲಿ ಒಂದು.ಮಳೆಗಾಲದಲ್ಲಿಯೇ ಈ ಸೋಂಕು ಹೆಚ್ಚಾಗುವ ಸಂಭವ ಏಕೆ ಎಂದರೆ ಈ ಕಾಲದಲ್ಲಿ ನಮ್ಮ ಜೀರ್ಣಶಕ್ತಿ, ದೈಹಿಕ ಬಲ ಹಾಗೂ ರೋಗನಿರೋಧಕ ಶಕ್ತಿ ಕಡಿಮೆ ಇರುತ್ತದೆ. ವಾತಾವರಣದ ಪ್ರಭಾವದಿಂದ ನಾವು ಸೇವಿಸುವ ಆಹಾರವು ಹುಳಿಗೊಂಡು ಅದರಿಂದ ದೇಹದಲ್ಲಿ ರಕ್ತ ಮತ್ತು ಪಿತ್ತ-ವಾತಗಳ ಅಸಮತೋಲನ ಕಂಡುಬರುತ್ತದೆ.



ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ

ಡಾ.ಸಾಧನಶ್ರೀ
vveditoped@gmail.com

ಆಯುರ್ವೇದದಲ್ಲಿ ಜ್ವರವನ್ನು ರೋಗಪತಿ ಎಂದು ಕರೆಯಲಾಗಿದೆ. ಏಕೆಂದರೆ, ರೋಗಗಳಲ್ಲಿ ಜ್ವರಕ್ಕೆ ಅತ್ಯಂತ ಪ್ರಾಧಾನ್ಯತೆಯನ್ನು ನೀಡಿದೆ. ಅಲ್ಲದೆ, ರೋಗದ ತೀವ್ರತೆಯನ್ನೂ ಅದು ಸೂಚಿಸುತ್ತದೆ. ಲೋಕದಲ್ಲಿ ಯಾರನ್ನೂ ಬಿಡದ ಈ ಜ್ವರವು ಮೊಟ್ಟ ಮೊದಲ ಬಾರಿಗೆ ಹೇಗೆ ಉತ್ಪತ್ತಿಯಾಯಿತು ಎಂಬ ಪ್ರಶ್ನೆಗೆ ಒಂದು ಸ್ವಾರಸ್ಯಕರವಾದ ಘಟನೆಯ ಉತ್ತರವಿದೆ.

'ದಕ್ಷ ಯಜ್ಞ' ಎಂಬ ಕಥೆಯನ್ನು ಬಹುಶಃ ನಾವೆಲ್ಲರೂ ಕೇಳಿರುತ್ತೇವೆ. ಈ ಒಂದು ರೋಮಾಂಚಕ ಪ್ರಸಂಗದಲ್ಲಿಯೇ ಜ್ವರದ ಉತ್ಪತ್ತಿಯ ಕಥೆಯೂ ಅಡಗಿದೆ. ದಕ್ಷ ಪ್ರಜಾಪತಿಯು ಶಿವನನ್ನು ಅವಮಾನಿಸಲೆಂದೇ ದಕ್ಷ ಯಜ್ಞವನ್ನು ಆಯೋಜಿಸುತ್ತಾನೆ. ತನ್ನ ಮಗಳು ಸತಿ ಮತ್ತು ಅಳಿಯ ಶಿವನಿಗೆ ಈ ಯಜ್ಞಕ್ಕೆ ಆಮಂತ್ರಣ ನೀಡುವುದಿಲ್ಲ. ಆದರೂ ತವರು ಮನೆಯ ವ್ಯಾಮೋಹ ಸತಿಯನ್ನು ಯಜ್ಞಕ್ಕೆ ಸೆಳೆದೊಯ್ಯುತ್ತದೆ. ಶಿವನ ಒಪ್ಪಿಗೆ ಇಲ್ಲದಿದ್ದರೂ ಸತಿ ತಾನೊಬ್ಬಳೇ ತಂದೆಯ ಮನೆಗೆ ಹೋಗಲು ನಿರ್ಧರಿಸುತ್ತಾಳೆ. ಕರೆಯದ ಮಗಳು ಯಜ್ಞಕ್ಕೆ ಬಂದಿದ್ದನ್ನು ಕಂಡು ದಕ್ಷಪ್ರಜಾಪತಿಯು ಅವಳಿಗೆ ಹಾಗೂ ಅವಳ ಪತಿಯಾದ ಶಿವನಿಗೆ ಹೀನಾಯವಾಗಿ ಬೈದು ಅವಮಾನಿಸುತ್ತಾನೆ. ಇಂತಹ ಸ್ಥಿತಿಯಲ್ಲಿ ಒಂದು ಕಡೆ ಪತಿಯ ಮಾತನ್ನು ಕೇಳದೆ ಬಂದಿದ್ದರಿಂದ ಸತಿಯು ಶಿವನ ಬಳಿ ಹಿಂದಿರುಗಿ ಹೋಗುವಂತೆಯೂ ಇರಲಿಲ್ಲ, ಇನ್ನೊಂದು ಕಡೆ ತಂದೆಯ ಕಠೋರವಾದ ಮಾತುಗಳನ್ನು ಹಾಗೂ ಪತಿಗೆ ಆಗುತ್ತಿದ್ದ ಅವಮಾನವನ್ನು ಕೇಳಲು ಅವಳಿಗೆ ಸಾಧ್ಯವಾಗುತ್ತಿರಲಿಲ್ಲ. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಸತಿಗೆ ತನ್ನ ಮುಂದಿನ ಹೆಜ್ಜೆ ಏನಿರಬೇಕು ಎಂಬುದು ತೋಚುತ್ತಿರಲಿಲ್ಲ. ಯಜ್ಞದ ಸಮಯದಲ್ಲಿ ದಕ್ಷಪ್ರಜಾಪತಿಯು ಎಲ್ಲ ದೇವತೆಗಳಿಗೂ ಹವಿಸ್ಸನ್ನು ಕೊಟ್ಟು ರುದ್ರನಿಗೆ ಮಾತ್ರ ರುದ್ರ ಭಾಗವನ್ನು ಕೊಡುವುದಿಲ್ಲ. ಇದನ್ನು ಗಮನಿಸಿದ ಸತಿಯು ಯೋಚಿಸುತ್ತಾಳೆ, ಯಜ್ಞದಲ್ಲಿ ರುದ್ರ ಭಾಗವನ್ನು ಕೊಡದೆ ಹೋದರೆ ಯಜ್ಞ ಸಂಪೂರ್ಣವಾಗುವುದಿಲ್ಲ, ಹಾಗೆಯೇ ಯಜ್ಞ ಕರ್ತೃವಿಗೂ ದೋಷ ಉಂಟಾಗುತ್ತದೆ. ಯಜ್ಞವು ಸಂಪನ್ನವಾಗಬೇಕು ಹಾಗೆಯೇ ತಂದೆಗೂ ದೋಷ ಬರಬಾರದು ಮತ್ತು ಪತಿಯ ಮಾತನ್ನು ಕೇಳದೆ ತಪ್ಪಿದ ಪ್ರಾಯಶ್ಚಿತ್ತವೂ ಆಗಬೇಕು ಎಂದು ಸತಿಯು ಯೋಚಿಸಿ ಯಜ್ಞಕುಂಡಕ್ಕೆ ಹಾರಿಬಿಡುತ್ತಾಳೆ. ಇದನ್ನು ಅರಿತ ಶಿವನು ಅತ್ಯಂತ ಕ್ರೋಧಿತನಾಗಿ ತನ್ನ ಜಟೆಯಿಂದ ವೀರಭದ್ರ ಎಂಬುವವನನ್ನು ಸೃಷ್ಟಿ ಮಾಡುತ್ತಾನೆ. ಇಡೀ ದಕ್ಷಯಜ್ಞವನ್ನು ಧ್ವಂಸ ಮಾಡಲು ಅವನನ್ನು ಕಳುಹಿಸುತ್ತಾನೆ. ವೀರಭದ್ರನು ದಕ್ಷ ಯಜ್ಞದ ಸ್ಥಳಕ್ಕೆ ಧಾವಿಸಿ, ಅಲ್ಲಿದ್ದವರೆಲ್ಲರ ಧ್ವಂಸ ಮಾಡಿ ಇಡೀ ಯಜ್ಞವನ್ನೇ ಚೆಲ್ಲಾಪಿಲ್ಲಿ ಮಾಡುತ್ತಾನೆ. ನಂತರ ಶಿವನ ಬಳಿ ಬಂದು ನೀವು ಹೇಳಿದ ಕೆಲಸವನ್ನು ಮುಗಿಸಿದ್ದೇನೆ, ಇನ್ನು ಮುಂದೆ ನನಗೇನು ಕೆಲಸ ಎಂದು ಕೇಳುತ್ತಾನೆ. ಆಗ ಶಿವನು ಇನ್ನು ಮುಂದೆ ತಪ್ಪು ಮಾಡಿದವರಿಗೆಲ್ಲಾ ಶಿಕ್ಷೆಯನ್ನು ನೀಡಲು ನೀನು 'ಜ್ವರ' ಎಂಬ ರೂಪವನ್ನು ತಾಳು ಎಂದು ಹೇಳುತ್ತಾನೆ. ಈ ರೀತಿಯಾಗಿ ಜ್ವರ ಎಂಬ ಮಹಾರೋಗವು ದಕ್ಷ ಯಜ್ಞದ ಧ್ವಂಸದ ಸಂದರ್ಭದಲ್ಲಿ, ತಪ್ಪು ಮಾಡಿದವರಿಗೆ ಶಿಕ್ಷೆಯ ರೂಪದಲ್ಲಿ ಮೊದಲು ಉಂಟಾಗಿ, ನಂತರ ಎಲ್ಲ ಕಾಲದಲ್ಲಿಯೂ ಯಾವುದೇ ಪ್ರಕಾರದ ಜ್ವರ ಬರಬೇಕಾದರೂ ನಮ್ಮ ಆಹಾರ-ವಿಹಾರ-ವಿಚಾರಗಳಲ್ಲಿ ನಮಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಆಗುವ ತಪ್ಪುಗಳೇ ಕಾರಣವಾಗುತ್ತವೆ.

ಶರೀರ-ಇಂದ್ರಿಯ-ಮನಸ್ಸುಗಳು ಒಟ್ಟೊಟ್ಟಿಗೆ ತಾಪ ಹಾಗೂ ಚಡಪಡಿಕೆಗೆ ಒಳಗಾಗುವುದನ್ನು 'ಜ್ವರ' ಎನ್ನಲಾಗುತ್ತದೆ. ಆಯುರ್ವೇದದಲ್ಲಿ ಜ್ವರ ರೋಗವನ್ನು ಅತ್ಯಂತ ದೀರ್ಘವಾಗಿ ಹಾಗೂ ಸವಿವರವಾಗಿ ಉಲ್ಲೇಖಿಸಿದ್ದಾರೆ. ಹಲವಾರು ರೀತಿಯ ಜ್ವರಗಳ ಬಗ್ಗೆ ಹೇಳಿ ಅದರ ಸೂಕ್ತವಾದ ಚಿಕಿತ್ಸೆಗಳನ್ನು ಸಹ ತಿಳಿಸಿಕೊಟ್ಟಿದ್ದಾರೆ. ಈ ಅನೇಕ ವಿಧವಾದ ಜ್ವರಗಳಲ್ಲಿ ಈಗ ಅತ್ಯಂತ ಚರ್ಚೆಯಲ್ಲಿರುವುದು ಹಾಗೂ ತುಂಬಾ ಜನರನ್ನು ಕಾಡುತ್ತಿರುವುದು ಡೆಂಘೀ ಜ್ವರ. ಇದು ಹೊಸದೇನಲ್ಲ. ಆಯುರ್ವೇದ ಗ್ರಂಥಗಳು ಈ ರೀತಿಯ ಸಾಂಕ್ರಾಮಿಕ ಜ್ವರದ ಬಗ್ಗೆ ವಿವರವಾಗಿ ತಿಳಿಸಿಕೊಟ್ಟಿವೆ. ಆಯುರ್ವೇದದ ಚೌಕಟ್ಟಿನಲ್ಲಿ ಈ ಒಂದು ರೋಗದ ಬಗ್ಗೆ ಕೆಲವು ವಿಷಯಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡೋಣ.

ಮಳೆಗಾಲದಲ್ಲಿ ಜ್ವರದ ಸೋಂಕು ಹಲವರನ್ನು ಕಾಡುತ್ತಿರುವುದನ್ನು ನಾವು ಗಮನಿಸುತ್ತೇವೆ. ಡೆಂಘೀ ಸಹ ಅಂತಹ ಜ್ವರಗಳಲ್ಲಿ ಒಂದು. ಮಳೆಗಾಲದಲ್ಲಿಯೇ ಈ ಸೋಂಕು ಹೆಚ್ಚಾಗುವ ಸಂಭವ ಏಕೆ ಎಂದರೆ ಈ ಕಾಲದಲ್ಲಿ ನಮ್ಮ ಜೀರ್ಣಶಕ್ತಿ, ದೈಹಿಕ ಬಲ ಹಾಗೂ ರೋಗನಿರೋಧಕ ಶಕ್ತಿ ಅತ್ಯಂತ ಕಡಿಮೆ ಇರುತ್ತದೆ. ವಾತಾವರಣದ ಪ್ರಭಾವದಿಂದ ನಾವು ಸೇವಿಸುವ ಆಹಾರವು ಹುಳಿಗೊಂಡು ಅದರಿಂದ ದೇಹದಲ್ಲಿ ರಕ್ತ ಮತ್ತು ಪಿತ್ತ-ವಾತಗಳ ಅಸಮತೋಲನ ಸಹ ಕಂಡುಬರುತ್ತದೆ. ಈ ಆಂತರಿಕ ಬದಲಾವಣೆಯಿಂದ ಮಳೆಗಾಲದಲ್ಲಿ ಡೆಂಘೀ ಜ್ವರ ಹೆಚ್ಚುತ್ತದೆ. ಉಷ್ಣವಲಯ ಮತ್ತು ಅರೆ ಉಷ್ಣವಲಯದ ಪ್ರದೇಶಗಳಲ್ಲಿ ಈ ಡೆಂಘೀ ಜ್ವರ ಜಾಸ್ತಿ. ಏಡಿಸ್ ಈಜಿಪ್ಟಿ ಎಂಬ ಸೊಳ್ಳೆಯ ಜಾತಿಯು ಈ ಡೆಂಘೀ ವೈರಸ್ಸುಗಳ ವಾಹಕಗಳು. ಒಬ್ಬ ಸೋಂಕಿತ ವ್ಯಕ್ತಿಯನ್ನು ಈ ಸೊಳ್ಳೆ ಕಚ್ಚಿ ನಂತರ ಒಬ್ಬ ಆರೋಗ್ಯವಂತನನ್ನು ಪುನಃ ಕಚ್ಚಿದಾಗ ಈ ಸೋಂಕು ಹರಡುತ್ತದೆ.

ಸಾಮಾನ್ಯವಾಗಿ ಈ ಜ್ವರ ನಮ್ಮನ್ನು ಆವರಿಸಲು ನಾವು ಮಾಡುವ ತಪ್ಪುಗಳಾವುವು?

ಜೀರ್ಣಕ್ಕೆ ಜಡವಾದ ಆಹಾರ ಸೇವನೆಯ ಅಭ್ಯಾಸ, ಅಜೀರ್ಣವನ್ನು ನಿರ್ಲಕ್ಷಿಸಿ ತಿನ್ನುವುದು, ಹಸಿವೆ ಇಲ್ಲದಿದ್ದಾಗಲೂ ಮನಬಂದಂತೆ ಆಹಾರ ಸೇವಿಸುವುದು, ಹುಳಿತೇಗು-ಎದೆ ಉರಿ-ಹೊಟ್ಟೆ ಉಬ್ಬರದಂತಹ ಅಜೀರ್ಣ ಲಕ್ಷಣಗಳು ಇದ್ದಾಗಲೂ ಎಂದಿನಂತೆ ಆಹಾರ ಸೇವನೆ ಮುಂದುವರಿಸುವುದು, ತಡರಾತ್ರಿ ನಿದ್ರೆ ಅಥವಾ ರಾತ್ರಿ ಜಾಗರಣೆ ಮಾಡುವುದು, ಹಗಲು ನಿದ್ರಿಸುವುದು, ತಂಗಳು ಮತ್ತು ತಂಪಾದ ಆಹಾರ ಸೇವನೆ, ಶಾರೀರಿಕ ಶಕ್ತಿಯ ಅರಿವಿಲ್ಲದೆ ವ್ಯಾಯಾಮ, ಕೆಲಸ ಮಾಡುವುದು, ಗಾಳಿ, ಮಳೆ, ಶೀತಕ್ಕೆ ಮೈಯೊಡ್ಡಿ ಪ್ರಯಾಣ ಮಾಡುವುದು, ಅತಿಯಾದ ಉಪ್ಪು-ಖಾರ-ಹುಳಿ ಇರುವ ಪದಾರ್ಥಗಳನ್ನು ಸದಾ ಸೇವಿಸುವುದು, ಅತಿಯಾದ ಚಿಂತೆ, ಕೋಪ ಮತ್ತು ಅಸೂಯೆಯಲ್ಲಿ ತೊಡಗಿರುವುದು.

ಡೆಂಗೀ ಜ್ವರದ ಸಾಮಾನ್ಯ ಲಕ್ಷಣಗಳೇನು?

ಅತಿಯಾದ ತೀವ್ರ ತಾಪದ ಜ್ವರ, ಬೆನ್ನುಹುರಿ ನೋವು, ತಲೆ ನೋವು, ಸೊಂಟ ಮೊದಲಾದ ಸಂಧಿಗಳ ನೋವು, ಕಣ್ಣು ಗುಡ್ಡೆಯ ಹಿಂದೆ ನೋವು, ಮಾಂಸಖಂಡ ಮತ್ತು ಸ್ನಾಯುಗಳ ಸೆಳೆತ, ಹಸಿವೆ ಇಲ್ಲದಿರುವುದು, ಹೊಟ್ಟೆ ನೋವು, ವಾಂತಿ ಬೇಧಿ, ಮೈಯಲ್ಲಿ ತುರಿಕೆ ಮತ್ತು ಸುಸ್ತಾಗುವುದು. ಜ್ವರವು ತೀವ್ರವಾದಂತೆ ವಸಡು-ಮೂಗುಗಳಿಂದ ರಕ್ತಸ್ರಾವ, ಮೈ ಮೇಲೆ ದದ್ದು, ಗುಳ್ಳೆಗಳು ಏಳುವುದು, ಅತಿಯಾದ ತುರಿಕೆ, ರಕ್ತಸ್ರಾವದ ನಿಯಂತ್ರಣ ಕಷ್ಟವಾಗುವುದು.

ಈ ರೋಗಕ್ಕೆ ಚಿಕಿತ್ಸೆ ಏನು?

ಸೊಳ್ಳೆ ಕಚ್ಚಿದವರಿಗೆಲ್ಲ ಈ ಜ್ವರ ಬರಬೇಕೆಂದಿಲ್ಲ, ಶರೀರದ ಆಂತರಿಕ ವ್ಯವಸ್ಥೆ ಸರಿ ಇದ್ದು, ಜೀರ್ಣಕ್ರಿಯೆ, ರೋಗ ನಿರೋಧಕ ಶಕ್ತಿ ಉತ್ತಮವಾಗಿದ್ದು, ಬಲ ಚೆನ್ನಾಗಿದ್ದಲ್ಲಿ ಈ ಸೋಂಕು ಬಂದರೂ ಹೆಚ್ಚು ತೊಂದರೆ ಕೊಡದೆ ನಿವಾರಣೆ ಆಗುತ್ತದೆ. ನಿಮ್ಮ ಒಳಗೆ ದೋಷಗಳ ವಿಷಮತೆ ಎಷ್ಟಿದೆ ಅನ್ನುವುದರ ಮೇಲೆ ನಿಮಗೆ ಕಾಣಿಸಿಕೊಳ್ಳುವ ಲಕ್ಷಣಗಳ ತೀವ್ರತೆ ನಿರ್ಧಾರವಾಗುತ್ತದೆ. ಸಕ್ರಮ-ಸಕಾಲ ಆಹಾರ-ವಿಹಾರ-ಔಷಧಗಳಿಂದ ಈ ಜ್ವರದಿಂದ ಅತ್ಯಂತ ಶೀಘ್ರವಾಗಿ ಮುಕ್ತಿ ಪಡೆಯಬಹುದು. ಜ್ವರ ಬಂದ ಕೂಡಲೇ ಆರೋಗ್ಯವನ್ನು ಆದ್ಯತೆಯನ್ನಾಗಿಸಿಕೊಂಡು ಸಂಪೂರ್ಣ ವಿಶ್ರಾಂತಿ ಪಡೆಯಬೇಕು. ದೇಹಕ್ಕಷ್ಟೇ ಅಲ್ಲದೆ ಇಂದ್ರಿಯ ಮತ್ತು ಮನಸ್ಸುಗಳಿಗೂ ವಿಶ್ರಾಂತಿ ಕೊಡಬೇಕು . ಮೊಬೈಲ್ ಫೋನ್, ಲ್ಯಾಪ್‌ಟಾಪ್, ಟಿವಿಗಳನ್ನು ತ್ಯಜಿಸಿ ಮನಸ್ಸಿಗೆ ಮುದ ನೀಡುವಂತಹ ಸಂಗೀತದ ಶ್ರವಣ ಅಥವಾ ಜ್ವರನಿವಾರಕ ಶಕ್ತಿ ಇರುವ ವಿಷ್ಣು ಸಹಸ್ರನಾಮವನ್ನು ಆಲಿಸುವುದು ಒಳ್ಳೆಯದು. ಜ್ವರವಿದ್ದಾಗ ಸ್ನಾನ ಬೇಡ, ಬೆಚ್ಚಗಿನ ನೀರಿನಿಂದ ಅದ್ದಿದ ಮೃದು ಬಟ್ಟೆಯಿಂದ ಮೈಯನ್ನು ಒರೆಸಬಹುದು. ತಲೆಗೆ ತುಪ್ಪ ಅದ್ದಿದ ಹತ್ತಿಯನ್ನು (ಪಿಚು) ಸದಾ ಕಟ್ಟಬೇಕು ಅಥವಾ ನೆಲ್ಲಿಕಾಯಿ ಪುಡಿಯನ್ನು ಮಜ್ಜಿಗೆಯೊಂದಿಗೆ ಕಲಸಿ ತಲೆಗೆ ಲೇಪನ ಮಾಡಿದಾಗ, ಇದು ತಾಪವನ್ನು ಇಳಿಸುವುದರ ಜತೆಗೆ ಜ್ವರಕಾರಕ ದೋಷಗಳನ್ನು ಜೀರ್ಣಾಂಗಕ್ಕೆ ತಂದು ಮಲಮೂತ್ರದ ಮೂಲಕ ದೇಹದಿಂದ ಹೊರ ಹಾಕುತ್ತದೆ. ಹಣೆಗೆ ಸದಾ ತಣ್ಣೀರಿನ ಬಟ್ಟೆ ಅಥವಾ ಶ್ರೀಗಂಧದ ಶೀತ ಲೇಪವನ್ನು ಹಾಕುವುದು ಒಳ್ಳೆಯದು. ವೈದ್ಯರ ಸಲಹೆ ಪಡೆದು ಜ್ವರಹರ, ವಿಷಹರ ಔಷಧಗಳನ್ನು ಅತ್ಯಂತ ಕಡಿಮೆ ಪ್ರಮಾಣದಲ್ಲಿ ತೆಗೆದುಕೊಳ್ಳುವುದರಿಂದ ಸಾಮಾನ್ಯವಾಗಿ ಒಂದೆರಡು ದಿನಗಳಲ್ಲಿ ಜ್ವರ ಇಳಿಯುತ್ತದೆ, ಜತೆಗೆ ರಕ್ತಸ್ರಾವ ಸೋರಿಕೆ, ಪ್ಲೇಟ್ಲೆಟ್‌ಗಳ ಇಳಿಕೆ, ಸುಸ್ತು ಇವುಗಳು ಸಹ ಬೇಗ ಚೇತರಿಕೆ ಆಗುತ್ತದೆ. ವಿವಿಧ ಪಂಚಕರ್ಮ ಚಿಕಿತ್ಸೆ ಹಾಗೂ ರಸಾಯನ ಚಿಕಿತ್ಸೆಗಳನ್ನು ಸಹ ಕೊಟ್ಟು ದೇಹವನ್ನು ಸಹಜ ಸ್ಥಿತಿಗೆ ತಂದು ಪುಷ್ಟಿಯನ್ನು ಹಾಗೂ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲಾಗುತ್ತದೆ.

ಜ್ವರ ಬಂದಾಗ ನಾವು ನಿತ್ಯ ಸೇವಿಸುವ ಆಹಾರವನ್ನೇ ಸೇವಿಸಿದರೆ ಜೀರ್ಣ ಆಗದು. ಆದ್ದರಿಂದ ಇಂತಹ ಸಮಯದಲ್ಲಿ ನಮ್ಮ ಹಸಿವೆಯನ್ನು ಗಮನಿಸಿ ಹಗುರವಾಗಿ ಜೀರ್ಣವಾಗುವ, ಬೇಗ ಬಲವನ್ನು ನೀಡುವ ಆಹಾರ ಸೇವಿಸಬೇಕು. 'ಲಂಘನಂ ಪರಮೌಷಧಮ್' ಎಂದು ಹೇಳುವ ಹಾಗೆ, ಹಸಿವೆಯು ಅತ್ಯಂತ ಕಡಿಮೆ ಇದ್ದಾಗ, ಜ್ವರದಲ್ಲಿ ಉಪವಾಸ ಮಾಡುವುದೇ ಮುಖ್ಯ ಚಿಕಿತ್ಸೆಯಾಗುತ್ತದೆ. ಸ್ವಲ್ಪ ಹಸಿವು ಕಾಣಿಸಿಕೊಂಡಾಗ ಭತ್ತದ ಅರಳಿನ ಪುಡಿ, ಜೋಳದ ಪುಡಿ, ರವೆಯನ್ನು ಗಂಜಿಯಂತೆ ಮಾಡಿ ಸೇವಿಸಬೇಕು. ಅಕ್ಕಿ ಮತ್ತು ಹೆಸರುಬೇಳೆಯ ಹುರಿದ ಗಂಜಿಯನ್ನು ಸಹ ನೀಡಬಹುದು. ಅರಳನ್ನು ಪುಡಿ ಮಾಡಿ ಅದಕ್ಕೆ ದಾಳಿಂಬೆ ರಸವನ್ನು (ಬೀಜ ತೆಗೆದ) ಹಾಕಿ ಕುಡಿಯಬಹುದು. ಹೆಸರುಬೇಳೆ ಬೇಯಿಸಿದ ನೀರಿಗೆ ಚಿಟಿಕೆ ಸೈಂಧವ ಲವಣ ಸೇರಿಸಿ ಕುಡಿಯಲು ಕೊಡಬಹುದು. ನಂತರ, ಹಸಿವೆ ಹೆಚ್ಚಾದಂತೆ ಹುರಿದ ಅಕ್ಕಿಯ ಮೆತ್ತಗಿನ ಅನ್ನಕ್ಕೆ, ಕಟ್ಟು ಸಾರುಗಳನ್ನು ಬೆರೆಸಿ ಕೊಡಬಹುದು. ಅನ್ನದ ಜತೆ ನೆಲ್ಲಿಕಾಯಿ ಸಾರು, ದಾಳಿಂಬೆ ಸಾರು, ಹೆಸರುಬೇಳೆ ಕಟ್ಟು ಸಾರು ಒಳ್ಳೆಯದು. ಮತ್ತಷ್ಟು ಜೀರ್ಣಶಕ್ತಿ ಹೆಚ್ಚಾದಾಗ ಆಹಾರದೊಂದಿಗೆ ಸ್ವಲ್ಪ ಬೆಣ್ಣೆಯನ್ನು ಬಳಸುವುದರಿಂದ ರಕ್ತ ಪಿತ್ತಗಳು ಶಮನವಾಗಿ ಜೀರ್ಣಶಕ್ತಿ ವೃದ್ಧಿಯಾಗುತ್ತದೆ ಹಾಗೂ ದೇಹ ಬಲವೂ ಹೆಚ್ಚುತ್ತದೆ. ಜ್ವರ ಬಂದಾಗ ಕುಡಿಯಲು ಜೀರ್ಣಕ್ರಿಯೆ ಹೆಚ್ಚಿಸುವ ಹಾಗೂ ಬಾಯಾರಿಕೆಯನ್ನು ಶಮನ ಮಾಡುವ, ರಕ್ತವನ್ನು ಸಹ ತಂಪು ಮಾಡುವ ಧನಿಯಾ, ಶ್ರೀಗಂಧ, ನಾಗರ ರಹಿತ ಷಡಂಗ ಚೂರ್ಣ, ಲಾವಂಚ, ಒಣದ್ರಾಕ್ಷಿ, ಮುಸ್ತ ಇತ್ಯಾದಿಗಳನ್ನು ಹಾಕಿ ಕುದಿಸಿ ಆರಿಸಿದ ನೀರನ್ನು ಸೇವಿಸಬಹುದು.

ಉಪ್ಪು-ಖಾರ-ಹುಳಿ ಹೆಚ್ಚಿರುವ ಪದಾರ್ಥಗಳು, ಎಣ್ಣೆಯ ಖಾದ್ಯಗಳು, ಮೊಸರು, ಉದ್ದಿನ ಪದಾರ್ಥಗಳು, ಹಸಿ ತರಕಾರಿ, ಫ್ರೂಟ್ ಜ್ಯೂಸ್, ಬ್ರೆಡ್, ಮೊಳಕೆ ಕಾಳುಗಳು ಖಂಡಿತ ಬೇಡ. ಗೂಗಲ್ ಅನ್ನು ನೋಡಿ ಬ್ರೊಕೋಲಿ, ಪಪ್ಪಾಯ, ಪಪ್ಪಾಯ ಎಲೆ, ಅತಿಯಾದ ನೀರು ಸೇವನೆ, ಹುಳಿ ಹಣ್ಣುಗಳ ರಸಗಳನ್ನು ಸೇವಿಸುವುದು-ಇವೆಲ್ಲಾ ಮತ್ತಷ್ಟು ರಕ್ತವನ್ನು ಕೆಡಿಸಿ ಜ್ವರವನ್ನು ಉಲ್ಬಣಗೊಳಿಸುತ್ತದೆ. ಆಯುರ್ವೇದ ಗ್ರಂಥಗಳು ಈ ರೀತಿಯ ಹಸಿಯಾದ ಪದಾರ್ಥಗಳನ್ನು ಜ್ವರದಲ್ಲಿ ಆಹಾರವಾಗಿ ಹೇಳಿಲ್ಲ. ನೆನಪಿರಲಿ, ಜ್ವರವಿದ್ದಾಗ ದಾಳಿಂಬೆ ಹಣ್ಣು ಮತ್ತು ಒಣದ್ರಾಕ್ಷಿ ಸೇವಿಸಬಹುದೇ ಹೊರತು ಮತ್ತಾವ ಹಣ್ಣುಗಳನ್ನು ಸಹ ಸೇವಿಸುವ ಹಾಗೆ ಇಲ್ಲ. ಬಳ್ಳಿ ತರಕಾರಿಗಳಾದ ಪಡವಲಕಾಯಿ, ಸೋರೆಕಾಯಿ, ಹೀರೆಕಾಯಿ, ನೆಲ್ಲಿಕಾಯಿ, ಬೂದು ಗುಂಬಳಕಾಯಿಗಳನ್ನು ಜೀರ್ಣಶಕ್ತಿಗೆ ಅನುಗುಣವಾಗಿ ಬಳಸಬಹುದು. ಗೆಡ್ಡೆ ತರಕಾರಿಗಳು, ಸೊಪ್ಪುಗಳು ಸುತರಾಂ ವರ್ಜ್ಯ.

ಇದರ ಜತೆಗೆ ಸೊಳ್ಳೆಗಳಿಂದಲೂ ರಕ್ಷಿಸಿಕೊಳ್ಳುವುದು ಬಹಳ ಮುಖ್ಯವಾಗುತ್ತದೆ. ಮನೆಯ ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿರಿಸಿಕೊಂಡು, ಸೊಳ್ಳೆ ಪರದೆಗಳನ್ನು ಬಳಸುವುದು ಒಳ್ಳೆಯದು. ಹಾಗೆಯೇ ನಿತ್ಯವೂ ಬೆಳಗ್ಗೆ ಹಾಗೂ ಸಂಜೆ ವೇಳೆ ಮನೆಗಳಿಗೆ ಔಷಧೀಯ ಧೂಪನವನ್ನು ಮಾಡುವುದು ಲಾಭಕಾರಿ.

ಈ ಜ್ವರವೇ ಬಾರದ ಹಾಗೆ ನಮ್ಮನ್ನು ರಕ್ಷಿಸಿಕೊಳ್ಳುವುದು ಹೇಗೆ?

ಮೂರು ಆಹಾರ ಕಾಲವನ್ನು ನಿಯಮಿತಗೊಳಿಸಿಕೊಂಡು ಆ ಸಮಯದಲ್ಲಷ್ಟೇ ಹಿತ ಆಹಾರವನ್ನು, ತಾಜಾ ಆಹಾರವನ್ನು, ಬಿಸಿ ಇದ್ದಾಗ ತುಪ್ಪವನ್ನು ಹಾಕಿಕೊಂಡು, ಜತೆಗೆ ಕುದಿಸಿದ ನೀರನ್ನು ಆಹಾರದೊಟ್ಟಿಗೆ ಗುಟುಕು ಗುಟುಕಾಗಿ ಸೇವಿಸಬೇಕು. ರಾತ್ರಿ ಬೇಗ ಮಲಗಿ, ಸೂರ್ಯೋದಯದ ಮುಂಚೆ ಏಳುವ ಅಭ್ಯಾಸವನ್ನು ಮಾಡಿಕೊಳ್ಳಬೇಕು. ಖಾಲಿ ಹೊಟ್ಟೆಯಲ್ಲಿ ಮಿತವಾಗಿ ವ್ಯಾಯಾಮ ಮಾಡುವುದು ಮತ್ತು ಬೆಚ್ಚಗಿನ ಎಳ್ಳೆಣ್ಣೆ ಅಥವಾ ಕೊಬ್ಬರಿ ಎಣ್ಣೆ ಹಚ್ಚಿಕೊಂಡು ಸ್ನಾನ ಮಾಡುವುದು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವುದಲ್ಲದೆ ಸೊಳ್ಳೆಯಂತಹ ವಾಹಕಗಳು ಚರ್ಮದ ಮೂಲಕ ವೈರಾಣುಗಳನ್ನು ದೇಹದ ಒಳಗೆ ತಲುಪಿಸುವುದನ್ನು ತಡೆಯುತ್ತದೆ. ಮಾನಸಿಕ ನೆಮ್ಮದಿಯ ಕಡೆ ಗಮನ ಹರಿಸಿ ನಿತ್ಯ ಸಂತೋಷವಾಗಿ ಇರುವುದನ್ನು ಅಭ್ಯಾಸ ಮಾಡಿಕೊಳ್ಳುವುದು ಸಹ ರೋಗ ನಿವಾರಕವಾಗಿ ಪರಿಣಮಿಸಲ್ಪಡುತ್ತದೆ.

ಸ್ನೇಹಿತರೆ, ಒಂದು ದೀಪವು ನಿರಂತರವಾಗಿ ಉರಿಯಬೇಕಾದರೆ ಎರಡು ವಿಚಾರಗಳು ಅತ್ಯವಶ್ಯಕ. ಒಂದು-ಹುಳಹುಪ್ಪಟೆಗಳಿಂದ, ಜೋರಾಗಿ ಬೀಸುವ ಗಾಳಿ ಮಳೆಗಳಿಂದ ಅದನ್ನು ರಕ್ಷಿಸಬೇಕು. ಹಾಗೆಯೇ, ಎರಡನೆಯದಾಗಿ ದೀಪದಲ್ಲಿ ಯಾವಾಗಲೂ ಎಣ್ಣೆ ಬತ್ತಿಗಳು ಸಾಕಷ್ಟು ಇರುವಂತೆ ನೋಡಿಕೊಳ್ಳಬೇಕು. ದೀಪದಂತೆಯೇ ನಮ್ಮ ದೇಹವು ಸಹ. ಅನೇಕ ಪ್ರಕಾರದ ಬ್ಯಾಕ್ಟೀರಿಯಾಗಳು, ವೈರಸ್‌ಗಳು ಸಾಂಕ್ರಾಮಿಕ ಜ್ವರಗಳಿಗೆ ಕಾರಣ ಅಂತ ಹೇಳುತ್ತೇವೆ. ದೀಪದ ಉರಿಯನ್ನು ಹಾಳು ಮಾಡುವ ಒಂದು ಹುಳವನ್ನು ಓಡಿಸಿದರೆ, ಸ್ವಲ್ಪ ಹೊತ್ತಿಗೆ ಇನ್ನೊಂದು ಯಾವುದೋ ಹುಳ ಬರಬಹುದು. ಹೀಗೆ, ಎಷ್ಟು ಹೊತ್ತು, ಎಷ್ಟು ಬಾರಿ ಈ ಕ್ರಿಮಿಕೀಟಗಳನ್ನು ದೀಪದಿಂದ ಓಡಿಸಲು ಸಾಧ್ಯ? ಅದರ ಬದಲಿಗೆ, ಯಾವ ಕ್ರಿಮಿ-ಕೀಟವು ಸಹ ದೀಪದ ಬಳಿ ಬರದಂತೆ ಗಾಜಿನಂತಹ ಒಂದು ರಕ್ಷಾಕವಚ ಇದ್ದರೆ ಅದು ದೀಪವನ್ನು ಸದಾ ರಕ್ಷಿಸುತ್ತದೆ. ಇದೇ ರೀತಿ, ನಮ್ಮ ಸುತ್ತಲೂ ಅನೇಕ ಸೂಕ್ಷ್ಮಜೀವಿಗಳು ಇರುವುದರಲ್ಲಿ ಯಾವ ಸಂಶಯವೂ ಇಲ್ಲ. ಒಂದೊಂದನ್ನೇ ಓಡಿಸುತ್ತಾ ಕೂರುವುದು ಅಸಾಧ್ಯದ ಕೆಲಸ. ಅದರ ಬದಲಿಗೆ ಅವುಗಳು ಶರೀರದ ಒಳಗೆ ಬರದಂತೆ ನೋಡಿಕೊಳ್ಳುವುದು ಜಾಣತನ. ಹಾಗೆಯೇ, ದೀಪದಲ್ಲಿ ಎಣ್ಣೆಯೂ ಖಾಲಿಯಾಗದಂತೆ ನೋಡಿಕೊಳ್ಳಬೇಕು. ನಮ್ಮ ಆರೋಗ್ಯದ ವಿಷಯದಲ್ಲಿಯೂ ಉತ್ತಮವಾದ ಜೀವನ ಶೈಲಿಯಿಂದ ದೇಹವನ್ನು ಸದೃಢವಾಗಿ ಸದಾ ಇರುವಂತೆ ಕಾಪಾಡಿಕೊಂಡು, ಉತ್ತಮವಾದ ಆಂತರಿಕ ಪೋಷಣೆಯನ್ನು ಆಹಾರದ ಮೂಲಕ, ವಿಚಾರದ ಮೂಲಕ ನೀಡುತ್ತಾ ಹೋದರೆ ಯಾವ ಸೂಕ್ಷ್ಮಜೀವಿಗಳು ಒಳಕ್ಕೆ ಬಂದರೂ ಏನೂ ಮಾಡಲಾರವು. ಈ ಎರಡನ್ನು ಸರಿಯಾದ ರೀತಿಯಲ್ಲಿ ನಾವು ಮಾಡಿದರೆ ಡೆಂಘೀ ಅಲ್ಲದೆ ಮುಂದೆ ಬರಬಹುದಾದ ಎಂತಹ ಭಯಾನಕ ಜ್ವರಗಳನ್ನು ಸಹ ತಡೆಗಟ್ಟಬಹುದು. This is the best Health insurance!

ವಿಶ್ವಕಪ್ ಮುಡಿಗೇರಲು ಆ ಕ್ಯಾಚ್ ಮಾತ್ರ ಕಾರಣವೇ?

ಗ್ರೌಂಡ್ ರಿಪೋರ್ಟ್

ಪೃಥ್ವಿರಾಜ್ ಕುಲ್ಕರ್ಣಿ
vveditoped@gmail.com

1983ರ ವಿಶ್ವಕಪ್ ಪೂರ್ವದಲ್ಲಿ ಭಾರತಕ್ಕೆ ಕ್ರಿಕೆಟ್‌ನಲ್ಲಿ ಇದ್ದ ಗೌರವ ಕ್ರಿಕೆಟ್ ಅಭಿಮಾನಿಗಳಿಗೆ ಕಹಿ ನೆನಪು ಎನ್ನಬಹುದು. ಅದನ್ನು ಯಾರು ಬಲ್ಲರು, ಭಾರತ ದೇಶದಲ್ಲಿ ಕ್ರಿಕೆಟ್‌ನಲ್ಲಿ ಅಲ್ಪ ಯಶಸ್ಸು ಕಂಡರೆ ಸಾಕು, ಕೆಲವು ದೇಶಗಳ ಕಣ್ಣು ಕೆಂಪಾಗಿ ಬಿಡುತ್ತದೆ. ಇದು ಈಗಿನ ಸಂಪ್ರದಾಯ ಅಲ್ಲ. 1983ರಿಂದಲೂ ಅದೇ ಪದ್ಧತಿ. ಭಾರತ ತನ್ನ ಪ್ರಥಮ ವಿಶ್ವಕಪ್ ಗೆಲ್ಲುವ ಮೊದಲು ನಾವು ವಿಶ್ವಕಪ್ ಗೆಲ್ಲುತ್ತೇವೆ ಎಂಬ ವಿಷಯ ನಮ್ಮ ದೇಶದ ಅಭಿಮಾನಿಗಳು ಅಲ್ಲ, ಗೆದ್ದ ಆಟಗಾರರೇ ನಂಬುತ್ತಿರಲಿಲ್ಲ. ಅದನ್ನು ಖ್ಯಾತ ಕಪಿಲ್ ಶರ್ಮ ಶೋನಲ್ಲಿ 83 ರ ತಂಡದ ಆಟಗಾರರೇ ಹೇಳಿದ್ದಾರೆ.

ಬೇರೆ ದೇಶದವರಂತೂ ಬಿಡಿ ಭಾರತೀಯರು ಬ್ಯಾಟು-ಬಾಲು ಹಿಡಿದರೆ ನಗುತ್ತಿದ್ದರು. ಇಂಗ್ಲೆಂಡ್, ಆಸ್ಟ್ರೇಲಿಯಾ ಪತ್ರಕರ್ತರು ಭಾರತವನ್ನು ಅಪಹಾಸ್ಯ ಮಾಡುತ್ತಿದ್ದರು. 83ರ ವಿಶ್ವಕಪ್ ಸಂದರ್ಭದಲ್ಲಿ ಇಂಗ್ಲೆಂಡ್‌ನ ಖ್ಯಾತ ಕ್ರಿಕೆಟ್ ಪತ್ರಕರ್ತ ಡೇವಿಡ್ ಫ್ರಿತ್ ಒಂದು ವೇಳೆ ಭಾರತ ಈ ಬಾರಿ ವಿಶ್ವಕಪ್ ಗೆದ್ದರೆ, ನಾನು ಬರೆದ ಲೇಖನವನ್ನು ತಿನ್ನುತ್ತೇನೆ ಎಂದು ಬರೆದುಕೊಂಡಿದ್ದರು. ಅದರಂತೆ ವಿಶ್ವಕಪ್ ಗೆದ್ದ ಮೇಲೆ ತಿಂದಿದ್ದರು. ಈಗಲೂ ಆಗುತ್ತಿರುವುದು ಅದೇ! ಭಾರತ ಟಿ20 ವಿಶ್ವಕಪ್ ಗೆದ್ದಿದ್ದೇ ಸರಿ ಗೆಲುವಿನ ಬಗ್ಗೆ ಅನುಮಾನ, ತಗಾದೆ ತಗೆಯಲು ಆರಂಭಿಸಿದ್ದಾರೆ. ಪಾಕಿಸ್ತಾನ ಪತ್ರಕರ್ತರೊಬ್ಬ ವೇಗಿ ಬುಮ್ರಾ ಅವರ ಬೌಲಿಂಗ್ ಶೈಲಿಯ ಬಗ್ಗೆ ಕ್ಯಾತೆ ತಗೆದಿದ್ದಾನೆ. ಅದು ಪಾಕಿಸ್ತಾನದ ಚಟಾ! ವಿಷಯ ಏನೆಂದರೆ ಆಸ್ಟ್ರೇಲಿಯಾದ ಕೆಲವರೂ ಸಹ ಅಂತಹ ಹುಚ್ಚು ಕಲ್ಪನೆಗೆ ಬಿದ್ದಿದ್ದಾರೆ.

ಫೈನಲ್ ಪಂದ್ಯದಲ್ಲಿ ಕೊನೆಯಲ್ಲಿ ಸೂರ್ಯಕುಮಾರ್ ಹಿಡಿದಿದ್ದ ಗೇಮ್ ಚೆಂಜಿಂಗ್ ಕ್ಯಾಚ್ ಬಗ್ಗೆ ಸುಳ್ಳು ಅನುಮಾನ ಒಂದನ್ನು ಒಡ್ಡುತ್ತಿದ್ದಾರೆ. ಹೌದು ವಿಷಯ ಅಲ್ಪ ವಿವಾದಾತ್ಮಕವಾಗಿತ್ತು. ಆದರೆ ಮೈದಾನದಲ್ಲಿದ್ದ ಕ್ಯಾಮೆರಾಗಳು ಕ್ಯಾಚ್ ಬಗ್ಗೆ ಇದ್ದ ಅನುಮಾನಗಳನ್ನು ದೂರು ಮಾಡುವಂತೆ ತೋರಿಸಿವೆ. ಆದರೆ ಕೆಲವರು ಮಾತ್ರ ಭಾರತವನ್ನು ವಿರೋಧಿಸುವ ಭರದಲ್ಲಿ ಅದನ್ನೂ ಸಹ ಸುಳ್ಳು ಅಥವಾ ಸತ್ಯ ಕಂಡಿಲ್ಲ ಎನ್ನುತ್ತಿದ್ದಾರೆ. ಆದರೆ ಅದನ್ನು ಗಂಭಿರವಾಗಿ ಗಮನಿಸಿದಾಗ ಸೂರ್ಯಕುಮಾರ್ ಯಾದವ್ ಅವರು ಆ ಕ್ಯಾಚ್ ಅನ್ನು ವಿವಾದವಾಗದಂತೆ ಹಿಡಿದಿದ್ದಾರೆ. ಆದರೂ ಕೆಲವರು ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಸೂರ್ಯಕುಮಾರ್ ಯಾದವ್ ಅವರ ಕಾಲು ಬೌಂಡರಿ ಲೈನ್‌ಗೆ ಮುಟ್ಟಿರುವ ವಿಡಿಯೊ ಒಂದನ್ನು ಹಾಕಿ ತಗಾದೆ ತೆಗೆಯಲಾರಂಭಿಸಿದ್ದಾರೆ. ಅದರಲ್ಲೂ ಆಸ್ಟ್ರೇಲಿಯಾದ ಪತ್ರಕರ್ತರು ಭಾರತ ವಿಶ್ವಕಪ್ ಅನ್ನು ಮೋಸ ಮಾಡಿ ಗೆದ್ದಿದೆ ಎನ್ನುವಂತೆ ಹೇಳುತ್ತಿದ್ದಾರೆ. ಆದರೆ ಸ್ವತಃ ಡೇವಿಡ್ ಮಿಲ್ಲರ್ ಅವರೇ ಈ ನಿರ್ಣಯದ ಬಗ್ಗೆ ಬೇಸರವಿಲ್ಲದೇ ಮರಳಿದ್ದರು. ಪ್ರಮುಖವಾಗಿ ಫೈನಲ್ ಪಂದ್ಯವಾಡಿದ್ದ ದಕ್ಷಿಣಾ ಆಫ್ರಿಕಾದಿಂದ ಇಂತಹ ತಗಾದೆ ಬಂದಿಲ್ಲ. ಈ ತಗಾದೆಗೆ ವಿಷಯವೆಂದರೆ, ಆಸ್ಟ್ರೇಲಿಯಾಗೆ ಭಾರತದ ಕ್ರಿಕೆಟ್ ಯಶಸ್ಸನ್ನು ಸಹಿಸಿಕೊಳ್ಳಲು ಆಗುತ್ತಿಲ್ಲ. ಇದಕ್ಕೆ ಉದಾಹರಣೆ ಏನೆಂದರೆ, ಭಾರತ ಏನಾದರೂ ಸಾಧಿಸಿದಾಗ ಯಾವುದಾದರೂ ಒಂದು ತಗಾದೆ ಬಂದೆ ಬಂದಿರುತ್ತದೆ. ಒಂದು ಕಾಲದಲ್ಲಿ ಎಲ್ಲಿ ಇದ್ದ ಭಾರತ ಈಗ ಯಾವ ಮಟ್ಟಿಗೆ ಬೆಳೆದು ನಿಂತಿದೆ ಎಂಬ ಸತ್ಯ ಆಸ್ಟ್ರೇಲಿಯಾದ ಕ್ರಿಕೆಟ್ ಅಭಿಮಾನಿಗಳಿಗೆ ನಂಬಲು ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದಲೇ ಅವರು ಇಂತಹ ತಗಾದೆ ತೆಗೆಯುತ್ತಾ ಕೂತಿದ್ದಾರೆ.

1983ರ ಪೂರ್ವದಲ್ಲಿ ಭಾರತದ ಸೋಲಿಗೆ ನಗುತ್ತಿದ್ದ ಆಸ್ಟ್ರೇಲಿಯಾ ಇದೀಗ ತಗಾದೆ ತಗೆಯುತ್ತಿದೆ. 83ರ ಪೂರ್ವದಲ್ಲಿ ಭಾರತಕ್ಕೆ ಕ್ರಿಕೆಟ್‌ನಲ್ಲಿ ಅವಮಾನಿಸಲಾಗುತ್ತಿತ್ತು. ಆದರೆ 2011ರ ಏಕದಿನ ವಿಶ್ವಕಪ್ ಗೆದ್ದ ಮೇಲೆ ಭಾರತಕ್ಕೆ ಅದೆಲ್ಲಿಲ್ಲದ ಗೌರವ ಸಿಕ್ಕಿತು. 83ರ ವಿಶ್ವಕಪ್ ಭಾರತಕ್ಕೆ ಬರೀ ವಿಶ್ವಕಪ್ ಆಗಿರಲಿಲ್ಲ ಅದು ಸೋಲಿನ ಸುಳಿಯಲ್ಲಿ ಸಿಲುಕಿ ಅವಮಾನ ತಿಂದಿದ್ದ ಭಾರತಕ್ಕೆ ಹೆಡೆ ಎತ್ತಿ ನಿಲ್ಲುವಂತೆ ಮಾಡಿದ್ದ ಗೆಲುವಾಗಿತ್ತು. ಭಾರತದ ಕ್ರಿಕೆಟ್ ಬಗ್ಗೆ ನೋಡುವಾಗ ಅಥವಾ ಇತಿಹಾಸದ ಬಗ್ಗೆ ಮಾತನಾಡುವಾಗ, ಮಹಾರಾಜ ಪಟಿಯಾಲಾ ಅವರ ಹೆಸರನ್ನು ಪ್ರಸ್ತಾಪಿಸಲೇಬೇಕು. ಬ್ರಿಟೀಷರ ಆಳ್ವಿಕೆಯಲ್ಲಿ ಭಾರತಕ್ಕೆ ತನ್ನದೇ ಕ್ರಿಕೆಟ್ ತಂಡವನ್ನು ಕಟ್ಟುವ ಶಕ್ತಿ ಇದ್ದರೂ, ಆರ್ಥಿಕ ಶಕ್ತಿ ಇರಲಿಲ್ಲ ಎನ್ನಬಹುದು. ಆದರೆ ಮಹಾರಾಜ ಪಟಿಯಾಲಾ ಅವರು ಪಟಿಯಾಲಾ 11 ಎಂಬ ತಂಡವನ್ನು ನಿರ್ಮಿಸಿ ಸ್ವಂತ ಖರ್ಚಿನಿಂದ ತಂಡವನ್ನು ಹಲವಾರು ಪ್ರವಾಸಕ್ಕೆ ಕರೆದುಕೊಂಡು ಹೋಗಿ ಆಡಿದ್ದರು. ಆದರೆ, ಭಾರತ ತಂಡ ಪ್ರಥಮ ಅಧಿಕೃತ ಟೆಸ್ಟ್ ಪಂದ್ಯವನ್ನು ಆಡಲು 1932ರವರೆಗೂ ಕಾಯಬೇಕಾಯಿತು. ಅದರಂತೆ ಭಾರತ ತನ್ನ ಪ್ರಥಮ ಪಂದ್ಯ ಗೆಲ್ಲಲು 1952ರ ವರೆಗೂ ಕಾಯಬೇಕಾಯಿತು. ಭಾರತ ಕ್ರಿಕೆಟ್ ತಂಡವನ್ನು ಮುಂದೆ ಕಪಿಲ್ ದೇವ್, ಸುನಿಲ್ ಗವಸ್ಕರ್ ಹಾಗೂ ಇನ್ನಿತರ ಆಟಗಾರರು ಬಲಿಷ್ಠಗೊಳಿಸಿದರು. ಆದರೂ ಭಾರತ ಒಂದೇ ಒಂದು ವಿಶ್ವಕಪ್ ಪಂದ್ಯವು ಕೂಡ ಗೆದ್ದಿರಲಿಲ್ಲ. ಅದನ್ನು ನೋಡಿ ನಗುತ್ತಿದ್ದ ಆಸ್ಟ್ರೇಲಿಯಾಗೆ ಭಾರತ ನಿರ್ಮಿಸಿರುವ ದಾಖಲೆ ಮತ್ತು ಯಶಸ್ಸುಗಳನ್ನು ಅರಗಿಸಿಕೊಳ್ಳಲು ಆಗುತ್ತಿಲ್ಲ.

1983ರ ವಿಶ್ವಕಪ್ ಸಂದರ್ಭದಲ್ಲಿ ಸೋಲಿನ ಸುಳಿಯಲ್ಲಿ ಸಿಲುಕಿದ್ದ ಭಾರತ ಕ್ರಿಕೆಟ್ ತಂಡಕ್ಕೆ ಅಪಹಾಸ್ಯ ಮಾಡಲಾಗುತ್ತಿತ್ತು. ಭಾರತ ಬಳಿ ಬಲಿಷ್ಠ ಆಟಗಾರರು ಇದ್ದರೂ, ಸಹ ವೆಸ್ಟ್ ಇಂಡೀಸ್‌ದಂತಹ ವಿಶ್ವ ಚಾಂಪಿಯನ್ ವಿರುದ್ಧ ಆಡುವ ಸಾಮರ್ಥ್ಯ ಇಲ್ಲವೆಂಬ ವದಂತಿ ಇತ್ತು. ಅದರಲ್ಲೂ ವಿಶ್ವಕಪ್‌ನಲ್ಲಿ ಒಂದು ಪಂದ್ಯವನ್ನು ಭಾರತ ಗೆದ್ದಿರಲಿಲ್ಲ. ನಾಯಕ ಕಪಿಲ್ ದೇವ್ ಲಾರ್ಡ್ಸ್‌ನಲ್ಲಿ, (ವಿ ಆರ್ ಹಿಯರ್ ಟು ವಿನ್) ಎಂದುಬಿಟ್ಟಿದ್ದರು. ಇದನ್ನು ಕೇಳಿದ ಅಲ್ಲಿದ್ದ ಪತ್ರಕರ್ತರು ನಕ್ಕು ಬಿಟ್ಟಿದ್ದರು. ಅದಲ್ಲದೆ ಖ್ಯಾತ ಕ್ರಿಕೆಟ್ ಪತ್ರಕರ್ತ ಡೇವಿಡ್ ಫ್ರೀಥ್ ಒಂದು ವೇಳೆ ಭಾರತ ವಿಶ್ವಕಪ್ ಗೆದ್ದರೆ ನಾನು ಬರೆದ ಲೇಖನ ತಿನ್ನುತ್ತೇನೆ ಎಂದು ಬರೆದುಕೊಂಡಿದ್ದರು. ಆದರೆ ಚಾಣಾಕ್ಷ ಆಟದಿಂದ ಭಾರತ ಪ್ಲೇ ಆಫ್ ತಲುಪಿಬಿಟ್ಟಿತು. ಯಾವ ವಿಶ್ವ ಚಾಂಪಿಯನ್ ಎನಿಸಿಕೊಂಡಿದ್ದ ವೆಸ್ಟ್ ಇಂಡೀಸ್ ವಿರುದ್ಧ ಫೈನಲ್‌ನಲ್ಲಿ ಅತಿ ಕಡಿಮೆ ರನ್ ಡಿಫೆಂಡ್ ಮಾಡಿಕೊಂಡು ಗೆದ್ದು ಬಿಗಿತ್ತು. ಅದಾದ ಮೇಲೆ ಭಾರತ ಕ್ರಿಕೆಟ್ ಲೋಕದಲ್ಲಿ ಅಚ್ಚಳಿಯದ ಇತಿಹಾಸಗಳನ್ನು ಸೃಷ್ಟಿ ಮಾಡುತ್ತಲೇ ಬಂದಿದೆ. 83ರ ವಿಶ್ವಕಪ್ ನಂತರ ಭಾರತ ತಂಡಕ್ಕೆ ಪ್ರಭಾವಿ ನಾಯಕ ಸೌರವ್ ಗಂಗೂಲಿ ಅವರು ಭಾರತ ತಂಡವನ್ನು ಬಲಿಷ್ಠವಾಗಿ ಕಟ್ಟಿ ಆಗಿನ ಸೋಲಿನ ಸುಳಿಯಲ್ಲಿ ಸಿಲುಕಿದ ಭಾರತ ತಂಡವನ್ನು ಸೋಲಿಸುವುದೇ ವಿಶ್ವ ಚಾಂಪಿಯನ್ ತಂಡಗಳಿಗೆ ಸವಾಲಾಗುವಂತೆ ಮಾಡಿದ್ದರು. ಕ್ರಿಕೆಟ್ ದೇವರು ಸಚಿನ್ ತೆಂಡೂಲ್ಕರ್ ಅವರ ಆಟ ಇಡೀ ವಿಶ್ವವನ್ನೇ ಭಾರತದತ್ತ ಸೆಳೆದಿತ್ತು. ಇನ್ನು 2004ರಲ್ಲಿ ಪದಾರ್ಪಣೆ ಮಾಡಿದ್ದ ಪ್ರಭಾವಿ ಆಟಗಾರ ಕ್ಯಾಪ್ಟನ್ ಕೂಲ್ ಮಹೇಂದ್ರ ಸಿಂಗ್ ಧೋನಿ ಕ್ರಿಕೆಟ್ ಜಗತ್ತಿನ ಇತಿಹಾಸವನ್ನೇ ಬದಲಾಯಿಸಿಬಿಟ್ಟರು. ಯಾವ ಭಾರತ ತಂಡಕ್ಕೆ ಅಪಹಾಸ್ಯ ಮಾಡುತ್ತಿದ್ದರೋ ಅದೇ ಭಾರತ ತಂಡವನ್ನು ಗಗನದೆತ್ತರ ಬೆಳೆಸಿಬಿಟ್ಟರು.

ಧೋನಿ ನಾಯಕರಾಗಿದ್ದಾಗ ಆಸ್ಟ್ರೇಲಿಯಾ, ಭಾರತ ಟೆಸ್ಟ್ ಸರಣಿಯೊಂದರಲ್ಲಿ ಭಾರತ ಗೆಲುವು ಸಾಧಿಸಿತ್ತು. ಆಗ ಇಡೀ ವಿಶ್ವವೇ ಈ ಸಾಧನೆಗೆ ಶ್ಲಾಘಿಸಿತ್ತು. ಆದರೆ ಧೋನಿ ಮಾತ್ರ ಏನೂ ಆಗಿಲ್ಲ ಎಂಬಂತೆ ಸುಮ್ಮನಿದ್ದರು. ಅದಲ್ಲದೇ, ತಂಡದ ಆಟಗಾರರನ್ನೂ ಸಹ ಯಾವುದೇ ಸಂಭ್ರಮಾಚರಣೆ ಮಾಡದಂತೆ ಹೇಳಿದ್ದರು. ಇದರ ಸಂದೇಶ ಭಾರತದ ಪಾಲಿಗೆ ಆಸ್ಟ್ರೇಲಿಯಾ ದೊಡ್ಡ ಹೆಮ್ಮರವೇನಲ್ಲ ಎಂಬಂತೆ ಇತ್ತು. ಅದಲ್ಲದೇ ಗಾಬಾ ಕ್ರೀಡಾಂಗಣದಲ್ಲಿ ಭಾರತ ಆಸಿಸ್‌ಗೆ ಇದ್ದ 32 ವರ್ಷಗಳ ಸೊಕ್ಕನ್ನು 2021ರಲ್ಲಿ ಮುರಿದು ಹಾಕಿತ್ತು. ಆ ಕಾರಣಕ್ಕೆ ಆಸ್ಟ್ರೇಲಿಯಾ ಭಾರತದ ಯಶಸ್ಸಿಗೆ ತಗಾದೆ ತೆಗೆಯುತ್ತಾ ಬಂದಿದೆ.

ಈ ಬಾರಿ ವಿಶ್ವಕಪ್‌ನಲ್ಲಿ ಭಾರತ ಭರ್ಜರಿ ಪ್ರದರ್ಶನ ತೋರುವ ಮೂಲಕ ಗೆಲುವು ಸಾಧಿಸಿದೆ. ಸೂರ್ಯಕುಮಾರ್ ಯಾದವ್ ಅವರ ಕ್ಯಾಚ್ ಅನ್ನು ಒಂದು ಬಾರಿ ಅಲ್ಲ 10 ಬಾರಿ ನೋಡಿದರೂ ಆ ನಿರ್ಣಯ ಸರಿಯಾಗೇ ಇದೆ ಎನ್ನಿಸುತ್ತದೆ. ಮೈದಾನದಲ್ಲಿ ಇದ್ದ ಕ್ಯಾಮೆರಾಗಳನ್ನು ಬಿಟ್ಟರೂ, ಅಲ್ಲಿದ್ದ ಅಭಿಮಾನಿಗಳು ಮಾಡಿದ್ದ ವಿಡಿಯೊಗಳೂ ಸಹ ಕ್ಯಾಚ್ ಬಗ್ಗೆ ಸ್ಪಷ್ಟತೆ ಕೊಟ್ಟಿವೆ. ಇಷ್ಟಾದರೂ ತಗಾದೆ ತೆಗೆದರೆ ಅದು ಮೂರ್ಖತನ ಎನ್ನಬಹುದು. ಅಷ್ಟಕ್ಕೂ ಆ ಕ್ಯಾಚ್ ಬಿಟ್ಟಿದ್ದರೆ, ದಕ್ಷಿಣಾ ಆಫ್ರಿಕಾ ವಿಶ್ವಕಪ್ ಗೆದ್ದೇ ಗೆಲ್ಲುತ್ತಿತ್ತು ಎಂದು ಹೇಳಲು ಸಾಧ್ಯವೆ? ಭಾರತ ವಿಶ್ವಕಪ್ ಫೈನಲ್‌ನಲ್ಲಿ ಭರ್ಜರಿ ಪ್ರದರ್ಶನ ನೀಡಿದೆ. ಆ ಕ್ಯಾಚ್ ಬಿಟ್ಟಿದ್ದರೆ ಗೆಲ್ಲುತ್ತಿತ್ತು ಎಂಬುವುದಾದರೆ, 30 ಎಸೆತಗಳಲ್ಲಿ 30 ರನ್ ಬೇಕಿದ್ದ ಸ್ಕೋರ್ ಅನ್ನು ಭಾರತ 6 ಬಾಲ್‌ಗಳಲ್ಲಿ 16 ರನ್‌ಗೆ ತಂದಿದ್ದರು. ಈ ಮಟ್ಟದಲ್ಲಿ ಕಮ್‌ಬ್ಯಾಕ್ ಮಾಡಿದ್ದ ಭಾರತ 5 ಎಸೆತಗಳಲ್ಲಿ 10 ರನ್ ಡಿಫೆಂಡ್ ಮಾಡುತ್ತಿರಲಿಲ್ಲವೇ? ಇಡೀ ಟೂರ್ನಿಯಲ್ಲಿ ಒಂದೂ ಪಂದ್ಯ ಸೋಲದೆ ಭರ್ಜರಿ ಪ್ರದಶನ ನೀಡಿ ಭಾರತ ಫೈನಲ್‌ಗೆ ಬಂದಿತ್ತು. ಆಸ್ಟ್ರೇಲಿಯಾ, ಪಾಕಿಸ್ತಾನದಂತಹ ತಂಡಗಳನ್ನು ಭಾರತ ಹೀನಾಯವಾಗಿ ಸೋಲಿಸಿತ್ತು. ಹಾಗಾಗಿಯೇ, ಈ ಗೆಲುವಿನ ನಂತರ ತಗಾದೆ ತೆಗೆಯುತ್ತಿದ್ದಾರೆ. ಅಸಲಿಯತ್ತಾಗಿ, ಆಸ್ಟ್ರೇಲಿಯಾ ಅಥವಾ ಪಾಕಿಸ್ತಾನದಂತ ಕ್ರಿಕೆಟ್ ಅಭಿಮಾನಿಗಳಿಗೆ ಭಾರತದ ಯಶಸ್ಸು ವಿವಾದವಾಗಿತ್ತೇ ಹೊರತು ಆ ಕ್ಯಾಚ್ ಅಲ್ಲ. ಏಕೆಂದರೆ ಭಾರತದ ಆಟಗಾರರು ಎಂದಿಗೂ ಮೋಸ ಮಾಡಿ ಗೆದ್ದಿದ್ದು ಇಲ್ಲ. ಮತ್ತು ಎಂದಿಗೂ ಆಸ್ಟ್ರೇಲಿಯಾದ ಆಟಗಾರರಂತೆ ಬಾಲ್ ಟ್ಯಾಂಪಿಂಗ್ ಮಾಡಿ ಸಿಗಿಬಿದ್ದಲ್ಲ.

ಪ್ರಚಲಿತ

ವಿಜಯಾ, ಉಡುಪಿ
vveditoped@gmail.com

ಹೊರಗುತ್ತಿಗೆ ನೌಕರರಿಗೆ ಏಕಿಲ್ಲ ಪರಿಷ್ಕೃತ ವೇತನದ ಸೌಲಭ್ಯ

ಏಳನೇ ವೇತನ ಆಯೋಗದ ಶಿಫಾರಸು ಜಾರಿಗೆ ಆಗ್ರಹ ಪ್ರತಿದಿನ ಕೇಳಿಬರುತ್ತಿದೆ. ಇತ್ತ ಸರಕಾರವು ಪರಿಷ್ಕೃತ ವೇತನ ಜಾರಿಗೊಂಡರೆ ರಾಜ್ಯ ಬೊಕ್ಕಸಕ್ಕೆ ಸಾವಿರಾರು ಕೋಟಿ ಹೊರೆ ಬೀಳಲಿದ್ದು, ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಸಂಪನ್ಮೂಲದ ಮುಗ್ಗಟ್ಟು ಎದುರಾಗಲಿದೆ ಎನ್ನುತ್ತಿದೆ. ಇದಕ್ಕೆ ಸರಕಾರಿ ನೌಕರರು ಸಂಪನ್ಮೂಲ ಕ್ರೋಢೀಕರಣದಲ್ಲಿ ಸರಕಾರಿ ನೌಕರರ ಪಾಲೂ ಇದೆ ಎಂದು ಹೇಳಿದೆ.

ಆದರೆ ಇತ್ತ ಸರಕಾರಿ ಕಚೇರಿಗಳಲ್ಲಿ ಸುಮಾರು ಅರ್ಧದಷ್ಟು ಮಂದಿ ಹೊರಗುತ್ತಿಗೆ ಸಿಬ್ಬಂದಿಗಳು ಕಂಡುಬರುತ್ತಾರೆ. ಈ ಸಿಬ್ಬಂದಿಗಳು ಅತ್ಯಂತ ಕನಿಷ್ಠ ವೇತನದಲ್ಲಿ, ಯಾವುದೇ ಭತ್ಯೆ ಇನ್ನಿತರ ಸೌಲಭ್ಯಗಳಿಲ್ಲದೆಯೂ ವಿಶೇಷವಾಗಿ ಶ್ರಮಿಸುತ್ತಿರುವುದನ್ನು ಕಾಣಬಹುದು. ಆದರೆ ಅವರ ವೇತನ-ಸೌಲಭ್ಯಗಳ ಬಗ್ಗೆ ಯಾರೂ ಧ್ವನಿ ಎತ್ತುವವರಿಲ್ಲ. ಇವರಲ್ಲಿ ಬಹುತೇಕ ಮಂದಿ ಪದವೀಧರರು! ಅವರಿಗೆ ಸಿಗುವ ವೇತನ ಎಷ್ಟು ಎಂದು ನೋಡಿದರೆ, ಡಿ-ದರ್ಜೆಯ ಕಾಯಂ ನೌಕರರ ವೇತನಕ್ಕಿಂತಲೂ ತುಂಬಾ ಕಡಿಮೆ. ಉದ್ಯೋಗದ ಭದ್ರತೆಯಂತೂ ಇಲ್ಲವೇ ಇಲ್ಲ. ಇವರಿಂದಾಗಿ ಕಾಯಂ ನೌಕರರ ಕೆಲಸದ ಹೊರೆ ಬಹಳಷ್ಟು ತಗ್ಗುತ್ತಿದೆ, ಸಾರ್ವಜನಿಕರಿಗೆ ಇವರ ಸೇವೆ ವಿಶೇಷವಾಗಿ ಸಲ್ಲುತ್ತಿದೆ. ಆದರೆ ಯಾವ ಕ್ಷಣದಲ್ಲಾದರೂ ಇವರು ತಮ್ಮ ಉದ್ಯೋಗ ಕಳೆದುಕೊಳ್ಳಲು ಸಿದ್ಧರಿರಬೇಕು!

ಈ ಹೊರಗುತ್ತಿಗೆ ನೌಕರರ ಉದ್ಯೋಗ ಭದ್ರತೆಯ ಬಗ್ಗೆಯಾಗಲೀ, ಅವರ ವೇತನ-ಸೌಲಭ್ಯಗಳ ಹೆಚ್ಚಳದ ಬಗ್ಗೆಯಾಗಲೀ ಎಲ್ಲಿಯೂ ಧ್ವನಿ ಮೂಡದಿರುವುದು ವಿಷಾದಕರ. ಹೊರಗುತ್ತಿಗೆ ಸಿಬ್ಬಂದಿಗಳು ಗರಿಷ್ಠ ಸೇವೆ ಸಲ್ಲಿಸಿದರೂ ಈ ವೇತನ-ಸೌಲಭ್ಯಗಳ ಹೆಚ್ಚಳದ ವಿಚಾರ ಬಂದಾಗ ಅವರೆಲ್ಲ ಹೊರಗುಳಿಯಬೇಕೇ? ಕಾಯಂ ನೌಕರರ ಬೇಡಿಕೆ ಈಡೇರಿಕೆಯ ಬಗ್ಗೆ ಆಗ್ರಹ ವ್ಯಕ್ತವಾಗುವಾಗ ಹೊರಗುತ್ತಿಗೆ ನೌಕರರಿಗೂ ಸಂಸಾರವಿದೆ, ಕಷ್ಟವಿದೆ ಎಂಬ ಅರಿವು ಯಾರಿಗೂ ಮೂಡದಿರುವುದು ಖೇದಕರ.

ನೌಕರರ ಸಂಘದ ಅಧ್ಯಕ್ಷರೂ ಇದನ್ನು ಅರ್ಥಮಾಡಿಕೊಳ್ಳಬೇಕು. ಎಲ್ಲ ರೀತಿಯ ಸೌಲಭ್ಯಗಳ ಹೆಚ್ಚಳದ ಬಗ್ಗೆ ಆಗ್ರಹಿಸುವಾಗ ತಮ್ಮೊಂದಿಗೆ ಸೇವೆ ಸಲ್ಲಿಸುತ್ತಿರುವ ಹೊರಗುತ್ತಿಗೆ ನೌಕರರ ಹಂತ-ಹಂತವಾಗಿ ಕಾಯಂಗೊಳಿಸಲು ಮತ್ತು ಅವರಿಗೂ ವೇತನ-ಭತ್ಯೆ-ರಜಾ ಸೌಲಭ್ಯ ಇತ್ಯಾದಿಗಳ ಹೆಚ್ಚಳದ ಬಗ್ಗೆ ಆಗ್ರಹ ಮೂಡಿಬರಬೇಕಲ್ಲವೇ? ತಮ್ಮೊಂದಿಗೇ ದುಡಿಯುವ ಸಹೋದ್ಯೋಗಿಗಳ ಬಗ್ಗೆ ಯಾಕಿಷ್ಟು ತಾತ್ಸಾರ? ಸಾರ್ವಜನಿಕರೂ ಈ ಬಗ್ಗೆ ಮಾನವೀಯ ಅನುಕಂಪದ ನೆಲೆಯಲ್ಲಿ ಸರಕಾರದ ಗಮನ ಸೆಳೆಯುವುದು ಸೂಕ್ತವಲ್ಲವೇ? ತನ್ಮೂಲಕ ಅವರ ಬದುಕೂ ಕೂಡ ಸ್ವಲ್ಪವಾದರೂ ಚೇತರಿಸಿಕೊಳ್ಳಲು ಅನುವು ಮಾಡಿಕೊಡುವ ಅವಶ್ಯವಿದೆ.

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 201

ಸಮಾಚಾರ ಸಣ್ಣದಲ್ಲ

ಸುಪ್ರೀಂಗೆ ಮಣಿಪುರ ಸಿಜೆ: ಕೊಲಿಜಿಯಂ

ದೆಹಲಿ: ಜಮ್ಮು-ಕಾಶ್ಮೀರದ ಲಡಾಖ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ನಾನ್ಸಿ ಮೈಕಾಪ್ ಕೋಟೀಶ್ವರ್ ಸಿಂಗ್ ಮತ್ತು ಮದ್ರಾಸ್ ಹೈಕೋರ್ಟ್ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಆರ್. ಮಹಾದೇವನ್ ಅವರಿಗೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಬಡ್ತಿ ನೀಡಲು ಸುಪ್ರೀಂ ಕೋರ್ಟ್ ಕೊಲಿಜಿಯಂ ಶಿಫಾರಸು ಮಾಡಿದೆ. ನ್ಯಾ. ಕೋಟೀಶ್ವರ ಸಿಂಗ್ ಮಣಿಪುರದಿಂದ ಸುಪ್ರೀಂ ಕೋರ್ಟ್ ಗೆ ಬಡ್ತಿ ಪಡೆಯುತ್ತಿರುವ ಮೊದಲ ನ್ಯಾಯಮೂರ್ತಿಯಾಗಿದ್ದಾರೆ.

ಅಪಘಾತದಲ್ಲಿ ಯೋಧ ಸಾವು

ಲಡಾಖ್: ಗಡಿ ನಿಯಂತ್ರಣ ರೇಖೆ ಬಳಿ ಪೂರ್ವ ಲಡಾಖ್‌ನಲ್ಲಿ ಕರ್ತವ್ಯನಿರತ ಯೋಧ ಶುಕ್ರವಾರ ಅಪಘಾತದಲ್ಲಿ ಮೃತರಾಗಿದ್ದಾರೆ. ಯೋಧ ಶಂಕರ ರಾವ್ ಗೊತ್ತಾಪು ಅವರಿಗೆ ಅಪಘಾತದಲ್ಲಿ ಮಾರಣಾಂತಿಕ ಗಾಯಗಳಾಗಿದ್ದು, ಆಸ್ಪತ್ರೆಗೆ ಕರೆದೊಯ್ಯುವಾಗ ಅಸು ನೀಗಿದರು ಎಂದು ಸೇನೆಯ ಅಧಿಕಾರಿ ತಿಳಿಸಿದ್ದಾರೆ. ಆದರೆ, ಅಪಘಾತದ ಸ್ವರೂಪವನ್ನು ವಿವರಿಸಿಲ್ಲ.

ರೀಚಾರ್ಜ್ ಶುಲ್ಕ ಏರಿಕೆ ಬೇಡ: ಬಿಎಮ್ಮೆಸ್ ಆಗ್ರಹ

ದೆಹಲಿ: ಮೊಬೈಲ್ ಫೋನ್ ರೀಚಾರ್ಜ್ ಶುಲ್ಕ ಹೆಚ್ಚಿಸಿರುವ ಕ್ರಮವನ್ನು ತಕ್ಷಣ ಹಿಂಪಡೆಯಬೇಕು ಎಂದು ಖಾಸಗಿ ದೂರಸಂಪರ್ಕ ಸೇವಾ ಕಂಪನಿಗಳಿಗೆ ರಾಷ್ಟ್ರೀಯ ಸ್ವಯಂ ಸೇವಕ ಸಂಘ(ಆರ್‌ಎಸ್‌ಎಸ್) ಬೆಂಬಲಿತ 'ಭಾರತೀಯ ಮಜ್ದೂರ್ ಸಂಘ' (ಬಿಎಂಎಸ್) ಶುಕ್ರವಾರ ಆಗ್ರಹಿಸಿದೆ. ರಿಲಯನ್ಸ್ ಜಿಯೊ, ಏರ್‌ಟೆಲ್ ರೀಚಾರ್ಜ್ ದರ ಏರಿಕೆ ಮಾಡಿವೆ. ಈ ಕ್ರಮ ಕೈಬಿಡಬೇಕು. ಅಲ್ಲದೇ ಸರಕಾರಿ ಸ್ವಾಮ್ಯದ ಬಿಎಸ್‌ಎನ್ ಎಲ್‌ಗೆ 4ಜಿ, 5 ಜಿ ಸೇವೆ ತಕ್ಷಣವೇ ಆರಂಭಿಸಲು ಅವಕಾಶ ಮಾಡಿಕೊಡಬೇಕು ಎಂದು ಬಿಎಂಎಸ್ ಒತ್ತಾಯಿಸಿದೆ. ಇದೇ ವಿಷಯವಾಗಿ ಜು.10ರಂದು ಪ್ರಧಾನಿ ಮೋದಿ ಅವರಿಗೆ ಬಿಎಂಎಸ್ ಪತ್ರ ಬರೆದಿದೆ.

ಮಾದಕ ದ್ರವ್ಯ: ಸಂಸದ ಅಮೃತ್ ಸೋದರ ಸೆರೆ

ಚಂಡೀಗಢ: ಖಲಿಸ್ತಾನ್ ಹೋರಾಟ ಕಾರಣ ಜೈಲು ಸೇರಿರುವ ಸಂಸದ ಅಮೃತ್‌ಪಾಲ್, ಮಾದಕ ದ್ರವ್ಯ ವಿರೋಧಿ ಅಂದೋಲನದಿಂದಲೇ ವಾರೀಸ್ ಪಂಜಾಬ್ ಮುಖ್ಯಸ್ಥನಾಗಿ ಹೆಸರು ಗಳಿಸಿದ್ದಾನೆ. ಆದರೆ ಆತನ ಸೋದರನೇ ಈಗ ಮಾದಕದ್ರವ್ಯ ಸೇವಿಸಿ ಪಂಜಾಬ್ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ. ಅಮೃತ್‌ಪಾಲ್ ಸಿಂಗ್‌ನ ಸೋದರ ಹರ್ಪ್ರೀತ್ ಸಿಂಗ್‌ನನ್ನು ಜಲಂಧರ್ ಜಿಲ್ಲೆ ಪೊಲೀಸರು ಶುಕ್ರ ವಾರ ಬಂಧಿಸಿದ್ದಾರೆ. ಮಾದಕ ದ್ರವ್ಯ ಸೇವಿಸಿದ್ದ, ಮಾದಕ ವಸ್ತುಗಳನ್ನು ಜತೆಗೇ ಇಟ್ಟುಕೊಂಡಿದ್ದ ಹರ್ಪ್ರೀತ್ ಸಿಂಗ್, ಅವನಿಗೆ ಮಾದಕ ಪದಾರ್ಥ ಮಾರಿದ್ದ ಸಂದೀಪ್ ಆರೋರಾನನ್ನು ಬಂಧಿಸಲಾ ಗಿದೆ. ಖದೂರ್ ಸಾಹಿಬ್ ನಿವಾಸಿಯಾದ ಹರ್ಪ್ರೀತ್, ಕ್ರಿಸ್ಟೆಲ್ ಮೆಥಾಂಫೆಟಮೈನ್ ಎಂಬ ಡ್ರಗ್ ಸೇವಿಸಿ ಸಿಕ್ಕಿಬಿದ್ದಿದ್ದಾನೆ. ಜಲಂಧರ್ ಗ್ರಾಮೀಣ ಪೊಲೀಸ್ ಠಾಣೆ ಪೊಲೀಸ್ ಅಧಿಕಾರಿ ಅಂಕುರ್ ಗುಪ್ತಾ ಈತನ ಬಂಧನ ಖಚಿತ ಪಡಿಸಿದ್ದಾರೆ.

ಬಿಹಾರ: ಒಂದೇ ದಿನ ಸಿಡಿಲಿಗೆ 21 ಜೀವಬಲಿ

ಪಟನಾ: ಉತ್ತರ ಭಾರತ ಕಳೆದ ಕೆಲವು ದಿನ ಗಳಿಂದ ಧಾರಾಕಾರ ಮಳೆಗೆ ತತ್ತರಿಸಿದೆ. ಇನ್ನೊಂದೆಡೆ ಸಿಡಿಲಿನ ಆಘಾತಕ್ಕೆ ಸಿಲುಕಿ ಜೀವ ಕಳೆದು ಕೊಳ್ಳುವವರ ಸಂಖ್ಯೆಯೂ ಅನಾವಾಗಿದೆ. ಮೊನ್ನೆ ಉತ್ತರ ಪ್ರದೇಶದಲ್ಲಿ ಸಿಡಿಲು ಅಪ್ಪಳಿಸಿ ಒಂದೇ ದಿನ 38 ಮಂದಿ ಸಾವಿಗೀಡಾಗಿದ್ದರೆ, ಶುಕ್ರವಾರ ಬಿಹಾರದಲ್ಲಿ ಒಂದೇ ದಿನ ಸಿಡಿಲಿನ ಆರ್ಭಟಕ್ಕೆ 21 ಮಂದಿ ಜೀವ ಕಳೆದು ಕೊಂಡಿದ್ದಾರೆ. ಗುರುವಾರ-ಶುಕ್ರವಾರ ಬಿಹಾರ ದಲ್ಲಿ ಸಿಡಿಲಿನ ಹೊಡೆತಕ್ಕೆ ಸಿಲುಕಿ 21 ಮಂದಿ ಸಾವಿ ಗೀಡಾಗಿದ್ದಾರೆ ಎಂದು ಮುಖ್ಯಮಂತ್ರಿ ಕಚೇರಿಯೇ ತಿಳಿಸಿದೆ. ಅತಿಹೆಚ್ಚು ಎಂದರೆ ಮಧುಬನಿ ಜಿಲ್ಲೆಯಲ್ಲಿ 6 ಮಂದಿ ಸಿಡಿಲು ಅಪ್ಪಳಿಸಿ ದ್ದರಿಂದ ಸ್ಥಳದಲ್ಲೇ ಅಸುನೀಗಿದ್ದಾರೆ. ಔರಂಗಾ ಬಾದ್-4, ಪಟನಾ-2, ರೋಹತಾಸ್, ಭೋಜ್‌ಪುರ, ಕೈಮೂರ್, ಸರಣ್, ಜೆಹನಾಬಾದ್, ಗೋಪಾಲ್‌ಗಂಜ್, ಸುಪೌಲ್, ಲಕಿಸರಾಯ್, ಮಾಧೇಪುರ ಜಿಲ್ಲೆಗಳಲ್ಲಿ ತಲಾ ಒಬ್ಬರು ಸಿಡಿಲಿನಿಂದ ಸಾವಿಗೀಡಾಗಿದ್ದಾರೆ. ಸಂತ್ರಸ್ತ ಕುಟುಂಬಕ್ಕೆ ತಲಾ 4 ಲಕ್ಷ ರು. ಪರಿಹಾರವನ್ನು ಮುಖ್ಯಮಂತ್ರಿ ಘೋಷಿಸಿದ್ದಾರೆ. ಜುಲೈನಲ್ಲಿ ಈವರೆಗೆ ಸಿಡಿಲು ಬಡಿದು 70 ಜೀವ ಹಾನಿಯಾಗಿದೆ.

{ರಾಹುಲ್ ಗಾಂಧಿ} ಕಾಂಗ್ರೆಸ್ ಸಂಸದ

ಜೀವನದಲ್ಲಿ ಸೋಲು-ಗೆಲುವು ಸಾಮಾನ್ಯ. ಲೋಕಸಭೆ ಚುನಾವಣೆಯಲ್ಲಿ ಅಮೇಥಿ ಕ್ಷೇತ್ರದಲ್ಲಿ ನನ್ನ ವಿರುದ್ಧ ಸೋತಿರುವ ಬಿಜೆಪಿ ಅಭ್ಯರ್ಥಿ ಸ್ಮೃತಿ ಇರಾನಿ ಅವರ ವಿರುದ್ಧ ಅವಹೇಳನಕಾರಿ ಪದ ಬಳಸಬೇಡಿ ಎಂದು ಕಾರ್ಯಕರ್ತರಲ್ಲಿ ಮನವಿ. ದಯಮಾಡಿ ಅಸಹ್ಯವಾಗಿ ವರ್ತಿಸುವುದನ್ನು ನಿಲ್ಲಿಸಿ. ಬೇರೆಯವರ ಅವಹೇಳನ ಮಾಡುವುದೆಂದರೆ ಅದು ನಮ್ಮ ದೌರ್ಬಲ್ಯದ ಸಂಕೇತವೇ ಹೊರತು, ಶಕ್ತಿ ಎನಿಸಿಕೊಳ್ಳುವುದಿಲ್ಲ.

ಇ.ಡಿ ಪ್ರಕರಣದಲ್ಲಿ ಸುಪ್ರೀಂ ಮಧ್ಯಂತರ ಜಾಮೀನು | ಸಿಬಿಐ ಪ್ರಕರಣದಲ್ಲಿ 25ರವರೆಗೂ ನ್ಯಾಯಾಂಗ ಬಂಧನ

ಕಾನೂನು ಸಂಕಷ್ಟದ ಸುಳಿಯಲ್ಲಿ ಕೇಜ್ರಿವಾಲ್

ದೆಹಲಿ: ಅಬಕಾರಿ ನೀತಿ ಹಗರಣದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಮೊದಲಿಗೆ ಜಾರಿ ನಿರ್ದೇಶ ನಾಲಯದಿಂದ (ಇ.ಡಿ) ಬಂಧನಕ್ಕೊಳಗಾಗಿ ಸದ್ಯ ತಿಹಾರ್ ಜೈಲಿನಲ್ಲಿರುವ ಎಎಪಿ ಮುಖ್ಯಸ್ಥ, ದೆಹಲಿ ಮುಖ್ಯ ಮಂತ್ರಿ ಅರವಿಂದ್ ಕೇಜ್ರಿವಾಲ್‌ಗೆ ಸುಪ್ರೀಂ ಕೋರ್ಟ್ ಶುಕ್ರವಾರ ಮಧ್ಯಂತರ ಜಾಮೀನು ನೀಡಿದೆ. ಹಾಗಿದ್ದೂ ಕೇಜ್ರಿವಾಲ್‌ಗೆ ಜೈಲಿನಿಂದ ಬಿಡುಗಡೆ ಭಾಗ್ಯ ಇಲ್ಲವಾಗಿದೆ.

ಎರಡು ದಿನದ ಹಿಂದಷ್ಟೇ ಕೇಂದ್ರ ತನಿಖಾ ದಳ (ಸಿಬಿಐ) ಭ್ರಷ್ಟಾಚಾರ ಪ್ರಕರಣದಡಿ ಬಂಧಿಸಿದ್ದು, ಪ್ರಕರಣದ ವಿಚಾರಣೆ ನಡೆಸುತ್ತಿರುವ ದೆಹಲಿಯ ರೋಸ್ ಅವಿನ್ಯೂ ಕೋರ್ಟ್, ಆರೋಪಿಯ ನ್ಯಾಯಾಂಗ ಬಂಧನ ಅವಧಿಯನ್ನು ಜು.25ರವರೆಗೂ ವಿಸ್ತರಿಸಿ ಶುಕ್ರವಾರ ಮಧ್ಯಾಹ್ನ ಆದೇಶ ಹೊರಡಿಸಿದೆ. ಹಾಗಾಗಿ, ಸುಪ್ರೀಂ ಕೋರ್ಟ್ ದ್ವಿಸದಸ್ಯ ಪೀಠ, ಇ.ಡಿ ಪ್ರಕರಣದಲ್ಲಿ ಮಧ್ಯಂತರ ಜಾಮೀನು ಮಂಜೂರು ಮಾಡಿದ್ದರೂ, ಸಿಬಿಐ ಪ್ರಕರಣದಲ್ಲಿ ನ್ಯಾಯಾಂಗ ಬಂಧನ ಮುಂದುವರಿಯಲಿದೆ. ಹಾಗಾಗಿ ತಕ್ಷಣಕ್ಕೆ ಕೇಜ್ರಿವಾಲ್‌ಗೆ ಬಿಡುಗಡೆ ಭಾಗ್ಯ ಇಲ್ಲವಾಗಿದೆ.

ಸುಪ್ರೀಂ ಕೋರ್ಟ್ ಸುದೀರ್ಘ ವಿಚಾರಣೆ

ಜಾರಿ ನಿರ್ದೇಶನಾಲಯದ ಬಂಧನ ಕ್ರಮ ಪ್ರಶ್ನಿಸಿ ಕೇಜ್ರಿವಾಲ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾ. ಸಂಜೀವ್ ಖನ್ನಾ ಮತ್ತು ನ್ಯಾ.ದೀಪಂಕರ್ ದತ್ತ ಅವರ ಪೀಠ, ಮಧ್ಯಂತರ ಜಾಮೀನು ಮಂಜೂರು ಮಾಡಿದೆ. ಈ ಸಂದರ್ಭ ಇ.ಡಿ ಪರ ವಕೀ ಲರ ಉದ್ದೇಶಿಸಿದ ಪೀಠ, ಆರೋಪಿ ಒಬ್ಬರು ಜನಪ್ರತಿನಿಧಿ.

ಅವರನ್ನು ವಿಚಾರಣೆ ನೆಪ ದಲ್ಲಿ ಬಂಧಿಸಿರುವುದು ಎಷ್ಟು ಸರಿ? ಅವರನ್ನು 90 ದಿನಗಳಿಂದ ಸೆರೆಯಲ್ಲಿಟ್ಟಿರುವ ಕ್ರಮ ಪ್ರಶ್ನಾರ್ಹ ಎಂದು ಹೇಳಿತು. ದೀರ್ಘ ಕಾಲದಿಂದ ಮುಖ್ಯಮಂತ್ರಿ ಬಂಧನದಲ್ಲಿ ರುವುದರಿಂದ ಆಡಳಿತ ಮೇಲೆ ಋಣಾತ್ಮಕ ಪರಿಣಾಮ ವಾಗುತ್ತಿದೆ.

ಹಾಗಾಗಿ ಆರೋಪಿಗೆ ರಾಜೀನಾಮೆ ನೀಡಲು ಸೂಚನೆ ನೀಡಬೇಕು ಎಂದು ಕೋರಿದ್ದ ಅರ್ಜಿಯ ವಿಚಾರಣೆ ವೇಳೆ ಪೀಠ, ರಾಜೀ ನಾಮೆ ನೀಡುವಂತೆ ನ್ಯಾಯಾಲಯ ಹೇಳಲು ಆಗುವುದಿಲ್ಲ. ಅದೇನಿದ್ದರೂ ಮುಖ್ಯಮಂತ್ರಿ ಆದವರ ವಿವೇಚನೆಗೆ ಸಂಬಂಧಿಸಿದ ವಿಚಾರ ಎಂದು ಹೇಳಿ ಅರ್ಜಿಯನ್ನು ತಳ್ಳಿಹಾಕಿತು.

ಇದೇ ವೇಳೆ, ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯ ಕಲಂ 19 ವಿಚಾರವಾಗಿ ಬಂಧನದ ಷರತ್ತು ಗಳ ಬಗೆಗಿನ ಪ್ರಶ್ನೆ ಯನ್ನು ಪರಾಮರ್ಶಿಸಲು ವಿಸ್ತೃತ ಪೀಠಕ್ಕೆ ಅರ್ಜಿ ಸುಪ್ರೀಂ ಕೋರ್ಟ್ ದ್ವಿಸದಸ್ಯ ಪೀಠ ಶುಕ್ರವಾರ ವರ್ಗಾಯಿಸಿದೆ.

ನದಿಯಲ್ಲಿ ಕೊಚ್ಚಿಹೋದ ಬಸ್‌ಗಳು | ಏಳು ಮಂದಿ ಭಾರತೀಯರೂ ಕಾಣೆ

ನೇಪಾಳ ಭೂಕುಸಿತ: 2 ಬಸ್ ನದಿಗೆ, 65 ಮಂದಿ ನಾಪತ್ತೆ

ಕಠ್ಮಂಡು: ಮಧ್ಯ ನೇಪಾಳದಲ್ಲಿ ಶುಕ್ರವಾರ ಮುಂಜಾನೆ ಭಾರೀ ಭೂಕುಸಿತವಾಗಿದ್ದು, ಅದೇ ಮಾರ್ಗದಲ್ಲಿ ಸಾಗುತ್ತಿದ್ದ ಎರಡು ಬಸ್‌ಗಳು ತ್ರಿಶೂಲಿ ನದಿಗೆ ಉರುಳಿ ಕೊಚ್ಚಿಕೊಂಡು ಹೋಗಿವೆ. ಚಾಲಕ ಸಿಬ್ಬಂದಿ ಮತ್ತು ಪ್ರಯಾಣಿಕರು ಸೇರಿದಂತೆ ಒಟ್ಟು 63 ಮಂದಿ ನಾಪತ್ತೆಯಾಗಿದ್ದಾರೆ. ಪ್ರಯಾಣಿಕರಲ್ಲಿ ಏಳು ಮಂದಿ ಭಾರತೀಯರೂ ಇದ್ದರು ಎಂದು ತಿಳಿದುಬಂದಿದೆ.

ಕೆಲ ದಿನಗಳಿಂದ ಈ ಭಾಗದಲ್ಲಿ ಸತತ ಮಳೆ ಸುರಿಯುತ್ತಿದೆ. ಚಿತ್ವಾನ್ ಜಿಲ್ಲೆಯ ಮದನ್-ಆಶ್ರಿತ್ ಹೆದ್ದಾರಿಯ ನಾರಾಯಣಗಢ-ಮುಗಿಲಿನ್ ರಸ್ತೆಯಲ್ಲಿ ಶುಕ್ರವಾರ ಮುಂಜಾನೆ 3.30ರ ವೇಳೆ ಭೂ ಕುಸಿತವಾಗಿದೆ. ಕಠ್ಮಂಡುವಿನಿಂದ ರೌತಹತ್‌ನ ಗೌರ್‌ಗೆ ತೆರಳುತ್ತಿದ್ದ ಹಾಗೂ ಕಠ್ಮಂಡುವಿನಿಂದ ಹೊರಟಿದ್ದ ಏಂಜೆಲ್ ಬಸ್ ಮತ್ತು ಗಣಪತಿ ಡಿಲಕ್ಸ್ ಬಸ್ ನದಿಪಾಲಾಗಿವೆ ಎಂದು ತಿಳಿದುಬಂದಿದೆ.

ಕಠ್ಮಂಡುವಿಗೆ ತೆರಳುತ್ತಿದ್ದ ಬಸ್‌ನಲ್ಲಿ ಚಾಲಕ ಸಿಬ್ಬಂದಿ ಸೇರಿ 24 ಜನರಿದ್ದರೆ, ಮತ್ತೊಂದು ಬಸ್‌ನಲ್ಲಿ 41 ಪ್ರಯಾಣಿಕರಿದ್ದರು ಎನ್ನಲಾಗಿದೆ.

ಸುದ್ದಿ ತಿಳಿಯುತ್ತಿದ್ದಂತೆಯೇ ಘಟನಾ ಸ್ಥಳಕ್ಕಾಗಮಿಸಿ ರಕ್ಷಣಾ ಕಾರ್ಯಾಚರಣೆ ಆರಂಭಿಸಲಾಗಿದೆ. ನದಿಯಲ್ಲಿ ಕೊಚ್ಚಿಹೋದ ಬಸ್‌ನಲ್ಲಿದ್ದವರ ಶೋಧಕ್ಕೆ ಕಾರ್ಯಾಚರಣೆ ನಡೆಯುತ್ತಿದೆ. ಧಾರಾಕಾರ ಮಳೆ ಆಗುತ್ತಿರುವುದರಿಂದ ರಕ್ಷಣಾ ಕಾರ್ಯಾಚರಣೆಗೆ ಅಡ್ಡಿಯಾಗಿದೆ ಎಂದು ಚಿತ್ವಾನ್‌ನ ಜಿಲ್ಲಾಧಿಕಾರಿ ಇಂದ್ರದೇವ್ ಯಾದವ್ ತಿಳಿಸಿದ್ದಾರೆ.

ನೇಪಾಳ ಪ್ರಧಾನಿ ಪುಷ್ಪ ಕಮಲ್ ದಹಾಲ್ ಆಘಾತ ವ್ಯಕ್ತಪಡಿಸಿದ್ದು ನಾಪತ್ತೆಯಾದವರ ರಕ್ಷಣೆಗೆ ತ್ವರಿತಗತಿ ಕ್ರಮ ಕೈಗೊಳ್ಳುವಂತೆ ಗೃಹ ಸಚಿವಾಲಯಕ್ಕೆ ಆದೇಶಿಸಿದ್ದಾರೆ.

ಜೂ.25 ಸಂವಿಧಾನ ಹತ್ಯೆ ದಿನ: ಕೇಂದ್ರ ಘೋಷಣೆ

ದೆಹಲಿ: ಕೇಂದ್ರದ ಪ್ರಜಾಸತ್ತಾತ್ಮ ಮೈತ್ರಿಕೂಟ (ಎನ್‌ಡಿಎ) ಸರಕಾರ ಜೂ.25 'ಸಂವಿಧಾನ ಹತ್ಯಾ ದಿನ' ಎಂದು ಘೋಷಣೆ ಹೊರಡಿಸಿದೆ. ಈ ಬಗ್ಗೆ ಅಧಿಸೂಚನೆಯನ್ನೂ ಹೊರಡಿಸಿದೆ.



ಇಂದಿರಾ ಗಾಂಧಿ ಪ್ರಧಾನಿಯಾಗಿದ್ದಾಗ 1975ರ ಜೂ.2ರಂದು ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿದರು. ಆ ದಿನವನ್ನು ಸಂವಿಧಾನ ಹತ್ಯೆ ದಿನವಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಕೇಂದ್ರ ಸರಕಾರ ಹೇಳಿದೆ. 1975ರ ತುರ್ತು ಪರಿಸ್ಥಿತಿಯ ಅಮಾನವೀಯ ಮುಖವನ್ನು ಅನಾವರಣಗೊಳಿಸಲು, ಅಂದು ನೋವನ್ನು ಸಹಿಸಿ ಕೊಂಡ ಎಲ್ಲರ ಅಪಾರ ಕೊಡುಗೆಯನ್ನು ನೆನಪಿಸಲು ಈ ದಿನದ ಆಚರಣೆ ಮಾಡಬೇಕಿದೆ ಎಂದು ಕೇಂದ್ರ ಸಚಿವ ಅಮಿತ್ ಶಾ ಹೇಳಿದ್ದಾರೆ.

'1975ರ ಜೂ.25ರಂದು ಅಂದಿನ ಪ್ರಧಾನಿ ಇಂದಿರಾ ಗಾಂಧಿ ತಮ್ಮ ಸರ್ವಾಧಿಕಾರಿ ಮನಸ್ಥಿತಿ ಪ್ರದರ್ಶಿಸಿ, ದೇಶದಲ್ಲಿ ತುರ್ತು ಪರಿಸ್ಥಿತಿ ಹೇರುವ ಮೂಲಕ ಭಾರತದ ಪ್ರಜಾಪ್ರಭುತ್ವದ ಆತ್ಮದ ಕತ್ತು ಹಿಸುಕಿದ್ದರು. ಲಕ್ಷಗಟ್ಟಲೆ ಜನರನ್ನು ವಿನಾಕಾರಣ ಜೈಲಿಗೆ ಹಾಕಲಾಗಿತ್ತು. ಮಾಧ್ಯಮಗಳ ಧ್ವನಿ ಹತ್ತಿಕ್ಕಲಾಯಿತು. ಇದನ್ನೆಲ್ಲಾ ನೆನಪಿಸಲು ಪ್ರತಿ ವರ್ಷ ಜೂ.25 'ಸಂವಿಧಾನ ಹತ್ಯೆ ದಿನ' ಆಚರಿಸಲು ನಿರ್ಧರಿಸಲಾಗಿದೆ. 1975ರ ತುರ್ತು ಪರಿಸ್ಥಿತಿಯ ಅಮಾನವೀಯ ನೋವನ್ನು ಸಹಿಸಿಕೊಂಡವರೆಲ್ಲರ ಅಪಾರ ಕೊಡುಗೆಯನ್ನು ಈ ದಿನ ನೆನಪಿಸುತ್ತದೆ ಎಂದು ಸಚಿವ ಅಮಿತ್ ಶಾ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ.

ಪ್ರಜಾಪ್ರಭುತ್ವ ರಕ್ಷಿಸಲು, ಭಾರತೀಯರೊಳಗೆ ವೈಯಕ್ತಿಕ ಸ್ವಾತಂತ್ರ್ಯದ ಅಮರ ಜ್ವಾಲೆ ಉರಿಸಲು 'ಸಂವಿಧಾನ ಹತ್ಯೆ ದಿನ' ನೆರವಾಗುತ್ತದೆ. ಇದರಿಂದ ಭವಿಷ್ಯದಲ್ಲಿ ಕಾಂಗ್ರೆಸ್‌ನಂತಹ ಯಾವುದೇ ಸರ್ವಾಧಿಕಾರಿ ಮನಸ್ಥಿತಿ ಪುನರಾವರ್ತನೆ ಆಗುವುದಿಲ್ಲ ಎಂದು ಹೇಳಿದ್ದಾರೆ.

ಟಿಡಿಪಿ ಶಾಸಕ ಕೆ.ರಘುರಾಮ ಕೃಷ್ಣರಾಜು ದೂರು

ಆಂಧ್ರ ಮಾಜಿ ಸಿಎಂ ಜಗನ್‌ಗೆ ಕಾನೂನು ಸಂಕಷ್ಟ

ಜಗನ್ ವಿರುದ್ಧ ಕೊಲೆ ಯತ್ನ ಪ್ರಕರಣ

ಅಮರಾವತಿ: ಆಂಧ್ರಪ್ರದೇಶ ಮಾಜಿ ಮುಖ್ಯಮಂತ್ರಿ, ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಮುಖಂಡ ವೈ.ಎಸ್.ಜಗನ ಮೋಹನ್ ರೆಡ್ಡಿ ವಿರುದ್ಧ ಕೊಲೆ ಯತ್ನ ಪ್ರಕರಣ ದಾಖಲಾಗಿದೆ.

ತೆಲುಗು ದೇಶಂ ಪಕ್ಷದ (ಟಿಡಿಪಿ) ನಾಯಕ, ಉಂಡಿ ಕ್ಷೇತ್ರದ ಶಾಸಕ ಕೆ.ರಘುರಾಮ ಕೃಷ್ಣರಾಜು ನೀಡಿದ ದೂರಿನ ಮೇರೆಗೆ ವೈ.ಎಸ್.ಜಗನ ಮೋಹನ್ ರೆಡ್ಡಿ ವಿರುದ್ಧ ಕೊಲೆ ಯತ್ನ ಪ್ರಕರಣ ದಾಖಸಿಕೊಳ್ಳಲಾಗಿದೆ.

ಅಲ್ಲದೇ, ಸಿಐಡಿ ಮಾಜಿ ಮುಖ್ಯಸ್ಥ ಪಿ.ವಿ.ಸುನೀಲ್ ಕುಮಾರ್ ಮತ್ತು ಪೊಲೀಸ್ ಮಹಾ ನಿರ್ದೇಶಕ-ಗುಪ್ತಚರ ವಿಭಾಗದ ಪಿ.ಎಸ್.ಆರ್.ಆಂಜನೇಯುಲು, ಎಎಸ್‌ಪಿ ನನ್ನ ಕೊಲೆಗೆ ಯತ್ನಿಸಿದ್ದರು. ಠಾಣೆಯಲ್ಲಿ ದೈಹಿಕವಾಗಿ ಹಿಂಸೆ ನೀಡಿ ಸಾಯಿಸಲು ಯತ್ನಿಸಿದರು ಎಂದು ದೂರಿದ್ದಾರೆ. ಅಲ್ಲದೇ, ನಿವೃತ್ತ ವೈದ್ಯಕೀಯ ಅಧೀಕಕಿ ಡಾ. ಪ್ರಭಾವತಿ ವಿರುದ್ಧವೂ ಕ್ರಿಮಿನಲ್ ಸಂಚಿನಲ್ಲಿ ಭಾಗಿ ಎಂದು ದೂರಿದ್ದಾರೆ. ಒಟ್ಟು ಐವರ ವಿರುದ್ಧ ಕ್ರಿಮಿನಲ್ ಪಿತೂರಿ, ಕೊಲೆಗೆ ಯತ್ನ ಪ್ರಕರಣ ದಾಖಲಿಸಿದ್ದಾರೆ.

- **2021ರ ಮೇನಲ್ಲಿ ಶಾಸಕ ಕೆ.ರಘುರಾಮ್ ಬಂಧನ-ಠಾಣೆಯಲ್ಲಿ ಥಳಿತ**
- **2024ರ ಜೂನ್‌ನಲ್ಲಿ ಇ-ಮೇಲ್ ಮೂಲಕ ದೂರು ದಾಖಲಿಸಿದ ಶಾಸಕ**

2021ರ ಮೇ ತಿಂಗಳಲ್ಲಿ ಸಿಐಡಿ ಅಧಿಕಾರಿಗಳು ತಮ್ಮನ್ನು ಹೈದರಾಬಾದ್‌ನಲ್ಲಿ ಬಂಧಿಸಿದರು. ಮೊಬೈಲ್ ಫೋನ್ ಕಿತ್ತುಕೊಂಡರು. ಬಳಿಕ ನ್ಯಾಯಾಲಯಕ್ಕೂ ಹಾಜರುಪಡಿಸಲಿಲ್ಲ.

ಎಳೆದುಕೊಂಡು ಹೋಗಿ ಠಾಣೆ ಯಲ್ಲಿ ಕೂಡಿಹಾಕಿ ಸಿಕ್ಕಾಪಟ್ಟೆ ಥಳಿಸಿದರು. ಎದೆಯ ಮೇಲೆ ಕೂತು ಉಸಿರಾಡದಂತೆ ಮಾಡಿದರು. ಬೆಲ್ಟ್, ದೊಣ್ಣೆಯಿಂದ ಹೊಡೆದರು. ಹೃದ್ರೋಗಿಯಾದ, ಬೈಪಾಸ್ ಸರ್ಜರಿಗೆ ಒಳಗಾಗಿರುವ ನನಗೆ ಔಷಧವನ್ನೂ ಕೊಡಲಿಲ್ಲ ಎಂದು ಶಾಸಕ ದೂರಿದ್ದಾರೆ.

ವೈದ್ಯೆ ಪ್ರಭಾವತಿ ಸರಿಯಾದ ಚಿಕಿತ್ಸೆಯನ್ನೂ ನೀಡಲಿಲ್ಲ. ಸಿಎಂ ಜಗನಮೋಹನ್ ರೆಡ್ಡಿ ಅವರನ್ನು ಟೀಕಿಸಿದರೆ ಕೊಲೆ ಮಾಡುವುದಾಗಿ ಸುನೀಲ್ ಕುಮಾರ್ ಬೆದರಿಕೆ ಹಾಕಿದ್ದರು ಎಂದು ಆರೋಪಿಸಿದ್ದಾರೆ.

ರಾಹುಲ್ ಗಾಂಧಿ ದ್ವಂದ್ವನೀತಿ ಬಯಲು: ಬಿಜೆಪಿ ವರಿಷ್ಠರ ಟೀಕೆ

ಗ್ಯಾರಂಟಿ ಯೋಜನೆಗೆ ಎಸ್‌ಸಿ-ಎಸ್‌ಟಿ ಕಲ್ಯಾಣ ನಿಧಿ ಬಳಕೆ

ದೆಹಲಿ: ಕರ್ನಾಟಕದಲ್ಲಿನ ಕಾಂಗ್ರೆಸ್ ಸರಕಾರ ವಿಧಾನಸಭೆ ಚುನಾವಣಾ ಪ್ರಣಾಳಿಕೆ ಭರವಸೆ ಈಡೇರಿಸಲು ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಮೀಸಲಿಟ್ಟಿರುವ ನಿಧಿಯನ್ನು ಬಳಸಿಕೊಂಡಿದೆ. ರಾಹುಲ್ ಗಾಂಧಿ ನೀಡಿದ ಚುನಾವಣೆ ಭರವಸೆಗಳನ್ನು ಈಡೇರಿಸಲು ಬಡವರ ಕಲ್ಯಾಣ ನಿಧಿ ದುರ್ಬಳಕೆ ಆಗುತ್ತಿದೆ. ಇದರಿಂದ ಎಸ್‌ಸಿ-ಎಸ್‌ಟಿ ಕಲ್ಯಾಣ ಕಾರ್ಯಕ್ರಮಗಳಿಗೆ ಪೆಟ್ಟು ಬಿದ್ದಿದೆ. ಇದು ರಾಹುಲ್ ಗಾಂಧಿಯ ದ್ವಂದ್ವ ನೀತಿ ತೋರಿಸುತ್ತದೆ ಎಂದು ಬಿಜೆಪಿ ಟೀಕಿಸಿದೆ. ದೆಹಲಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ಕಾನೂನು ಸಚಿವ ಅರ್ಜುನ ರಾಮ್ ಮೇಘವಾಲ್, ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಮಾಡುತ್ತಿರುವುದು ಸಂವಿಧಾನದ ಉಲ್ಲಂಘನೆ ಎಂದು ಕಿಡಿಕಾರಿ ದರು. ರಾಹುಲ್ ಸಂವಿಧಾನದ ಪ್ರತಿ ಹಿಡಿದು ತಿರುಗಾಡುತ್ತಾರೆ. ಆದರೆ ಕರ್ನಾ ಟಕದಲ್ಲಿ ಸಾಂವಿಧಾನಿಕ ಮೌಲ್ಯಗಳಿಗೆ ಧಕ್ಕೆ ತಂದಿದ್ದಾರೆ. ಎಸ್‌ಸಿ-ಎಸ್‌ಟಿ ಕಲ್ಯಾಣ ಕ್ಕಾಗಿರುವ 39,121 ಕೋಟಿ ರು.ಗಳಲ್ಲಿ 14,730 ಕೋಟಿ ರು.ಗಳನ್ನು ಗ್ಯಾರಂಟಿ ಯೋಜನೆಗಳಿಗೆ ವ್ಯಯಿಸುತ್ತಿದ್ದಾರೆ ಎಂದು ಟೀಕಿಸಿದರು.

ಜಾತಿಯಲ್ಲ, ಕೌಶಲ ಗಣತಿ ಬೇಕು: ಆಂಧ್ರ

ಅಮರಾವತಿ: ಪ್ರತಿಪಕ್ಷಗಳು ದೇಶದಲ್ಲಿ ಜಾತಿ ಗಣತಿಗೆ ಆಗ್ರಹಿಸು ತ್ತಿದ್ದರೆ, ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು 'ಕೌಶಲ ಗಣತಿ'ಗೆ ಮುಂದಾಗಿದ್ದಾರೆ. ಮುಖ್ಯ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಕೌಶಲ ಗಣತಿ ಕಡತಕ್ಕೆ ಸಹಿ ಹಾಕಿ ದ್ದಾರೆ. ಆಂಧ್ರ ರಾಜ್ಯ ಕೌಶಲ ಅಭಿವೃದ್ಧಿ ನಿಗಮ ಈ ಗಣತಿ ನಡೆಸ ಲಿದೆ. ಇದು ವಿವಿಧ ಕೈಗಾರಿಕೆಗಳ ಕಾರ್ಯಪಡೆ ಮತ್ತು ಜನ ಸಂಖ್ಯಾ ಟ್ರೆಂಡ್ ಒಳಗೊಂಡಿರಲಿದೆ. ಆಂಧ್ರದಲ್ಲಿ ನಿರುದ್ಯೋಗ ಹೆಚ್ಚಿರುವ ಹಿನ್ನೆಲೆ ಉದ್ಯೋಗಾರ್ಥಿಗಳಲ್ಲಿ ಕೌಶಲ ಹೆಚ್ಚಿಸುವ ಸಲುವಾಗಿಯೇ ಗಣತಿ ಕೈಗೊಳ್ಳಲಾಗುತ್ತಿದೆ. ಹಾಲಿ ಉದ್ಯೋಗಿಗಳು, ನೌಕರಿ ಹುಡುಕಾಟ ನಡೆಸಿರುವವರಲ್ಲಿ ಕೌಶಲ ಕೊರತೆ ಇದೆ. ಕೌಶಲ ಹೆಚ್ಚಿಸುವುದಕ್ಕಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎನ್ನಲಾಗಿದೆ.

ಮಹಾ ಎಂಎಲ್‌ಸಿ: ಎನ್‌ಡಿಎ-9, ಕೈ-1

ಮುಂಬೈ: ಮಹಾರಾಷ್ಟ್ರ ವಿಧಾನಪರಿಷತ್‌ನ 11 ಸ್ಥಾನಗಳಿಗೆ ಅಡ್ಡ ಮತದಾನ ಭಯದಲ್ಲೇ ಶುಕ್ರವಾರ ಚುನಾವಣೆ ನಡೆದಿದ್ದು, ಎನ್‌ಡಿಎ ಮೈತ್ರಿಕೂಟದ ಎಲ್ಲಾ 9 ಅಭ್ಯರ್ಥಿಗಳು ಗೆದ್ದಿದ್ದಾರೆ. ಪ್ರದಾನ್ಯ ಸತವ್ ಗೆಲುವಿನೊಂದಿಗೆ ಕಾಂಗ್ರೆಸ್ 1 ಸ್ಥಾನಕ್ಕೆ ತೃಪ್ತಿಪಟ್ಟಿದೆ. ಮಿಲಿಂದ್ ನಾರ್ವೇಕರ್ ಮತ್ತು ಜಯಂತ್ ಪಾಟೀಲ್ ಸ್ಪರ್ಧಿಸಿರುವ ಕ್ಷೇತ್ರದ ಮತ ಎಣಿಕೆ ಸಂಜೆ 5ಕ್ಕೆ ಆರಂಭವಾಗಿ ರಾತ್ರಿಯಾದರೂ ಮುಗಿದಿರಲಿಲ್ಲ.

ವಿಶ್ವಾಸಮತ ಗಳಿಸಲಾಗದ ಪುಷ್ಪ ಕಮಲ್ ದಹಾಲ್

ನೇಪಾಳ: ಪ್ರಚಂಡ ಸರ್ಕಾರ ಪತನ

ಕಠ್ಮಂಡು: ನೇಪಾಳದ ಪ್ರಧಾನಿ ಪುಷ್ಪ ಕಮಲ್ ದಹಾಲ್ (ಪ್ರಚಂಡ) ಸಂಸತ್ತಿನಲ್ಲಿ ವಿಶ್ವಾಸ ಮತ ಕಳೆದುಕೊಂಡಿದ್ದು, ಅಧಿಕಾರಕ್ಕೆ ಬಂದ 19 ತಿಂಗಳಿಗೇ ಸರಕಾರ ಪತನವಾಗಿದೆ.

ಮಾಜಿ ಪ್ರಧಾನಿ ಕೆ.ಪಿ.ಶರ್ಮಾ ಓಲಿ ನೇತೃತ್ವದ ದಹಾಲ್‌ನ ಅತಿ ದೊಡ್ಡ ಒಕ್ಕೂಟದ ಪಾಲುದಾರ ಸಿಪಿಎನ್-ಯುಎಂಎಲ್ ಪಕ್ಷ ಜು.3ರಂದು ಬೆಂಬಲ ಹಿಂತೆಗೆದುಕೊಂಡಿತು. ಬಳಿಕ ಸಂಸತ್ತಿನಲ್ಲಿ ಅವಿಶ್ವಾಸ ಮಂಡನೆಯಾಗಿತ್ತು. ಆದರೆ, 'ಪ್ರಚಂಡ' ಅವರು ಶುಕ್ರವಾರ ಸಂಸತ್ತಿನಲ್ಲಿ ವಿಶ್ವಾಸಮತ ಸಾಬೀತು ಪಡಿಸುವಲ್ಲಿ ವಿಫಲರಾ ದರು. 'ಪ್ರಚಂಡ' ಅವರು ಅವಿಶ್ವಾಸ ಮತ ಸವಾಲು ಎದುರಿಸಿದ್ದು ಇದು 5ನೇ ಬಾರಿ. ಪ್ರತಿ ಪಕ್ಷಗಳು ಮೊದಲು ಮಂಡಿಸಿದ್ದ 4 ಅವಿಶ್ವಾಸ ಮತ ಮಂಡನೆಗಳಲ್ಲಿ ಯಶಸ್ವಿಯಾಗಿ ವಿಶ್ವಾಸಮತ ಸಾಬೀತುಪಡಿಸಿದ್ದ ಪ್ರಚಂಡ, 5ನೇ ಬಾರಿ ವಿಫಲರಾದರು.

ಸದನದಲ್ಲಿ ಸಿಗದ ವಿಶ್ವಾಸ

69 ವರ್ಷದ ದಹಾಲ್ 2022ರ ಡಿ.25ರಂದು ಪ್ರಧಾನಿಯಾಗಿದ್ದು, ಅಲ್ಪಮತದ ಸರಕಾರ ನಡೆಸುತ್ತಿದ್ದರು. 275 ಸದಸ್ಯ ಬಲದ ಹೌಸ್ ಆಫ್ ರೆಪ್ರೆಸೆಂಟಿಟೀವ್ಸ್‌ನಲ್ಲಿ ಅವರು ಶುಕ್ರವಾರ ವಿಶ್ವಾಸಮತ ಕೋರಿದಾಗ 63 ಮತಗಳಷ್ಟೇ ಪರವಾಗಿ ಚಲಾವಣೆಯಾದವು.

ಹೈದರಾಬಾದ್ ಎಚ್‌ಎಂಟಿ ಮೆಷಿನ್‌ಟೂಲ್ಸ್‌ಗೆ ಭೇಟಿ | ಕಾರ್ಖಾನೆಗೆ ಕಾಯಕಲ್ಪ: ಎಚ್‌ಡಿಕೆ ಭರವಸೆ

ಎಚ್‌ಎಂಟಿ ಭೂಮಿ ಒತ್ತುವರಿ ತೆರವಿಗೆ ಕ್ರಮ

ಹೈದರಾಬಾದ್: ತೀವ್ರ ಸಂಕಷ್ಟದಲ್ಲಿರುವ ಹೈದರಾಬಾದ್‌ನ ಎಚ್‌ಎಂಟಿ ಮಷಿನ್‌ಟೂಲ್ಸ್ ಘಟಕ ಸೇರಿ ದಂತೆ ನಗರದಲ್ಲಿರುವ ಕಂಪನಿ ಒಡೆತನದ ಭೂಮಿ ರಕ್ಷಣೆಗೆ ಕ್ರಮ ಕೈಗೊಳ್ಳುವುದಾಗಿ ಕೇಂದ್ರ ಭಾರೀ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಭರವಸೆ ನೀಡಿದರು.

ಇಲ್ಲಿನ ಕಾರ್ಖಾನೆಗೆ ಶುಕ್ರವಾರ ಭೇಟಿ ನೀಡಿ, ಆಡಳಿತ ಮಂಡಳಿ, ಕಾರ್ಮಿಕರ ಜತೆ ಮಾತುಕತೆ ನಡೆಸಿದ ನಂತರ ಸುದ್ದಿಗಾರರ ಜತೆ ಮಾತನಾಡಿದರು. ಅಧಿಕಾರ ವಹಿಸಿಕೊಂಡ ಬಳಿಕ ಎಚ್‌ಎಂಟಿ ಬಗ್ಗೆ ಸರಣಿ ಸಭೆ ನಡೆಸಿದ್ದೆ. ಬೆಂಗಳೂರು, ಹರಿಯಾಣದ ಪಿಂಜೋರ್‌ನ ಘಟಕಗಳಿಗೆ ಭೇಟಿ ನೀಡಿದ್ದೆ. ದೇಶಾದ್ಯಂತದ ಎಚ್‌ಎಂಟಿ ಘಟಕಗಳು ಒಂದೇ ರೀತಿ ಸಂಕಷ್ಟ ಎದುರಿಸುತ್ತಿವೆ ಎಂದು ವಿವರಿಸಿದರು.

ಹೈದರಾಬಾದ್ ಮಷಿನ್‌ಟೂಲ್ಸ್ ಘಟಕ ಕೆಲ ವರ್ಷಗಳ ಹಿಂದೆ ಉತ್ತಮ ಸ್ಥಿತಿಯಲ್ಲೇ ಇತ್ತು. ಇಸ್ರೊ, ರಕ್ಷಣಾ ಪಡೆಗಳು ಸೇರಿದಂತೆ ವಿವಿಧ ವಲಯಗಳ ಬೇಡಿಕೆಗೆ ತಕ್ಕಂತೆ ದೊಡ್ಡ ಪ್ರಮಾಣದಲ್ಲಿ ಟೂಲ್ಸ್ ಉತ್ಪಾದಿಸುತ್ತಿತ್ತು. ವಿವಿಧ ಕಾರಣಗಳಿಂದಾಗಿ ಸಂಕಷ್ಟಕ್ಕೆ ಸಿಲುಕಿದೆ. ಘಟಕಕ್ಕೆ ಪುನರುಜ್ಜೀವನ ನೀಡಬೇಕಿದೆ. ಆ ಬಗ್ಗೆ ಮುಕ್ತವಾಗಿ ಚಿಂತನೆ ನಡೆಸಲಾಗುವುದು. ಪ್ರಧಾನಿ ನರೇಂದ್ರ ಮೋದಿ ಅವರ ಆತ್ಮನಿರ್ಭರ ಭಾರತ ಕಲ್ಪನೆಯಡಿ ಕಾರ್ಖಾನೆ ಪುನಶ್ಚೇತನಕ್ಕೆ ಮಾರ್ಗೋಪಾಯ ಹುಡುಕಲಾಗುವುದು.

-ಎಚ್.ಡಿ.ಕುಮಾರಸ್ವಾಮಿ,
ಉಕ್ಕು-ಭಾರೀ ಕೈಗಾರಿಕೆ ಸಚಿವ

ಕಂಪನಿ ದೊಡ್ಡ ಪ್ರಮಾಣದಲ್ಲಿ ಭೂಮಿ ಹೊಂದಿದ್ದು, ಬಹಳಷ್ಟು ಕಡೆ ಬೇರೆಯವರು ಒತ್ತುವರಿ ಮಾಡಿದ್ದಾರೆ.

ಕಾನೂನು ಕ್ರಮ ಮೂಲಕ ಒತ್ತುವರಿ ತೆರವುಗೊಳಿಸಿ ಕಂಪನಿಯ ಭೂಮಿಯನ್ನು ವಾಪಸ್ ಪಡೆಯಬೇಕಿದೆ. ಈ ಬಗ್ಗೆ ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನ ನೀಡಿದ್ದೇನೆ ಎಂದರು.

ಹಾಲಿ ಮತ್ತು ನಿವೃತ್ತ ಕಾರ್ಮಿಕರ ಮನವಿ ಆಲಿಸಿದ ಸಚಿವ ಎಚ್‌ಡಿಕೆ, ಬೇಡಿಕೆ ಈಡೇರಿಸುವ ಭರವಸೆ ನೀಡಿದರು. ಭಾರೀ ಕೈಗಾರಿಕೆ-ಉಕ್ಕು ಖಾತೆ ಸಹಾಯಕ ಸಚಿವ ಭೂಪತಿರಾಜು ಶ್ರೀನಿವಾಸ ವರ್ಮ, ಕಂಪನಿ ಸಿಎಂಡಿ ರಾಜೇಶ್ ಕೊಹ್ಲಿ, ಘಟಕ ಮುಖ್ಯಸ್ಥ ರಾಜಬಾಬು ಮತ್ತಿತರರು ಸಚಿವರ ಜತೆ ಸಭೆಯಲ್ಲಿ ಭಾಗಿಯಾಗಿದ್ದರು.

2100ರ ವೇಳೆಗೆ ಜನಸಂಖ್ಯೆ ಭಾರತದಲ್ಲಿ 150 ಕೋಟಿ, ಚೀನಾದಲ್ಲಿ 63.30 ಕೋಟಿ!

ಜನಸಂಖ್ಯಾಸ್ಫೋಟ; ಶತಮಾನದುದ್ದಕ್ಕೂ ಭಾರತವೇ ನಂ.1

ಜಿನಿವಾ: ಸದ್ಯ ಜನಸಂಖ್ಯೆಯಲ್ಲಿ ಭಾರತ ಮೊದಲು, ಚೀನಾ 2ನೇ ಸ್ಥಾನದಲ್ಲಿವೆ. 2060ವರೆಗೂ ಭಾರತದಲ್ಲಿ ಜನಸಂಖ್ಯಾಸ್ಫೋಟವಾಗುತ್ತಲೇ ಇರಲಿದೆ. ಜನಸಂಖ್ಯೆ 2060ರ ವೇಳೆಗೆ 170 ಕೋಟಿಗೆ ಏರುತ್ತದೆ. ನಂತರ ಶೇ.12ರಷ್ಟು ಕುಸಿಯುತ್ತದೆ. ಆದರೆ, ಭಾರತ ಶತಮಾನದ ಉದ್ದಕ್ಕೂ ವಿಶ್ವದಲ್ಲೇ ಅತ್ಯಧಿಕ ಜನಸಂಖ್ಯೆ ಹೊಂದಿರಲಿದೆ. ಮುಂದಿನ 70 ವರ್ಷಗಳಲ್ಲಿ ದುಪ್ಪಟ್ಟು ಜನಸಂಖ್ಯೆಗೆ ಭಾರತ ಸಾಕ್ಷಿಯಾಗಲಿದೆ ಎಂದು ವಿಶ್ವಸಂಸ್ಥೆ ವರದಿ ಶುಕ್ರವಾರ ತಿಳಿಸಿದೆ.

2011ರಲ್ಲಿ ನಡೆದ ಜನಗಣತಿಯಲ್ಲಿ ಭಾರತದ ಜನಸಂಖ್ಯೆ 121 ಕೋಟಿ ಇತ್ತು. 2100ರ ವೇಳೆಗೆ ಭಾರತದ ಜನಸಂಖ್ಯೆ ತುಸು ಕಡಿಮೆಯಾಗಬಹುದು ಎಂದು ನಿರೀಕ್ಷಿಸಲಾಗಿದೆ. ಹಾಗಿದ್ದೂ ಜನರ ಸಂಖ್ಯೆ ಚೀನಾಗಿಂತ ಭಾರತದಲ್ಲಿ ಎರಡೂವರೆ ಪಟ್ಟು ಹೆಚ್ಚು ಇರಲಿದೆ.

ಜನಸಂಖ್ಯೆ (ಕೋಟಿಗಳಲ್ಲಿ)

ವರ್ಷ	ಭಾರತ	ಚೀನಾ
2024	145	141
2054	169	121
2060	170	&&
2100	150	63.30

ವಿಶ್ವದ ಜನಸಂಖ್ಯೆ ಈ ಶತಮಾನದಲ್ಲೇ 1030 ಕೋಟಿಗೆ ಏರಿಕೆಯಾಗುವ ಸಾಧ್ಯತೆ ಇದೆ. ಸದ್ಯ 820 ಕೋಟಿಯಷ್ಟಿರುವ ಜನಸಂಖ್ಯೆ 2080ರಲ್ಲಿ 1030 ಕೋಟಿ ಮುಟ್ಟಲಿದೆ. ಜಪಾನ್, ಚೀನಾ ಸೇರಿದಂತೆ 63 ರಾಷ್ಟ್ರಗಳ ಜನಸಂಖ್ಯೆ 2024ಕ್ಕೂ ಮುನ್ನವೇ ಗರಿಷ್ಠ ಮಟ್ಟ ತಲುಪಿದೆ. ಭಾರತ ಮತ್ತು ಅಮೆರಿಕ ಸೇರಿದಂತೆ 126 ದೇಶಗಳ ಜನಸಂಖ್ಯೆ 2100ರಲ್ಲಿ ಗರಿಷ್ಠ ಮಟ್ಟಕ್ಕೇರುವ ನಿರೀಕ್ಷೆ ಇದೆ ಎಂದು ವಿಶ್ವಸಂಸ್ಥೆ ವರದಿಯಲ್ಲಿ ಹೇಳಲಾಗಿದೆ.



ಮತ್ತೆ ಹೆಚ್ಚಿದ ಜೀವಿತಾವಧಿ!

ಕೋವಿಡ್ ಸಾಂಕ್ರಾಮಿಕ ವೇಳೆ ಕುಸಿತ ಕಂಡಿದ್ದ ಮನುಷ್ಯರ ಜೀವಿತಾವಧಿ, 2022ರ ಬಳಿಕ ಎಲ್ಲಾ ದೇಶ-ಪ್ರದೇಶಗಳಲ್ಲಿಯೂ ಕೋವಿಡ್ ಪೂರ್ವ ಮಟ್ಟಕ್ಕೆ ಮರಳಿದೆ. ಅಂದರೆ, ಸರಾಸರಿ 73.3 ವರ್ಷಗಳಿಗೆ ಏರಿಕೆಯಾಗಿದೆ. 2054ರ ವೇಳೆಗೆ ಜಾಗತಿಕ ಮಟ್ಟದಲ್ಲಿ ಮಾನವ ಜೀವಿತಾವಧಿ 77.4 ವರ್ಷಗಳಿಗೆ ಏರಿಕೆಯಾಗುವ ಸಾಧ್ಯತೆ ಇದೆ ಎಂದು ವರದಿ ವಿಶ್ವಾಸ ವ್ಯಕ್ತಪಡಿಸಿದೆ. ಭಾರತದಲ್ಲಿ ಪುರುಷರ ಜೀವಿತಾವಧಿ 71 ವರ್ಷ ಇತ್ತು ಮತ್ತು ಮಹಿಳೆಯರ ಸರಾಸರಿ ಆಯಸ್ಸು 74 ವರ್ಷಗಳು ಇದ್ದವು. ವಿಶ್ವಸಂಸ್ಥೆಯ ವರದಿಯ ಪ್ರಕಾರ, 2006-2023ರ ಅವಧಿಯಲ್ಲಿ ಭಾರತದಲ್ಲಿ ಬಾಲ್ಯವಿವಾಹ ಶೇ.23ರಷ್ಟಿತ್ತು

ಸಮರ್ಥ, ಬಲಿಷ್ಠ ತಂಡ ಕಟ್ಟುವುದೇ ಬಿಸಿಸಿಐ

ಮೇರು ಆಟಗಾರರ ನಿವೃತ್ತಿ ಬೆನ್ನಲ್ಲೇ ಖಾಯಂ ಸ್ಥಾನ ಪಡೆಯಲು ಆಟಗಾರರ ಕಸರತ್ತು | ಬ್ಯಾಟಿಂಗ್, ಬೌಲಿಂಗ್, ಆಲ್‌ರೌಂಡರ್ ವಿಭಾಗದಲ್ಲೂ ಪೈಪೋಟಿ | ನಾಯಕ ಸ್ಥಾನಕ್ಕೆ ಹಲವರ ಗುದ್ದಾಟ

17 ವರ್ಷಗಳ ಬಳಿಕ ಭಾರತ ಟಿ20 ವಿಶ್ವಕಪ್ ಗೆದ್ದ ಬೆನ್ನಲ್ಲೇ ಇಡೀ ಭಾರತದಲ್ಲಿ ಖುಷಿಯ ವಾತಾವರಣ ಸೃಷ್ಟಿಯಾಗಿತ್ತು. ಈ ಮಧ್ಯೆ ಭಾರತದ ಮೇರಿ ಆಟಗಾರರಾದ ವಿರಾಟ್ ಕೊಹ್ಲಿ, ರವೀಂದ್ರ ಜಡೇಜಾ ಹಾಗೂ ನಾಯಕ ರೋಹಿತ್ ಶರ್ಮ ಅವರು ಟಿ20ಗೆ ವಿದಾಯ ಘೋಷಿಸಿ ಖುಷಿಯಲ್ಲಿದ್ದ ಭಾರತೀಯ ಅಭಿಮಾನಿಗಳಿಗೆ ಶಾಕ್ ನೀಡಿದ್ದರು. ಟಿ20 ವಿಶ್ವಕಪ್‌ಗೂ ಮುನ್ನ ವಿರಾಟ್ ಕೊಹ್ಲಿ, ರೋಹಿತ್ ಶರ್ಮ ಅವರ ನಿವೃತ್ತಿಯ ಬಗ್ಗೆ ಚರ್ಚೆ ನಡೆಯುತ್ತಿದ್ದವು. ಇದರ ಬೆನ್ನಲ್ಲೇ ಏಕಾಏಕಿ ಮೂವರೂ ಆಟಗಾರರು ನಿವೃತ್ತಿ ಘೋಷಿಸಿದ್ದರು. ಅವರು ನಿವೃತ್ತಿ ಘೊಷಿಸಿದ್ದೆ ಸರಿ ಇದೀಗ ಭಾರತ ತಂಡದಲ್ಲಿ ಖಾಯಂ ಸ್ಥಾನ ಪಡೆಯಲು ಭಾರತೀಯರು ಕಸರತ್ತನ್ನು ನಡೆಸಿದ್ದಾರೆ. ಪ್ರತಿಬಾರಿ ನಡೆಯುವ ಐಪಿಎಲ್‌ನಿಂದಾಗಿ ಭಾರತ ತಂಡ ಸೇರಲು ಹಗ್ಗಜಗ್ಗಾಟ ನಡೆಯುತ್ತಿದೆ. ಹೀಗಾಗಿ ಬಲಿಷ್ಠ ಹಾಗೂ ಸಮರ್ಥ ತಂಡವನ್ನು ರಚಿಸಲು ಬಿಸಿಸಿಐ ಹೊಸ ತಂತ್ರವನ್ನು ಬಳಿಸುತ್ತಿದೆ. 2026ರ ವಿಶ್ವಕಪ್‌ಗೂ ಮುನ್ನ ಭಾರತ ಒಟ್ಟು 34 ಟಿ20 ಪಂದ್ಯಗಳನ್ನು ಆಡಲಿದೆ ಎನ್ನುವ ವರದಿಯೊಂದು ಅಲೆದಾಡುತ್ತಿದೆ. ಇದು ಟಿ20 ತಂಡವನ್ನು ಸಿದ್ಧಪಡಿಸಲು ಹೊಸ ತಂತ್ರ ಎಂದು ಪರಿಗಣಿಸಲಾಗುತ್ತಿದೆ.

- ಮೇರು ಆಟಗಾರರು ನಿವೃತ್ತರಾದ ಬೆನ್ನಲ್ಲೇ ಹೊಸ ಆಟಗಾರರ ಹುಡುಕಾಟ
- ನೂತನ ಕೋಚ್‌ಗೆ ಅಗ್ನಿಪರೀಕ್ಷೆ
- ನಾಯಕ ಸ್ಥಾನಕ್ಕೆ ಗುದ್ದಾಟ
- ಐಪಿಎಲ್ ಆಟವೇ ಆಟಗಾರರ ಶಕ್ತಿ
- ಮುಂದಿನ ವಿಶ್ವ ಕಪ್‌ಗೂ ಮುನ್ನ ಹಲವು ಸರಣಿಗಳು

ಆರಂಭಿಕ ಸ್ಥಾನಕ್ಕೆ ಗುದ್ದಾಟ

ಭಾರತ ರಚಿಸುವ ನೂತನ ತಂಡದಲ್ಲಿ ಆರಂಭಿಕ ಸ್ಥಾನವನ್ನು ಪಡೆಯಲು ಹಗ್ಗಜಗ್ಗಾಟ ನಡೆಯುತ್ತಿದೆ. ಐಪಿಎಲ್‌ನಲ್ಲಿ ಮಿಂಚುತ್ತಿರುವ ಯುವ ಆಟಗಾರರು ಟಿ20ಯಲ್ಲಿ ಸ್ಥಾನ ಪಡೆಯಲು ಕಸರತ್ತನ್ನು ನಡೆಸುತ್ತಿದ್ದಾರೆ. ಪ್ರಮುಖವಾಗಿ ಐಪಿಎಲ್‌ನಲ್ಲಿ ಮಿಂಚುವ ಯಶಸ್ವಿ ಜಯಸ್ವಾಲ್, ಶುಭಮನ್ ಗಿಲ್, ಅಭಿಷೇಕ್ ಶರ್ಮ, ಋತುರಾಜ್ ಗಾಯಕ್‌ವಾಡ್, ಇಶಾನ್ ಕಿಶನ್ ಸೇರಿ ಇನ್ನೂ ಕೆಲವು ಆಟಗಾರರು ರೇಸ್‌ನಲ್ಲಿದ್ದಾರೆ. ಐಪಿಎಲ್ ಅಲ್ಲದೇ, ಬಿಸಿಸಿಐ ಆಯೋಜಿಸುವ ಸರಣಿಗಳಲ್ಲಿ ಮಿಂಚಿದವರು ತಂಡದಲ್ಲಿ ಸ್ಥಾನ ಪಡೆಯಲಿದ್ದಾರೆ.

ತಲೆಕೆಡಿಸಿದ ಮೂರನೇ ಕ್ರಮಾಂಕ

ಮೂರನೇ ಕ್ರಮಾಂಕದಲ್ಲಿ ಹೆಚ್ಚಾಗಿ ಕಾಣುತ್ತಿದ್ದ ವಿರಾಟ್ ಕೊಹ್ಲಿ ಅವರು ನಿವೃತ್ತರಾದ ಮೇಲೆ ಮುಂದಿನ ಮೂರನೇ ಕ್ರಮಾಂಕದ ಆಟಗಾರ ಯಾರು ಎಂಬ ಪ್ರಶ್ನೆ ಎಲ್ಲರಲ್ಲೂ ಕಾಡುತ್ತಿದೆ. ಪ್ರಮುಖವಾಗಿ ಶ್ರೇಯಸ್ ಅಯ್ಯರ್ ಅವರನ್ನು ಕಡೆಗಣಿಸಲಾಗುತ್ತಿದೆ. ಇನ್ನೊಂದೆಡೆ, ಋತುರಾಜ್ ಅವರನ್ನು ಎಲ್ಲ ಕ್ರಮಾಂಕದಲ್ಲೂ ಆಡಿಸಿ ನೋಡಲಾಗುತ್ತಿದೆ. ಅದಲ್ಲದೇ ವಿಕೆಟ್ ಕೀಪರ್ ರಿಷಭ್ ಪಂತ್ ಅವರನ್ನು ಈ ಬಾರಿಯ ವಿಶ್ವಕಪ್‌ನಲ್ಲಿ ಮೂರನೇ ಕ್ರಮಾಂಕದಲ್ಲಿ ಆಡಿಸಲಾಗಿತ್ತು ಹೀಗಾಗಿ ಮೂರನೇ ಕ್ರಮಾಂಕದಲ್ಲಿ ಯಾರನ್ನು ಆಡಿಸಬಹುದು ಎಂಬ ಪ್ರಶ್ನೆ ಎಲ್ಲರಲ್ಲೂ ಕಾಡುತ್ತಿದೆ.



ನೂತನ ತಂಡಕ್ಕೆ ನಾಯಕ ಯಾರು?

ರೋಹಿತ್ ಶರ್ಮ ಅವರು ವಿದಾಯ ಘೋಷಿಸಿದ್ದು, ನೂತನ ತಂಡಕ್ಕೆ ನಾಯಕ ಯಾರಾಗಲಿದ್ದಾರೆ ಎಂಬ ಪ್ರಶ್ನೆ ಎಲ್ಲರಲ್ಲೂ ಕಾಡುತ್ತಿದೆ. ಪ್ರಮುಖವಾಗಿ ಕೆ.ಎಲ್.ರಾಹುಲ್, ರಿಷಭ್ ಪಂತ್, ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ, ಜಸ್‌ಪ್ರೀತ್ ಬುಮ್ರಾ, ಶುಭ್‌ಮನ್ ಗಿಲ್ ಅವರು ಮೂಚೂಣಿಯಲ್ಲಿದ್ದು, ಈ ಎಲ್ಲರೂ ಕ್ಯಾಪ್ಟನ್ಸಿ ಮಾಡಿರುವ ಅನುಭವ ಹೊಂದಿದ್ದಾರೆ. ಅದರಲ್ಲೂ ನೂತನ ಕೋಚ್ ಗೌತಮ್ ಗಂಭೀರ್ ಅವರನ್ನು ಹೊಂದಿಕೊಂಡು ನಡೆಯುವ ಆಟಗಾರರನ್ನು ಆರಿಸ ಬೇಕಿದೆ. ಹೀಗಾಗಿ ನಾಯಕನ ಆಯ್ಕೆಯೇ ಬಿಸಿಸಿಐಗೆ ಕಗ್ಗಂಟಾಗಿದೆ.

ಮಧ್ಯಮ ಕ್ರಮಾಂಕಕ್ಕೂ ಗುದ್ದಾಟ

ಟೀಂ ಇಂಡಿಯಾ ತಂಡದಲ್ಲಿ ಯಾವಾಗಲೂ 8 ಬ್ಯಾಟರ್‌ಗಳನ್ನು ಆಡಿಸಲಾಗುತ್ತದೆ. ಆಲ್‌ರೌಂಡರ್ ಸೇರಿ ವಿವಿಧ ಪಾತ್ರಧಾರಿಗಳೂ ಬ್ಯಾಟಿಂಗ್ ಮಾಡಲು ಸಮರ್ಥರಿದ್ದಾರೆ. ಆದರೆ ಮಧ್ಯಮ ಕ್ರಮಾಂಕದಲ್ಲಿ ಬ್ಯಾಟ್ ಬೀಸಲು ಬ್ಯಾಟರ್‌ಗಳ ಗುದ್ದಾಟ ನೋಡಲು ಸಿಗಲಿದೆ. ಪ್ರಮುಖವಾಗಿ ಕೆ.ಎಲ್.ರಾಹುಲ್ ಅವರನ್ನು ವಿಶ್ವಕಪ್ ತಂಡದಿಂದ ಕೈಬಿಡಲಾಗಿತ್ತು. ಆದರೆ ಇದೀಗ ಅವರೂ ಸಹ ಆಯ್ಕೆಯಲ್ಲಿ ಇದ್ದಾರೆ. ಅವರಲ್ಲದೇ ಸೂರ್ಯಕುಮಾರ್ ಯಾದವ್ ಟಿ20ಯಲ್ಲಿ ಸಂಚಲನವನ್ನೇ ಮೂಡಿಸಿದ್ದಾರೆ. ಉಳಿದಂತೆ ಸಂಜು ಸ್ಯಾಮ್ಸನ್, ಶ್ರೇಯಸ್ ಅಯ್ಯರ್, ರಿಯಾನ್ ಪರಾಗ್, ಸಂಜು ಸ್ಯಾಮ್ಸನ್ ಅವರೂ ಸ್ಪರ್ಧೆಯಲ್ಲಿ ಇದ್ದಾರೆ.

ಕೀಪಿಂಗ್ ಸ್ಥಾನಕ್ಕೂ ಕಿತ್ತಾಟ

ಪ್ರಸ್ತುತ ಭಾರತ ತಂಡದಲ್ಲಿ ಅನೇಕ ವಿಕೆಟ್ ಕೀಪರ್‌ಗಳು ಇದ್ದಾರೆ. ಪ್ರಮುಖವಾಗಿ ಪಂತ್ ತಮ್ಮ ಸ್ಥಾನದಲ್ಲಿ ಗಟ್ಟಿಯಾಗಿ ನಿಂತಿದ್ದಾರೆ. ಅವರನ್ನು ಹೊರೆತುಪಡಿಸಿದರೆ, ಕೆ.ಎಲ್. ರಾಹುಲ್, ಸಂಜು ಸ್ಯಾಮ್ಸನ್, ಇಶಾನ್ ಕಿಶಾನ್ ಸಹ ಮುಂಚೂಣಿಯಲ್ಲಿ ಇದ್ದಾರೆ. ಹಾಗೆ ನೋಡಿದರೆ ರಿಷಭ್ ಪಂತ್ ಐಪಿಎಲ್ ಅಲ್ಲದೇ ವಿವಿಧ ಸರಣಿ, ಐಸಿಸಿ ಟ್ರೋಫಿಗಳಲ್ಲಿ ಆಡಿದ ಅನುಭವ ಹೊಂದಿದ್ದಾರೆ. ಇನ್ನೊಂದೆಡೆ ಕೆ.ಎಲ್.ರಾಹುಲ್ ಅವರೂ ಹೆಚ್ಚಿನ ಅನುಭವ ಹೊಂದಿದ್ದಾರೆ. ಜುರೆಲ್, ಜಿತೇಶ್ ಸಹ ಉತ್ತಮ ಲಯದಲ್ಲಿ ಇದ್ದಾರೆ. ಹೀಗಾಗಿ ವಿಕೆಟ್ ಕೀಪಿಂಗ್ ಸ್ಥಾನಕ್ಕೆ ಪೈಪೋಟಿ ಕಾಣಿಸಲಿದೆ.

ಫಿನಿಶಿಂಗ್ ರೋಲ್ ಯಾರ ಪಾಲಿಗೆ?

ಟಿ20ಯಲ್ಲಿ ಆರಂಭದಿಂದಲೂ ಹೊಡೆದು ಆಡುವ ಸಂಪ್ರದಾಯವಿದೆ. ಆದರೆ ಫಿನಿಶಿಂಗ್ ರೋಲ್ ನಿಭಾಯಿಸುವುದಕ್ಕೆ ಭಾರತದ ಆಟಗಾರರು ತುದಿಗಲಲ್ಲಿ ನಿಂತಿದ್ದಾರೆ. ಪ್ರಮುಖವಾಗಿ ರಿಂಕು ಸಿಂಗ್ ಅವರು ಮುಂಚೂಣಿಯಲ್ಲಿ ಇದ್ದು, ವಿಶ್ವಕಪ್ ಸ್ಥಾನದಲ್ಲಿ ಇದ್ದ ಶಿವಂ ದುಬೆ ಹಾಗೂ ಐಪಿಎಲ್‌ನಲ್ಲಿ ಮಿಂಚಿದ್ದ ನಿತೀಶ್ ರೆಡ್ಡಿ ಸಹ ಸಂಚಲನ ಮೂಡಿಸಿದ್ದಾರೆ.

ಆಟಲ್‌ರೌಂಡರ್ ಸ್ಥಾನ ಯಾರಿಗೆ?

ಭಾರತ ತಂಡದಲ್ಲಿ ಆಲ್‌ರೌಂಡರ್‌ಗಳಿಗೆ ಕಮ್ಮಿ ಇಲ್ಲ. ಅದರಲ್ಲೂ ಐಪಿಎಲ್‌ನಲ್ಲಿ ಬ್ಯಾಟ್ ಮತ್ತು ಬಾಲ್‌ನಲ್ಲಿ ಮಿಂಚುವ ಆಟಗಾರರು ತುಂಬಿದ್ದಾರೆ. ಪ್ರಮುಖವಾಗಿ ಹಾರ್ದಿಕ್ ಪಾಂಡ್ಯ ಅವರನ್ನು ನಾಯಕ ಮಾಡುವ ಸಂಭವವಿದೆ ಎನ್ನಲಾಗಿದೆ. ಹೀಗಾಗಿ ಅವರಂತೂ ಖಾಯಂ ಸ್ಥಾನ ಪಡೆಯುವುದು ಖಚಿತ. ವಿಶ್ವಕಪ್‌ನಲ್ಲಿ ಮಿಂಚಿದ್ದ ಅಕ್ಷರ್ ಪಟೇಲ್ ಅವರು ಜಡೇಜಾ ಅವರ ಸ್ಥಾನ ತುಂಬಲಿದ್ದಾರೆ ಎಂಬ ವದಂತಿಗಳು ಹರಿದಾಡುತ್ತಿವೆ.



ಸ್ಪಿನ್ನರ್‌ಗಳಲ್ಲೂ ಪೈಪೋಟಿ

ಬೌಲಿಂಗ್ ವಿಭಾಗದಲ್ಲಿ ಅದರಲ್ಲೂ ಸ್ಪಿನ್ ವಿಭಾಗದಲ್ಲಿ ತೀವ್ರ ಪೈಪೋಟಿ ನೋಡಲು ಸಿಗಬಹುದು. ಪ್ರಮುಖವಾಗಿ ಯಾವಾಗಲೂ ಮಿಂಚುವ ಕುಲ್‌ದೀಪ್ ಯಾದವ್ ಅವರು ಮುಂಚೂಣಿಯಲ್ಲಿ ಇದ್ದು, ಅವರಿಗೆ ಚಹಲ್, ಹರ್‌ಪ್ರೀತ ಬ್ರಾರ್ ಹಾಗೂ ಶ್ರೇಯಸ್ ಗೋಪಾಲ್ ಸೇರಿ ಅನೇಕ ಸ್ಪಿನ್ನರ್‌ಗಳು ಪೈಪೋಟಿ ನೀಡಲಿದ್ದಾರೆ.

ಬೌಲಿಂಗ್ ವಿಭಾಗದಲ್ಲೂ ಗುದ್ದಾಟ

ಬೌಲಿಂಗ್ ವಿಭಾಗದಲ್ಲಿ ಬುಮ್ರಾ ಅವರು ಖಾಯಂ ಸ್ಥಾನ ಪಡೆಯಲಿದ್ದಾರೆ. ಅವರನ್ನು ಹೊರತು ಪಡಿಸಿ ವಿಶ್ವಕಪ್‌ನಲ್ಲಿ ಮಿಂಚಿದ್ದ ಅರ್ಶ್ ದೀಪ್, ಐಪಿಎಲ್‌ನಲ್ಲಿ ಮಿಂಚುವ ಮುಖೇಷ್ ಕುಮಾರ್, ಆವೇಶ್ ಖಾನ್, ಸಿರಾಜ್ ಸೇರಿ ಹಲವರು ಮುಂಚೂಣಿಯಲ್ಲಿ ಇದ್ದಾರೆ.

ಸಮಾಚಾರ ಸಣ್ಣದಲ್ಲ

ನಟ್ ಅಕ್ಷಯ್‌ಗೆ ಕೋವಿಡ್ ದೃಢ

ಮುಂಬೈ: ಬಾಲಿವುಡ್ ನಟ ಅಕ್ಷಯ್ ಕುಮಾರ್ ಕೋವಿಡ್-19 ಸೋಂಕಿಗೆ ಒಳಗಾಗಿದ್ದಾರೆ. ಹಾಗಾಗಿ, ಉದ್ಯಮಿ ಮುಖೇಶ್ ಅಂಬಾನಿ ಅವರ ಪುತ್ರ ಅನಂತ್ ಅಂಬಾನಿ ವಿವಾಹ ಸಮಾರಂಭಕ್ಕೆ ಹಾಜರಾಗಿಲ್ಲ ಎಂದು ಮೂಲಗಳು ಶುಕ್ರವಾರ ತಿಳಿಸಿವೆ. ಪ್ರಯೋಗಾಲಯ ಪರೀಕ್ಷೆಯ ಬಳಿಕ ಕೋವಿಡ್-19 ಸೋಂಕು ದೃಢಪಟ್ಟಿದ್ದರಿಂದ ಅಕ್ಷಯ್ ಮನೆಯಲ್ಲೇ ಪ್ರತ್ಯೇಕವಾಗಿ ಇದ್ದು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಅನಂತ್ ಅಂಬಾನಿ ಅವರೇ ಅಕ್ಷಯ್ ಮನೆಗೆ ತೆರಳಿ ಮದುವೆ ಆಹ್ವಾನ ಪತ್ರಿಕೆ ನೀಡಿದ್ದರು. ಹಾಗಾಗಿ, ಅಕ್ಷಯ್ ಮದುವೆಗೆ ಹಾಜರಾಗಲು ನಿರ್ಧರಿಸಿದ್ದರು. ಆದರೆ, ಸೋಂಕಿನ ಕಾರಣ ಸಮಾರಂಭದಿಂದ ದೂರ ಉಳಿಯುವಂತಾಯಿತು ಎಂದು ಅಕ್ಷಯ್ ಕುಟುಂಬದವರು ಹೇಳಿದ್ದಾರೆ.

ರಾಜನಾಥ್ ಸಿಂಗ್ ಏಮ್ಸ್‌ಗೆ ದಾಖಲು

ದೆಹಲಿ: ರಕ್ಷಣಾ ಸಚಿವ ರಾಜನಾಥ್ ಸಿಂಗ್ ಆರೋಗ್ಯ ಹದಗೆಟ್ಟ ಕಾರಣ ಅವರನ್ನು ದೆಹಲಿಯ ಏಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಸಿಂಗ್ ಬೆನ್ನು ನೋವಿನಿಂದ ಬಳಲುತ್ತಿದ್ದು, ನ್ಯೂರೋ ಸರ್ಜರಿ ವಿಭಾಗದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಎಂಆರ್‌ಐ ಮಾಡಿಸಲು ವೈದ್ಯರು ಸಲಹೆ ನೀಡಿದ್ದಾರೆ. ನ್ಯೂರೋ ಸರ್ಜನ್ ಡಾ. ಅಮೋಲ್ ರಹೇಜಾ ಮೇಲ್ವಿಚಾರಣೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ರಕ್ಷಣಾ ಸಚಿವರ ಆರೋಗ್ಯ ಸ್ಥಿರವಾಗಿದೆ ಎಂದು ಏಮ್ಸ್‌ನ ಡಾ. ರೀಮಾ ದಾದಾ ತಿಳಿಸಿದ್ದಾರೆ.

ಉದ್ಯಮಿ, ನೌಕರರು ನೆರೆ ರಾಜ್ಯ ವಲಸೆ ತಪ್ಪಿಸಬೇಕು

ಬೆಂಗಳೂರು ಟೆಕ್ ಶೃಂಗಸಭೆ ಸಂವಾದದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತು | ಏಷ್ಯಾದ ಅತಿದೊಡ್ಡ ತಂತ್ರಜ್ಞಾನ ಸಮಾವೇಶ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಭಾರತವನ್ನು ಬೆಂಗಳೂರಿನ ಮೂಲಕ ಪ್ರಪಂಚವೇ ನೋಡುತ್ತಿದೆ. ಸರಕಾರ ಬೆಂಗಳೂರಿನ ಅಭಿವೃದ್ಧಿಗೆ ಬದ್ಧವಾಗಿದ್ದು, ಉದ್ಯಮಿಗಳು, ನೌಕರರು ನೆರೆಯ ರಾಜ್ಯಗಳಿಗೆ ಹೋಗುವುದನ್ನು ತಪ್ಪಿಸಿ ಪ್ರಪಂಚದ, ದೇಶದ ಜನರನ್ನು ಕರ್ನಾಟಕ ಮುಕ್ತವಾಗಿ ಸ್ವಾಗತಿಸುತ್ತದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ದೇಶ- ವಿದೇಶಗಳಿಂದ ಆಗಮಿಸಿದ್ದ 200 ಹೆಚ್ಚು ಐಟಿ, ಸೆಮಿಕಂಡಕ್ಟರ್ ಮತ್ತು ಎಲೆಕ್ಟ್ರಾನಿಕ್ಸ್, ಎವಿಜಿಸಿ, ಬಯೋಟೆಕ್ ಮತ್ತು ನವೋದ್ಯಮ ಸಂಸ್ಥೆಗಳ ಸಿಇಒ, ಎಂಡಿಗಳೊಂದಿಗೆ ನಗರದ ಖಾಸಗಿ ಹೋಟೆಲ್‌ನಲ್ಲಿ ಶುಕ್ರವಾರ ನಡೆದ ಉಪಹಾರ ಕೂಟ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಉದ್ಯೋಗದಾತರು ಬಲಗೊಂಡಷ್ಟು ನೌಕರರ ಶಕ್ತಿಯೂ ಹೆಚ್ಚುತ್ತದೆ. ಆರ್ಥಿಕತೆಯೂ ಬಲಗೊಳ್ಳುತ್ತದೆ, ದೇಶದ ಶಕ್ತಿಯೂ ಹೆಚ್ಚುತ್ತದೆ ಇದಕ್ಕೆ ಸಚಿವ ಪ್ರಿಯಾಂಕ್ ಖರ್ಗೆ ಇಲಾಖೆಯಿಂದ ಕೈಗೊಂಡಿರುವ ಕಾರ್ಯಗಳ ಬಗ್ಗೆ ಹೊರತಂದಿರುವ ಕಿರುಹೊತ್ತಿಗೆ ಸಾಕ್ಷಿ ಎಂದು ತಿಳಿಸಿದರು.

ಸಿಎಸ್‌ಆರ್ ಹಣ ಬಳಸಿ: ಉದ್ಯಮಿಗಳು ನಮ್ಮ ಶಕ್ತಿಯ ರಾಯಭಾರಿಗಳು. ಬೆಂಗಳೂರು ಕೈಗಾರಿಕಾ ಹಾಗೂ ಸೇವಾ ಕ್ಷೇತ್ರದಲ್ಲಿ ಪ್ರಬಲವಾಗಿ ಬೆಳೆಯುತ್ತಿದ್ದು, ನಾಡಪ್ರಭು ಕೆಂಪೇಗೌಡರಿಗೂ ಬೆಂಗಳೂರು ಇಷ್ಟು ದೊಡ್ಡದಾಗಿ ಬೆಳೆಯುತ್ತದೆ ಎನ್ನುವ ಕಲ್ಪನೆಯೇ ಇರಲಿಲ್ಲ. ಸುಮಾರು 1.4 ಕೋಟಿ ಜನಸಂಖ್ಯೆಯಿದ್ದು ದೇಶದ ನಾನಾ ಕಡೆಗಳಿಂದ ಜನರು ಬರುತ್ತಿರುವುದನ್ನು ತಪ್ಪಿಸಿ ನಗರದ ಮೇಲಿನ ಒತ್ತಡ ಕಡಿಮೆ ಮಾಡಬೇಕಾಗಿದೆ. ಆದ ಕಾರಣ ರಾಜ್ಯದ ಎಲ್ಲಾ ಭಾಗಗಳಲ್ಲಿ ಉದ್ಯಮಗಳನ್ನು ಸ್ಥಾಪಿಸಲು ಅನುಕೂಲವಾಗುವ ವಾತಾವರಣ ನಿರ್ಮಾಣ ಮಾಡಬೇಕಿದೆ. ಗ್ರಾಮೀಣ ಭಾಗದ ಶಿಕ್ಷಣಕ್ಕೆ 8 ಸಾವಿರ ಕೋಟಿ ಸಿಎಸ್ ಆರ್ ಹಣ ಬಳಕೆ ಮಾಡಬೇಕು ಎಂದು ಸೂಚನೆ ನೀಡಲಾಗಿದೆ ಎಂದರು.

> **ಜಾಗತಿಕ ಮಟ್ಟದಲ್ಲಿ ಕರ್ನಾಟಕ ಉನ್ನತಿ ಸಾಧಿಸಲು ಬೆಂಬಲ ನೀಡಿದ ಎಲ್ಲಾ ಉದ್ಯಮ ಸಂಸ್ಥೆಗಳಾದ - ನ್ಯಾಷನಲ್ ಅಸೋಸಿಯೇಷನ್ ಆಫ್ ಸಾಫ್ಟ್‌ವೇರ್ ಸೇವಾ ಕಂಪನಿಗಳು, ಇಂಡಿಯಾ ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್ ಅಸೋಸಿಯೇಷನ್, ಅಸೋಸಿಯೇಷನ್ ಆಫ್ ಬಯೋಟೆಕ್ನಾಲಜಿ ಲೀಡ್ ಎಂಟರ್‌ಪ್ರೈಸಸ್ ಮತ್ತು ವಿಷನ್ ಗ್ರೂಪ್‌ಗಳಿಗೆ ಧನ್ಯವಾದ.**
>
> **- ಸಿದ್ದರಾಮಯ್ಯ** ಮುಖ್ಯಮಂತ್ರಿ

ಖಾಸಗಿ ಹೋಟೆಲ್ ನಲ್ಲಿ ಬೆಂಗಳೂರು ಟೆಕ್ ಸಮ್ಮಿಟ್ ಸಂಬಂಧದ ಪೂರ್ವಭಾವಿ ಬೆಳಗಿನ ಉಪಹಾರ ಸಭೆಯಲ್ಲಿ ಕಿರುಹೊತ್ತಿಗೆ ಬಿಡುಗಡೆಗೊಳಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ. ಈವೇಳೆ ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಪ್ರಿಯಾಂಕ್ ಖರ್ಗೆ ಇದ್ದರು.

ಬ್ರೇಕಿಂಗ್ ಬೌಂಡರೀಸ್: ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ಟೆಕ್ ಶೃಂಗಸಭೆ ಕರ್ನಾಟಕ ಸರಕಾರದ ಪ್ರಮುಖ ಕಾರ್ಯಕ್ರಮವಾಗಿದ್ದು, ಈ ಬಾರಿ ನಡೆಯುವ 27ನೇ ಆವೃತ್ತಿಯ ಬಿಟಿಎಸ್ 'ಬ್ರೇಕಿಂಗ್ ಬೌಂಡರೀಸ್' ಘೋಷವಾಕ್ಯದೊಂದಿಗೆ ಏಷ್ಯಾದ ಅತಿದೊಡ್ಡ ತಂತ್ರಜ್ಞಾನ ಸಮಾವೇಶನ್ನು ಹಮ್ಮಿಕೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

2024 ನವೆಂಬರ್ 19 ರಿಂದ 21 ರವರೆಗೆ ಬೆಂಗಳೂರಿನಲ್ಲಿ ಬೃಹತ್ ಟೆಕ್ ಶೃಂಗಸಭೆ ನಡೆಯಲಿದೆ. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದ ಬಲವರ್ಧನೆಗೆ ಹಾಗೂ ಕೈಗಾರಿಕೆಗಳು ಮತ್ತು ವ್ಯವಹಾರಗಳನ್ನು ಮರುರೂಪಿಸುತ್ತಿರುವ ಇತ್ತೀಚೆಗಿನ ತಾಂತ್ರಿಕ ಪ್ರಗತಿಗಳು ಮತ್ತು ಪ್ರವೃತ್ತಿಗಳ ಕುರಿತು ನಾವು ಚರ್ಚಿಸುತ್ತೇವೆ. ಶೃಂಗಸಭೆಯಲ್ಲಿ ಉದ್ಯಮ, ಶೈಕ್ಷಣಿಕ ಮತ್ತು ನೀತಿಯ ಬಗ್ಗೆ ಯೋಜನೆ ರೂಪಿಸಲಾಗುತ್ತಿದೆ. ಇಲ್ಲಿಯವರೆಗೆ ನಡೆದ 26 ಟೆಕ್ ಶೃಂಗಸಭೆಗಳಲ್ಲಿ ಹಲವು ದೇಶ, ರಾಜ್ಯಗಳ ಮುಖ್ಯಸ್ಥರು ಮತ್ತು ಉದ್ಯಮದ ದಿಗ್ಗಜರು ಭಾಗವಹಿಸಿದ್ದಾರೆ. ಸ್ಟಾರ್ಟ್‌ಅಪ್ ಮತ್ತು ಗ್ಲೋಬಲ್ ಇನ್ನೋವೇಶನ್ ಅಲೈಯನ್ಸ್ ಟ್ರ್ಯಾಕ್‌ಗಳಲ್ಲಿ ತಿಳಿಸಲಾದ ವೈವಿಧ್ಯಮಯ ವಿಷಯಗಳನ್ನು ಪರಿಚಯಿಸುತ್ತಿದೆ. ರಾಜ್ಯವು ಗ್ಲೋಬಲ್ ಇನ್ನೋವೇಶನ್ ಅಲೈಯನ್ಸ್ ಕಾರ್ಯಕ್ರಮದ ಮೂಲಕ ವಿಶ್ವದ ಪ್ರಮುಖ ಕಂಪನಿಗಳ ಸಹಯೋಗವನ್ನು ಹೊಂದಲಾಗಿದೆ ಎಂದರು.

ಮಾಹಿತಿ ತಂತ್ರಜ್ಞಾನ ಮತ್ತು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಕಾಂಕ್ ಖರ್ಗೆ, ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ, ರಾಜ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಇದ್ದರು.

ಆರ್ಥಿಕ ಅಭಿವೃದ್ಧಿಗೆ ಸಹಕಾರಿ

ರಾಜ್ಯದ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯಲ್ಲಿ ತಂತ್ರಜ್ಞಾನ ಉದ್ಯಮ ಪ್ರಮುಖ ಪಾತ್ರ ವಹಿಸುತ್ತದೆ. ವಿದೇಶಿ ಕಂಪೆನಿಗಳ ಹೂಡಿಕೆಯನ್ನು ಪ್ರೋತ್ಸಾಹಿಸುವ ಮತ್ತು ಸುಸ್ಥಿರ ಬೆಳವಣಿಗೆಯನ್ನು ಬೆಂಬಲಿಸಲು ಬಿಡಿಎಸ್ ವೇದಿಕೆಯಾಗಲಿದೆ. 2022-23ರ ಹಣಕಾಸು ವರ್ಷದಲ್ಲಿ ಕರ್ನಾಟಕವು ಜಿಎಸ್‌ಡಿಪಿ ಬೆಳವಣಿಗೆ ದರ ಶೇ.14.2ರಷ್ಟಿದೆ. ಕರ್ನಾಟಕ ರಾಜ್ಯವು ದೇಶದ ನಾಲ್ಕನೇ ಅತಿದೊಡ್ಡ ರಾಜ್ಯವಾಗಿದೆ ಮತ್ತು ಭಾರತದ ಜಿಡಿಪಿಗೆ ಸುಮಾರು 8.2% ಕೊಡುಗೆ ನೀಡಿದೆ. ಬೆಂಗಳೂರು ನಗರ ಉದ್ಯಮಿಗಳು ಹಾಗೂ ವ್ಯವಹಾರಗಳಿಗೆ ಕೇಂದ್ರ ಸ್ಥಾನವಾಗುತ್ತಿದೆ. ಅನೇಕ ಸ್ಟಾರ್ಟ್‌ಅಪ್, ಐಟಿ, ಎವಿಜಿಸಿ, ಬಯೋಟೆಕ್ನಾಲಜಿ ಮತ್ತು ಇಎಸ್‌ಡಿಎಂ ಕ್ಷೇತ್ರಗಳ ನಿರ್ದಿಷ್ಟ ನೀತಿಗಳನ್ನು ಹೊಂದಿರುವ ಮೊದಲ ರಾಜ್ಯ ಕರ್ನಾಟಕವಾಗಿದೆ ಎಂದರು.

ಮಾಜಿ ಸಚಿವ ಎಂ ಪಿ. ಪ್ರಕಾಶ್ ಅವರ 84 ನೇ ಜನ್ಮ ದಿನಾಚರಣೆಯನ್ನು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಬೆಂಗಳೂರು ನಗರ ಘಟಕದ ಆಶ್ರಯದಲ್ಲಿ ಆಚರಿಸಲಾಯಿತು. ಪರಿಷತ್ತಿನ ಅಧ್ಯಕ್ಷ ಡಾ. ಸಿ. ಸೋಮಶೇಖರ, ನಾಟಕ ಅಕಾಡೆಮಿ ಅಧ್ಯಕ್ಷ ಕೆ ವಿ. ನಾಗರಾಜಮೂರ್ತಿ ಹಾಗೂ ಅಂಕಣಕಾರ ನಾಗರಾಜ್ ಭಾಗವಹಿಸಿದ್ದರು.

ಕರ್ನಾಟಕದ ಜಪಾನಿ ಉದ್ಯಮ ಸಂಸ್ಥೆಗಳ ಜತೆ ಸಂವಾದ

ಜಪಾನಿ ಉದ್ಯಮಿಗಳೇ ಕರ್ನಾಟಕದ ರಾಯಭಾರಿಗಳಾಗಿ

ಬೆಂಗಳೂರು: ಜಪಾನ್‌ನಿಂದ ರಾಜ್ಯಕ್ಕೆ ಹೆಚ್ಚಿನ ಹೂಡಿಕೆ ತರಲು ಪೂರಕವಾಗಿ ಜಪಾನ್ ದೇಶದ ಕಂಪನಿಗಳೇ ಕರ್ನಾಟಕದ ರಾಯಭಾರಿಗಳಾಗಿ ಕಾರ್ಯನಿರ್ವಹಿಸ ಬೇಕು ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಕರೆ ನೀಡಿದರು.

ಜಪಾನ್ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ (ಜೆಸಿಸಿಐ)ನಲ್ಲಿ ಏರ್ಪಡಿಸಿದ್ದ ರಾಜ್ಯದಲ್ಲಿ ನೆಲೆಯೂರಿರುವ ಜಪಾನ್ ಮೂಲದ ಉದ್ಯಮ ಸಂಸ್ಥೆಗಳ ಜತೆಗಿನ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕರ್ನಾಟಕ ಹೇಗೆ ಹೂಡಿಕೆಸ್ನೇಹಿ, ಇಲ್ಲಿ ಲಭ್ಯವಿರುವ ಮಾನವ ಸಂಪನ್ಮೂಲ, ಕಾನೂನು ಸುವ್ಯವಸ್ಥೆ, ಹವಾಮಾನ ಇತ್ಯಾದಿ ವಿಷಯಗಳ ಬಗ್ಗೆ ತಮ್ಮ ದೇಶದ ಇತರ ಕಂಪನಿಗಳಿಗೂ ತಿಳಿಸುವಂತೆ ಮನವಿ ಮಾಡಿದರು.

ಜಪಾನ್ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ (ಜೆಸಿಸಿಐ)ನಲ್ಲಿ ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಸಚಿವ ಎಂ.ಬಿ.ಪಾಟೀಲ ಮಾತನಾಡಿದರು. ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ, ಬೆಂಗಳೂರಿನಲ್ಲಿನ ಜಪಾನ್ ಕಾನ್ಸುಲೇಟ್ ಜನರಲ್ ಟ್ಸುಟೊಮು ನಕಾನೆ, ಉಪಕಾನ್ಸುಲೇಟ್ ಜನರಲ್ ಹೊಕುಟೊ ಕಾಯ ಇದ್ದರು.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದ್ದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ .

ಎಸ್‌ಎಆರ್‌ಎಫ್‌ಎಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌ಗಾಗಿ
ಅಧಿಕೃತ ಅಧಿಕಾರಿ

ಸ್ಥಳ : ಬಾಗಲೂರು/ಮುಂಬೈ

ಅನುಬಂಧ IV-ಎ

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟದ ಸೂಚನೆ

ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 8(6) ಮತ್ತು ನಿಯಮ 9(1)ರ ನಿಬಂಧನೆಗೊಂದಿಗೆ ಓದಲಾಗುವ ಸೆಕ್ಯುರೈಟೇಶನ್ ಆ್ಯಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಆ್ಯಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯ್ದೆ, 2002ರಡಿಯಲ್ಲಿ ಸ್ಥಿರಾಸ್ತಿಗಳ ಮಾರಾಟದ ಸಲುವಾಗಿ ಇ-ಹರಾಜು ಮಾರಾಟ ಸೂಚನೆ.

ಈ ಮೂಲಕ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರು (ಗಳು) ಮತ್ತು ಗ್ಯಾರಂಟರ (ಗಳು) ರಿಗೆ ಸೂಚನೆ ನೀಡುವುದೇನೆಂದರೆ, **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) (CIN:L65922DL2005PLC136029)** (**''ಸೆಕ್ಯೂರ್ಡ್ ಕ್ರೆಡಿಟರ್''**) ಇವರಿಗೆ ಮಾರ್ಟ್‌ಗೇಜ್ ಮಾಡಲಾದ ಈ ಕೆಳಗೆ ವಿವರಿಸಲಾದ ಸ್ಥಿರಾಸ್ತಿ(ಗಳು)ಯ **ರಚನಾತ್ಮಕ ಸ್ವಾಧೀತೆಯನ್ನು** ಸೆಕ್ಯೂರ್ಡ್ ಕ್ರೆಡಿಟರರ ಅಧಿಕೃತ ಅಧಿಕಾರಿಯವರು ಪಡೆದುಕೊಂಡಿದ್ದು, ಸೆಕ್ಯೂರ್ಡ್ ಕ್ರೆಡಿಟರರಿಗೆ **ಶ್ರೀಲೇಖ ರೆಡ್ಡಿ ಮತ್ತು ಪಿ.ವೆಂಕಟ್ ರೆಡ್ಡಿ** ಇವರಿಂದ **ಸಾಲ ಖಾತೆ ನಂ. HHLMAL00438297** ಇದರಲ್ಲಿನ ಅಸಲು, ಹಿಂದಿನ ಬಾಕಿ (ಸಂಚಯಿತ ವಿಳಂಬ ಶುಲ್ಕವನ್ನೊಳಗೊಂಡು) ಮತ್ತು **09.07.2024**ರ ತನಕದ ಬಡ್ಡಿ **ರೂ. 1,24,33,716/- (ರೂಪಾಯಿ ಒಂದು ಕೋಟಿ ಇಪ್ಪತ್ತ ನಾಲ್ಕು ಲಕ್ಷ ಮೂವತ್ತ ಮೂರು ಸಾವಿರದ ಏಳು ನೂರ ಹದಿನಾರು ಮಾತ್ರ)** ಸಾಲ ಒಪ್ಪಂದ ಮತ್ತು ಇತರ ಸಂಬಂಧಿತ ದಸ್ತಾವೇಜಿ(ಗಳು)ನಂತೆ ಕಾನೂನು ಸಂಬಂಧಿತ ವೆಚ್ಚಗಳು ಮತ್ತು ಸೆಕ್ಯೂರ್ಡ್ ಕ್ರೆಡಿಟರರಿಗೆ ಬರ ಬೇಕಾದ ಇತರ ಶುಲ್ಕಗಳೊಂದಿಗೆ **10.07.2024**ರಿಂದ ಭವಿಷ್ಯದ ಬಡ್ಡಿ ಯ ವಸೂಲಿಗಾಗಿ **''ಎಲ್ಲಿದೆಯೊ ಹಾಗೆ''**, **''ಏನಿದೆಯೊ ಹಾಗೆ''**, ಮತ್ತು **''ಯಾವುದೇ ರಿಕೊರ್ಸ್ ಇಲ್ಲದ''** ಆಧಾರದಲ್ಲಿ ತಾರೀಖು **31.07.2024**ರಂದು **ಸಂಜೆ 04.00 ರಿಂದ ಸಂಜೆ 05.00 ರವರೆಗೆರ** ತನಕ ಮಾರಾಟ ಮಾಡಲಿದ್ದಾರೆ.

ಸ್ಥಿರಾಸ್ತಿ(ಗಳ)ಯ ರಿಸರ್ವ್ ಬೆಲೆ **ರೂ. 60,00,000/- (ರೂಪಾಯಿ ಅರವತ್ತು ಲಕ್ಷ ಮಾತ್ರ)** ಆಗಿದೆ ಮತ್ತು ಅರ್ನೆಸ್ಟ್ ಮನಿ ಡಿಪಾಸಿಟ್ (**''ಇಎಮ್‌ಡಿ''**) **ರೂ. 6,00,000/- (ರೂಪಾಯಿ ಆರು ಲಕ್ಷ ಮಾತ್ರ)** ಅಂದರೆ, ರಿಸರ್ವ್ ಬೆಲೆಯ 10%ಕ್ಕೆ ಸಮನಾಗಿದೆ.

ಸ್ಥಿರಾಸ್ತಿ(ಗಳ) ವಿವರಣೆ

ಸ್ಥಿರ ಆಸ್ತಿ ಹೊಂದಿರುವ ರೆಸಿಡೆನ್ಷಿಯಲ್ ವಿಲ್ಲಾ ಪ್ಲಾಟ್/ಸೈಟ್ ಸಂಖ್ಯೆ ಡಿ-78 **ಗ್ರಾಮ ಪಂಚಾಯತ ಮೌಲ್ಯಮಾಪನ ಸಂಖ್ಯೆ** 75/78 **ಲೇಔಟ್‌ನಲ್ಲಿ ಸರ್ವೆ ನಂ.** 30, 31, 33 **ಮತ್ತು** 34 **ಆಫ್ ಸ್ಮೈಲಿ ಆನಂದವನ ಹಂತ-I ಬಿಸುವನಹಳ್ಳಿ ಗ್ರಾಮ ಕಸಬಾ ಹೋಬಳಿ ದೊಡ್ಡಬಳ್ಳಾಪುರ ತಾಲೂಕು ಬೆಂಗಳೂರು ಉತ್ತರ ತಾಲೂಕು ಬೆಂಗಳೂರು**-560064 **ಕರ್ನಾಟಕ ಪೂರ್ವದಿಂದ ಪಶ್ಚಿಮಕ್ಕೆ:** 18.28 **ಮೀಟರ್ಸ್ ಮತ್ತು ಉತ್ತರದಿಂದ ದಕ್ಷಿಣಕ್ಕೆ:** 15.25 **ಮೀಟರ್ಸ್ ಅಳತೆ ಹೊಂದಿದ್ದು ಮತ್ತು ಸಂಪೂರ್ಣವಾಗಿ ಸುಮಾರು** 278.40 **ಚದರ ಮೀಟರ್ಸ್ ಅಳತೆ ಹೊಂದಿದ್ದು ಅಥವಾ** 3000 **ಚದರ ಅಡಿ ಹಾಗೂ ಆ ಭೂಮಿಯ ಎಲ್ಲಾ ಭಾಗಗಳು ಮತ್ತು ಇದಕ್ಕೆ ಚಕ್ಕುಬಂದಿ ಈ ಕೆಳಗಿನಂತಿದೆ:**

ಪೂರ್ವದಿಂದ : **ವಿಲ್ಲಾ ಪ್ಲಾಟ್ ಸಂಖ್ಯೆ** 61 — **ಉತ್ತರದಿಂದ** : **ವಿಲ್ಲಾ ಪ್ಲಾಟ್ ಸಂಖ್ಯೆ** 79
ಪಶ್ಚಿಮದಿಂದ : 12.19 **ಮೀಟರ್ಸ್ ವಿಶಾಲ ರಸ್ತೆ** — **ದಕ್ಷಿಣದಿಂದ** : **ವಿಲ್ಲಾ ಪ್ಲಾಟ್ ಸಂಖ್ಯೆ** 77

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಸುರಕ್ಷಿತ ಸಾಲಗಾರರ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ ಅನ್ನು ಉಲ್ಲೇಖಿಸಿ ಅಂದರೆ www.sammaancapital.com; ಸಂಪರ್ಕ ಸಂಖ್ಯೆ: 0124-6910910, +91 7065451024; ಇ-ಮೇಲ್ ಐಡಿ : auctionhelpline@sammaancapital.com. ಬಿಡ್ಡಿಂಗ್‌ಗಾಗಿ, www.auctionfocus.in ಗೆ ಲಾಗಿನ್ ಮಾಡಿ.

ಸಹಿ
ಅಧಿಕಾರಯುಕ್ತ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್.)

ದಿನಾಂಕ : 09.07.2024
ಸ್ಥಳ : ಬೆಂಗಳೂರು

ಅನುಬಂಧ IV-ಎ

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟದ ಸೂಚನೆ

ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 8(6) ಮತ್ತು ನಿಯಮ 9(1)ರ ನಿಬಂಧನೆಗೊಂದಿಗೆ ಓದಲಾಗುವ ಸೆಕ್ಯುರೈಟೇಶನ್ ಆ್ಯಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಆ್ಯಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯ್ದೆ, 2002ರಡಿಯಲ್ಲಿ ಸ್ಥಿರಾಸ್ತಿಗಳ ಮಾರಾಟದ ಸಲುವಾಗಿ ಇ-ಹರಾಜು ಮಾರಾಟ ಸೂಚನೆ.

ಈ ಮೂಲಕ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರು (ಗಳು) ಮತ್ತು ಗ್ಯಾರಂಟರ (ಗಳು) ರಿಗೆ ಸೂಚನೆ ನೀಡುವುದೇನೆಂದರೆ, **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) (CIN : L65922DL2005PLC136029)** (**''ಸೆಕ್ಯೂರ್ಡ್ ಕ್ರೆಡಿಟರ್''**) ಇವರಿಗೆ ಮಾರ್ಟ್‌ಗೇಜ್ ಮಾಡಲಾದ ಈ ಕೆಳಗೆ ವಿವರಿಸಲಾದ ಸ್ಥಿರಾಸ್ತಿ(ಗಳು)ಯ **ಭೌತಿಕ ಸ್ವಾಧೀತೆಯನ್ನು** ಸೆಕ್ಯೂರ್ಡ್ ಕ್ರೆಡಿಟರರ ಅಧಿಕೃತ ಅಧಿಕಾರಿಯವರು ಪಡೆದುಕೊಂಡಿದ್ದು, ಸೆಕ್ಯೂರ್ಡ್ ಕ್ರೆಡಿಟರರಿಗೆ **ಅಮಿತ್ ವಾಲಿಯಾ, ರಾಧಿಕಾ ವಾಲಿಯಾ ಮತ್ತು ವಿಜಯ್ ಪ್ರತಾಪ್ ಸಿಂಗ್ (ಗ್ಯಾರೆಂಟರ್)** ಇವರಿಂದ **ಸಾಲ ಖಾತೆ ನಂ. HHLBAN00503199** ಇದರಲ್ಲಿನ ಅಸಲು, ಹಿಂದಿನ ಬಾಕಿ (ಸಂಚಯಿತ ವಿಳಂಬ ಶುಲ್ಕವನ್ನೊಳಗೊಂಡು) ಮತ್ತು **08.07.2024**ರ ತನಕದ ಬಡ್ಡಿ **ರೂ. 33,60,276/- (ರೂಪಾಯಿ ಮೂವತ್ತ ಮೂರು ಲಕ್ಷ ಅರವತ್ತು ಸಾವಿರದ ಇನ್ನೂರ ಎಪ್ಪತ್ತ ಆರು ಮಾತ್ರ)** ಸಾಲ ಒಪ್ಪಂದ ಮತ್ತು ಇತರ ಸಂಬಂಧಿತ ದಸ್ತಾವೇಜಿ(ಗಳು)ನಂತೆ ಕಾನೂನು ಸಂಬಂಧಿತ ವೆಚ್ಚಗಳು ಮತ್ತು ಸೆಕ್ಯೂರ್ಡ್ ಕ್ರೆಡಿಟರರಿಗೆ ಬರ ಬೇಕಾದ ಇತರ ಶುಲ್ಕಗಳೊಂದಿಗೆ **09.07.2024**ರಿಂದ ಭವಿಷ್ಯದ ಬಡ್ಡಿ ಯ ವಸೂಲಿಗಾಗಿ **''ಎಲ್ಲಿದೆಯೊ ಹಾಗೆ''**, **''ಏನಿದೆಯೊ ಹಾಗೆ''**, ಮತ್ತು **''ಯಾವುದೇ ರಿಕೊರ್ಸ್ ಇಲ್ಲದ''** ಆಧಾರದಲ್ಲಿ ತಾರೀಖು **31.07.2024**ರಂದು **ಸಂಜೆ 04.00 ರಿಂದ ಸಂಜೆ 05.00 ರವರೆಗೆರ** ತನಕ ಮಾರಾಟ ಮಾಡಲಿದ್ದಾರೆ.

ಸ್ಥಿರಾಸ್ತಿ(ಗಳ)ಯ ರಿಸರ್ವ್ ಬೆಲೆ **ರೂ. 27,00,000/- (ರೂಪಾಯಿ ಇಪ್ಪತ್ತ ಏಳು ಲಕ್ಷ ಮಾತ್ರ)** ಆಗಿದೆ ಮತ್ತು ಅರ್ನೆಸ್ಟ್ ಮನಿ ಡಿಪಾಸಿಟ್ (**''ಇಎಮ್‌ಡಿ''**) **ರೂ. 2,70,000/- (ರೂಪಾಯಿ ಎರಡು ಲಕ್ಷ ಎಪ್ಪತ್ತು ಸಾವಿರ ಮಾತ್ರ)** ಅಂದರೆ, ರಿಸರ್ವ್ ಬೆಲೆಯ 10%ಕ್ಕೆ ಸಮನಾಗಿದೆ.

ಸ್ಥಿರಾಸ್ತಿ(ಗಳ) ವಿವರಣೆ

ರೆಸಿಡೆನ್ಸಿಯಲ್ ಆಗಿ ಪರಿವರ್ತಿಸಿದ ಸ್ವತ್ತಿನಲ್ಲಿ ಅಪಾರ್ಟ್‌ಮೆಂಟ್ ನಂ. 918, **ವಸತಿ ಸಂಕೀರ್ಣದ** 8 **ನೇ ಮಹಡಿಯಲ್ಲಿ** 924 **ಚದರ ಅಡಿಗಳ ಸೂಪರ್ ಬಿಲ್ಟ್-ಅಪ್ ಏರಿಯಾ ಹೊಂದಿದ್ದು, ಇದನ್ನು ''ಆರ್ಯನ್ ಫೌಂಟೇನ್ ಸ್ಕ್ವೇರ್'' ಎಂದು ಕರೆಯಲಾಗುತ್ತದೆ, ಜೊತೆಗೆ** 329 **ಚದರ ಅಡಿಗಳ ಅವಿಭಜಿತ ಪಾಲು, ಹಕ್ಕು, ಶೀರ್ಷಿಕೆ ಮತ್ತು ಆಸಕ್ತಿ ಮತ್ತು ಆ ಭೂಮಿಯ ಎಲ್ಲಾ ಭಾಗಗಳು ತೆರೆದ ಕಾರ್ ಪಾರ್ಕಿಂಗ್ ಸ್ಥಳದೊಂದಿಗೆ ಅದರ ಹಳೆಯ ಸರ್ವೆ ಸಂ.** 38 **ಮತ್ತು ಹೊಸ ಸರ್ವೆ ಸಂ.** 38/1 **ಅಳತೆ** 2 **ಎಕರೆ ಮತ್ತು ಜಮೀನು ಹೊಂದಿರುವ ಹಳೆಯ ಸರ್ವೆ ಸಂ.** 39 **ಮತ್ತು ಹೊಸ ಸರ್ವೆ ಸಂ.** 39/408 **ಅಳತೆ** 0-15 **ಗುಂಟಾಗಳು, ಒಟ್ಟು** 2 **ಎಕರೆ** 15 **ಗುಂಟಾ ಇಂಡ್ಲಬೆಲೆ ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲೂಕು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು**- 562107, **ಕರ್ನಾಟಕದಲ್ಲಿ ಸ್ಥಿತವಾಗಿದೆ.**

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಸುರಕ್ಷಿತ ಸಾಲಗಾರರ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ ಅನ್ನು ಉಲ್ಲೇಖಿಸಿ ಅಂದರೆ www.sammaancapital.com; ಸಂಪರ್ಕ ಸಂಖ್ಯೆ: 0124-6910910, +91 7065451024; ಇ-ಮೇಲ್ ಐಡಿ : auctionhelpline@sammaancapital.com. ಬಿಡ್ಡಿಂಗ್‌ಗಾಗಿ, www.auctionfocus.in ಗೆ ಲಾಗಿನ್ ಮಾಡಿ.

ಸಹಿ
ಅಧಿಕಾರಯುಕ್ತ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್.)

ದಿನಾಂಕ : 08.07.2024
ಸ್ಥಳ : ಬೆಂಗಳೂರು

ಅನುಬಂಧ IV-ಎ

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟದ ಸೂಚನೆ

ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 8(6) ಮತ್ತು ನಿಯಮ 9(1)ರ ನಿಬಂಧನೆಗೊಂದಿಗೆ ಓದಲಾಗುವ ಸೆಕ್ಯುರೈಟೇಶನ್ ಆ್ಯಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಆ್ಯಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯ್ದೆ, 2002ರಡಿಯಲ್ಲಿ ಸ್ಥಿರಾಸ್ತಿಗಳ ಮಾರಾಟದ ಸಲುವಾಗಿ ಇ-ಹರಾಜು ಮಾರಾಟ ಸೂಚನೆ.

ಈ ಮೂಲಕ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರು (ಗಳು) ಮತ್ತು ಗ್ಯಾರಂಟರ (ಗಳು) ರಿಗೆ ಸೂಚನೆ ನೀಡುವುದೇನೆಂದರೆ, **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) (CIN : L65922DL2005PLC136029)** (**''ಸೆಕ್ಯೂರ್ಡ್ ಕ್ರೆಡಿಟರ್''**) ಇವರಿಗೆ ಮಾರ್ಟ್‌ಗೇಜ್ ಮಾಡಲಾದ / ಚಾರ್ಜ್ ಮಾಡಲಾದ ಈ ಕೆಳಗೆ ವಿವರಿಸಲಾದ ಸ್ಥಿರಾಸ್ತಿ(ಗಳು)ಯ **ಭೌತಿಕ ಸ್ವಾಧೀತೆಯನ್ನು** ಸೆಕ್ಯೂರ್ಡ್ ಕ್ರೆಡಿಟರರ ಅಧಿಕೃತ ಅಧಿಕಾರಿಯವರು ಪಡೆದುಕೊಂಡಿದ್ದು, ಸೆಕ್ಯೂರ್ಡ್ ಕ್ರೆಡಿಟರರಿಗೆ **ಅರುಣ ಕುಮಾರ್ ತವ್ವ ಮತ್ತು ಕೀರ್ತಿ ಪುಸರಾಳ** ಇವರಿಂದ **ಸಾಲ ಖಾತೆ ನಂ. HHLDUB00320977** ಇದರಲ್ಲಿನ ಅಸಲು, ಹಿಂದಿನ ಬಾಕಿ (ಸಂಚಯಿತ ವಿಳಂಬ ಶುಲ್ಕವನ್ನೊಳಗೊಂಡು) ಮತ್ತು **05.07.2024**ರ ತನಕದ ಬಡ್ಡಿ **ರೂ. 21,64,170/- (ರೂಪಾಯಿ ಇಪ್ಪತ್ತ ಒಂದು ಲಕ್ಷ ಅರವತ್ತ ನಾಲ್ಕು ಸಾವಿರದ ನೂರ ಎಪ್ಪತ್ತು ಮಾತ್ರ)** ಸಾಲ ಒಪ್ಪಂದ ಮತ್ತು ಇತರ ಸಂಬಂಧಿತ ದಸ್ತಾವೇಜಿ(ಗಳು)ನಂತೆ ಕಾನೂನು ಸಂಬಂಧಿತ ವೆಚ್ಚಗಳು ಮತ್ತು ಸೆಕ್ಯೂರ್ಡ್ ಕ್ರೆಡಿಟರರಿಗೆ ಬರ ಬೇಕಾದ ಇತರ ಶುಲ್ಕಗಳೊಂದಿಗೆ **06.07.2024**ರಿಂದ ಭವಿಷ್ಯದ ಬಡ್ಡಿ ಯ ವಸೂಲಿಗಾಗಿ **''ಎಲ್ಲಿದೆಯೊ ಹಾಗೆ''**, **''ಏನಿದೆಯೊ ಹಾಗೆ''**, ಮತ್ತು **''ಯಾವುದೇ ರಿಕೊರ್ಸ್ ಇಲ್ಲದ''** ಆಧಾರದಲ್ಲಿ ತಾರೀಖು **31.07.2024**ರಂದು **ಸಂಜೆ 04.00 ರಿಂದ ಸಂಜೆ 05.00 ರವರೆಗೆರ** ತನಕ ಮಾರಾಟ ಮಾಡಲಿದ್ದಾರೆ.

ಸ್ಥಿರಾಸ್ತಿ(ಗಳ)ಯ ರಿಸರ್ವ್ ಬೆಲೆ **ರೂ. 8,50,000/- (ರೂಪಾಯಿ ಎಂಟು ಲಕ್ಷ ಐವತ್ತು ಸಾವಿರ ಮಾತ್ರ)** ಆಗಿದೆ ಮತ್ತು ಅರ್ನೆಸ್ಟ್ ಮನಿ ಡಿಪಾಸಿಟ್ (**''ಇಎಮ್‌ಡಿ''**) **ರೂ. 85,000/- (ರೂಪಾಯಿ ಎಂಬತ್ತ ಐದು ಸಾವಿರ ಮಾತ್ರ)** ಅಂದರೆ, ರಿಸರ್ವ್ ಬೆಲೆಯ 10%ಕ್ಕೆ ಸಮನಾಗಿದೆ.

ಸ್ಥಿರಾಸ್ತಿ(ಗಳ) ವಿವರಣೆ

ಫ್ಲಾಟ್ ನಂ. ಬಿ-403, 31.25 **ಚದರ ಮೀಟರ್ ಅಳತೆಯ ''ಅರ್ಥಾ ಮೈಡಾಸ್ @ ಎನ್‌ಎಸ್‌ಸಿ''ಎಂದು ಕರೆಯಲ್ಪಡುವ ಯೋಜನೆಯಲ್ಲಿ 'ಬಿ' ಬ್ಲಾಕ್** 3 **ನೇ ಮಹಡಿ. ಪ್ಲಾಟ್ ನಂ.** 1 **ಮತ್ತು ಪ್ಲಾಟ್ ಸಂಖ್ಯೆ.** 2, **ಮೈಡಾಸ್ ಅಪಾರ್ಟ್ಮೆಂಟ್, ಎಸ್ವೈ. ಸಂ.** 31/5 31/6, **ಬಾಗಲೂರು ಗ್ರಾಮ, ಸೂಲಿಬೆಲೆ ಹೋಬಳಿ, ಹೊಸಕೋಟೆ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು** 562114, **ಕರ್ನಾಟಕ.**

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಸುರಕ್ಷಿತ ಸಾಲಗಾರರ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ ಅನ್ನು ಉಲ್ಲೇಖಿಸಿ ಅಂದರೆ www.sammaancapital.com; ಸಂಪರ್ಕ ಸಂಖ್ಯೆ: 0124-6910910, +91 7065451024; ಇ-ಮೇಲ್ ಐಡಿ : auctionhelpline@sammaancapital.com. ಬಿಡ್ಡಿಂಗ್‌ಗಾಗಿ, www.auctionfocus.in ಗೆ ಲಾಗಿನ್ ಮಾಡಿ.

ಸಹಿ
ಅಧಿಕಾರಯುಕ್ತ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್.)

ದಿನಾಂಕ : 08.07.2024
ಸ್ಥಳ : ಬೆಂಗಳೂರು

ಅನುಬಂಧ IV-ಎ

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟದ ಸೂಚನೆ

ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 8(6) ಮತ್ತು ನಿಯಮ 9(1)ರ ನಿಬಂಧನೆಗೊಂದಿಗೆ ಓದಲಾಗುವ ಸೆಕ್ಯುರೈಟೇಶನ್ ಆ್ಯಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಆ್ಯಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯ್ದೆ, 2002ರಡಿಯಲ್ಲಿ ಸ್ಥಿರಾಸ್ತಿಗಳ ಮಾರಾಟದ ಸಲುವಾಗಿ ಇ-ಹರಾಜು ಮಾರಾಟ ಸೂಚನೆ.

ಈ ಮೂಲಕ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರು (ಗಳು) ಮತ್ತು ಗ್ಯಾರಂಟರ (ಗಳು) ರಿಗೆ ಸೂಚನೆ ನೀಡುವುದೇನೆಂದರೆ, **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) (CIN:L65922DL2005PLC136029)** (**''ಸೆಕ್ಯೂರ್ಡ್ ಕ್ರೆಡಿಟರ್''**)ಇವರಿಗೆ ಮಾರ್ಟ್‌ಗೇಜ್ ಮಾಡಲಾದ ಈ ಕೆಳಗೆ ವಿವರಿಸಲಾದ ಸ್ಥಿರಾಸ್ತಿ(ಗಳು)ಯ **ಭೌತಿಕ ಸ್ವಾಧೀತೆಯನ್ನು** ಸೆಕ್ಯೂರ್ಡ್ ಕ್ರೆಡಿಟರರ ಅಧಿಕೃತ ಅಧಿಕಾರಿಯವರು ಪಡೆದುಕೊಂಡಿದ್ದು, ಸೆಕ್ಯೂರ್ಡ್ ಕ್ರೆಡಿಟರರಿಗೆ **ಶಣ್ಮುಗ ಸುಂದರಮ್ ಸುಕುಮಾರನ್, ಪರಿಮಳ ಸುಕುಮಾರನ್** ಮತ್ತು **ಕ್ಲಾಸಿಕ್ ಇಂಟೀರಿಯರ್ ಇನ್ವೆನ್ಸ್ ಪ್ರೈ.ಲಿ. (ನಿರ್ದೇಶಕರ ಮೂಲಕ)** ಇವರಿಂದ **ಸಾಲ ಖಾತೆ ನಂ. HLAPBGM00265474** ಇದರಲ್ಲಿನ ಅಸಲು, ಹಿಂದಿನ ಬಾಕಿ (ಸಂಚಯಿತ ವಿಳಂಬ ಶುಲ್ಕವನ್ನೊಳಗೊಂಡು) ಮತ್ತು **08.07.2024**ರ ತನಕದ ಬಡ್ಡಿ **ರೂ. 2,50,69,833/- (ರೂಪಾಯಿ ಎರಡು ಕೋಟಿ ಐವತ್ತು ಲಕ್ಷ ಅರವತ್ತ ಒಂಬತ್ತು ಸಾವಿರದ ಎಂಟು ನೂರ ಮೂವತ್ತ ಮೂರು ಮಾತ್ರ)** ಸಾಲ ಒಪ್ಪಂದ ಮತ್ತು ಇತರ ಸಂಬಂಧಿತ ದಸ್ತಾವೇಜಿ(ಗಳು)ನಂತೆ ಕಾನೂನು ಸಂಬಂಧಿತ ವೆಚ್ಚಗಳು ಮತ್ತು ಸೆಕ್ಯೂರ್ಡ್ ಕ್ರೆಡಿಟರರಿಗೆ ಬರ ಬೇಕಾದ ಇತರ ಶುಲ್ಕಗಳೊಂದಿಗೆ **09.07.2024**ರಿಂದ ಭವಿಷ್ಯದ ಬಡ್ಡಿ ಯ ವಸೂಲಿಗಾಗಿ **''ಎಲ್ಲಿದೆಯೊ ಹಾಗೆ''**, **''ಏನಿದೆಯೊ ಹಾಗೆ''**, ಮತ್ತು **''ಯಾವುದೇ ರಿಕೊರ್ಸ್ ಇಲ್ಲದ''** ಆಧಾರದಲ್ಲಿ ತಾರೀಖು **31.07.2024**ರಂದು **ಸಂಜೆ 04.00 ರಿಂದ ಸಂಜೆ 05.00 ರವರೆಗೆರ** ತನಕ ಮಾರಾಟ ಮಾಡಲಿದ್ದಾರೆ.

ಸ್ಥಿರಾಸ್ತಿ(ಗಳ)ಯ ರಿಸರ್ವ್ ಬೆಲೆ **ರೂ. 1,00,00,000/- (ರೂಪಾಯಿ ಒಂದು ಕೋಟಿ ಮಾತ್ರ)** ಆಗಿದೆ ಮತ್ತು ಅರ್ನೆಸ್ಟ್ ಮನಿ ಡಿಪಾಸಿಟ್ (**''ಇಎಮ್‌ಡಿ''**) **ರೂ. 10,00,000/- (ರೂಪಾಯಿ ಹತ್ತು ಲಕ್ಷ ಮಾತ್ರ)** ಅಂದರೆ, ರಿಸರ್ವ್ ಬೆಲೆಯ 10%ಕ್ಕೆ ಸಮನಾಗಿದೆ.

ಸ್ಥಿರಾಸ್ತಿ(ಗಳ) ವಿವರಣೆ

ಶ್ರೀ ವಿನಾಯಕ ಹೌಸ್‌ಬಿಲ್ಡಿಂಗ್ ಕೊ-ಆಪರೇಟಿವ್ ಸೊಸೈಟಿ ಲಿ.,ಬೆಂಗಳೂರು-560072,**ಕರ್ನಾಟಕ ಇವರಿಂದ ನಾಗರಬಾವಿ ಗ್ರಾಮ, ಯಶವಂತಪುರ ಹೋಬಳಿಯ ಸರ್ವೆ ನಂ.** 17,**ಇತ್ಯಾದಿಯಿಂದ ರಚಿಸಲಾದ ವಾಸ್ತವ್ಯದ ಸೈಟ್‌ನಂ.** 325**ಬಿಯನ್ನು ಹೊಂದಿರುವ** 4**ನೇ ಹಂತ, ವಿನಾಯಕ ಲೇಔಟ್‌ಜಮೀನಿನಲ್ಲಿ ''ಬಾಲಾಜಿ ಹೈಟ್ಸ್''ನ** 2**ನೇ ಮಹಡಿಯಲ್ಲಿ, ''ಬ್ಲಾಕ್ ಬಿ''ಯಲ್ಲಿ,** 2800**ಚದರ ಅಡಿ ಸೂಪರ್ ಬಿಲ್ಟ್ ಅಪ್ ಏರಿಯಾದ ನಂ. ಎಸ್**-2**ನ್ನು ಹೊಂದಿರುವ ಡುಪ್ಲೆಕ್ಸ್ ವಾಸ್ತವ್ಯದ ಫ್ಲ್ಯಾಟ್‌ನ ಆ ಎಲ್ಲಾ ತುಂಡು ಮತ್ತು ಪಾರ್ಸೆಲ್, ಕವರ್ ಮಾಡಲಾದ ಎರಡು ಕಾರ್ ಪಾರ್ಕಿಂಗ್‌ಜಾಗದೊಂದಿಗೆ, ಜಮೀನಿನಲ್ಲಿ** 600 **ಚದರ ಮೀಟರ್ ಅವಿಭಜಿತ ಪಾಲಿನ ಜೊತೆಗೆ.**

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಸುರಕ್ಷಿತ ಸಾಲಗಾರರ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ ಅನ್ನು ಉಲ್ಲೇಖಿಸಿ ಅಂದರೆ www.sammaancapital.com; ಸಂಪರ್ಕ ಸಂಖ್ಯೆ: 0124-6910910, +91 7065451024; ಇ-ಮೇಲ್ ಐಡಿ : auctionhelpline@sammaancapital.com. ಬಿಡ್ಡಿಂಗ್‌ಗಾಗಿ, www.auctionfocus.in ಗೆ ಲಾಗಿನ್ ಮಾಡಿ.

ಸಹಿ
ಅಧಿಕಾರಯುಕ್ತ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್.)

ದಿನಾಂಕ : 08.07.2024
ಸ್ಥಳ : ಬೆಂಗಳೂರು

ಅವೆನ್ಯೂ ರೋಡ್
ನಿತ್ಯದ ವಿಂಡೋ ಶಾಪಿಂಗ್

13 ವಿಶ್ವವಾಣಿ
13.07.2024 ಶನಿವಾರ
vishwavani.news

ದಿನ ದರ್ಶಿಕೆ

ಆಷಾಢ ಮಾಸ, ನಕ್ಷತ್ರ ಹಸ್ತ, ಶುಕ್ಲಪಕ್ಷ, ಸಪ್ತಮಿ, ಯೋಗ ಶಿವ, ಕ್ರೋಧಿನಾಮ ಸಂವತ್ಸರ, 1945 ಶೋಭಕೃತ್, ಋತು- ಗ್ರೀಷ್ಮ, ದ್ರಿಕ್ ಆಯನ- ಉತ್ತರಾಯಣ

ಮನೆಮದ್ದು

ಲವಂಗ ಮತ್ತು ಜೇನುತುಪ್ಪದಲ್ಲಿರುವ ಔಷಧೀಯ ಗುಣಗಳು ಶೀತ ಮತ್ತು ಜ್ವರದ ಸಮಯದಲ್ಲಿ ಪರಿಹಾರ ನೀಡುತ್ತದೆ. ಲವಂಗದ ಪುಡಿಯನ್ನು ಜೇನುತುಪ್ಪದೊಂದಿಗೆ ಬೆರೆಸಿ ದಿನಕ್ಕೆ 2-3 ಬಾರಿ ಸೇವಿಸುತ್ತಾ ಬಂದರೆ ಕಟ್ಟಿದ ಮೂಗು ಕಟ್ಟುವಿಕೆ ಮತ್ತು ಗಂಟಲು ನೋವಿನಿಂದ ಪರಿಹಾರ ಸಿಗುತ್ತದೆ.

ಸೌಂದರ್ಯ ಸೂತ್ರ

ಮಾನಸಿಕ ಒತ್ತಡ, ಧೂಳು, ಮಾಲಿನ್ಯಕ್ಕೆ ತಲೆಕೂದಲು ಉದುರುವುದು ಸಾಮಾನ್ಯ. ಈ ಸಮಸ್ಯೆಗೆ ಚಕ್ಕೆ ಪುಡಿಯನ್ನು ಆಲಿವ್ ಆಯಿಲ್ ಜತೆ ಬೆರೆಸಿ, ಆ ಮಿಶ್ರಣವನ್ನು ನೆತ್ತಿಗೆ, ಕೂದಲಿಗೆ ಹಚ್ಚಿದರೆ ಕೂದಲು ಉದುರಿದ ಜಾಗದಲ್ಲಿ ಮತ್ತೆ ಕೂದಲು ಬೆಳೆಯುತ್ತದೆ.

ದಿನ ಭವಿಷ್ಯ

ಮೇಷ ಕುಟುಂಬದಲ್ಲಿ ನಡೆದ ಚರ್ಚೆಯ ಬಗ್ಗೆ ನಿಮ್ಮ ಮನಸ್ಸು ಚಿಂತಿತವಾಗಿರುತ್ತದೆ. ಕೆಲಸಗಳಿಗಾಗಿ ಸಹಾಯ ನೀವು ತೆಗೆದುಕೊಳ್ಳಬೇಕಾಗ ಬಹುದು.

ವೃಷಭ ವ್ಯಾಪಾರಸ್ಥರಿಗೆ ವ್ಯವಹಾರ ಸ್ವಲ್ಪ ಕುಂಠಿತವಾಗಬಹುದು. ಆದರೆ ಸಣ್ಣ ಉದ್ಯಮಿಗಳು ತಮ್ಮ ಇಚ್ಛೆಯಂತೆ ಲಾಭವನ್ನು ಗಳಿಸುತ್ತಾರೆ, ಆರ್ಥಿಕ ಸ್ಥಿತಿ ಬಲಪಡಿಸುತ್ತದೆ.

ಮಿಥುನ ಇಂದು ಸ್ವಲ್ಪ ಒತ್ತಡ ಉಂಟಾಗಬಹುದು. ಸುತ್ತಮುತ್ತಲಿನ ಜನರನ್ನು ಹೆಚ್ಚು ನಂಬಬೇಡಿ, ಅವರೊಂದಿಗೆ ಜಾಗರೂಕರಾಗಿರಬೇಕು.

ಕಟಕ ಕೆಲಸದ ಸ್ಥಳದಲ್ಲಿ ಯಾರೊಂದಿಗೂ ವಾದ ಮಾಡದಿರುವುದು ಒಳ್ಳೆಯದು. ನೀವು ದಾನ ಕಾರ್ಯಗಳಲ್ಲಿ ಆಸಕ್ತಿ ತೋರಿಸುತ್ತೀರಿ.

ಸಿಂಹ ವಿದ್ಯಾರ್ಥಿಗಳು ಕ್ರೀಡಾ ಸ್ಪರ್ಧೆಗಳಲ್ಲಿ ಜಯಗಳಿಸಬಹುದು. ನಿಮ್ಮ ದಿನಚರಿಯಲ್ಲಿ ಬದಲಾವಣೆಯನ್ನು ಮಾಡಿದರೆ ಸಮಸ್ಯೆ ತರಬಹುದು.

ಕನ್ಯಾ ಉದ್ಯಮಿಗಳು ತಮ್ಮ ಗಮನವನ್ನು ಒಂದೇ ಯೋಜನೆಯ ಮೇಲೆ ಕೇಂದ್ರೀಕರಿಸಬೇಕು, ಜಾಗರೂಕರಾಗಿರಬೇಕು

ತುಲಾ ಇಂದು ಕೆಲಸದ ಸ್ಥಳದಲ್ಲಿ ಬದಲಾವಣೆಗಳನ್ನು ತರಲಿದೆ. ಇದು ನಿಮಗೆ ತುಂಬಾ ಪ್ರಯೋಜನಕಾರಿಯಾಗಿದೆ.

ವೃಶ್ಚಿಕ ಬಾಕಿಯಿರುವ ಕೆಲಸಗ ಳನ್ನು ಪೂರ್ಣಗೊಳಿಸುವುದರಿಂದ ಮನಸ್ಸಿಗೆ ನೆಮ್ಮದಿ. ಕುಟುಂಬದಲ್ಲಿ ಪೂಜೆ ಯೋಜಿಸಬಹುದು.

ಧನು ಯಾವುದೋ ವಿಷಯದ ಬಗ್ಗೆ ನಕಾರಾತ್ಮಕ ಆಲೋಚನೆಗಳನ್ನು ಹೊಂದಿರಬಹುದು. ಇಂದು ನಿಮ್ಮ ಕೋಪವನ್ನು ನಿಯಂತ್ರಿಸಿ

ಮಕರ ಕುಟುಂಬದ ಹಿರಿಯರ ನಿವೃತ್ತಿಯಿಂದಾಗಿ ಬಂಧುಗಳ ಸಂಚಾರವಿರುತ್ತದೆ. ನಿಮ್ಮ ಇಷ್ಟದ ವಸ್ತು ನಿಮಗೆ ಉಡುಗೊರೆ ನೀಡಬಹುದು.

ಕುಂಭ ಯಾವುದೇ ಕಾನೂನು ಸಮಸ್ಯೆ ತ್ವರಿತವಾಗಿ ಪರಿಹರಿಸಲು ಪ್ರಯತ್ನಿಸಿ. ಇಂದು ಯಾವುದೇ ತಪ್ಪು ತಿಳುವಳಿಕೆಗೆ ಬಲಿಯಾಗಬೇಡಿ.

ಮೀನ ಇಂದು ನಿಮ್ಮ ಯಾವುದೇ ಹಳೆಯ ತಪ್ಪು ತೊಂದರೆಗೆ ಕಾರಣವಾಗಬಹುದು. ನೀವು ಕೆಲಸದ ಸ್ಥಳದಲ್ಲಿ ಯಾರೊಂದಿಗಾದರೂ ಜಾಗರೂಕರಾಗಿರಿ

● ಕೆ.ಬಿ.ಸಂತೋಷ್ ಗುರೂಜಿ

ಪ್ರಕೃತಿ ಎಂದರೆ ಅದೊಂದು ಅದ್ಭುತ, ಯಾರ ಊಹೆಗೂ ನಿಲುಕದ, ಯಾವ ತರ್ಕಕ್ಕೂ ಸಿಲುಕದ ಒಂದು ಸುಂದರ ಸೃಷ್ಟಿ. ಮರ ಗಿಡ, ಹೂವುಗಳು, ಭೂದೃಶ್ಯ, ಕೀಟಗಳು, ಸೂರ್ಯನ ಬೆಳಕು, ತಂಗಾಳಿ ನಿಸರ್ಗವನ್ನು ಮೋಡಿಗಾರ ನನ್ನಾಗಿಸುತ್ತದೆ. ಮಳೆಗಾಲದ ಒಂದು ದಿನ ಅರಳಿ ನಿಂತ ಸುಂದರ ಹೂವು ಹಾಗೂ ಹೂವಿನ ಮಕರಂದ ಹೀರುತ್ತಿರುವ ಕೀಟದ ಚಿತ್ರವನ್ನು ಛಾಯಾಗ್ರಾಹಕ ಕಾಹಿಶ್ ತಮ್ಮ ಕ್ಯಾಮರಾದಲ್ಲಿ ಹೀಗೆ ಸೆರೆಹಿಡಿದ್ದಾರೆ.

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಪ್ರ. ಅಂತರಾಷ್ಟ್ರೀಯ ಶಿಲಾ ದಿನ(ಇಂಟರ್‌ನ್ಯಾಷನಲ್ ರಾಕ್ ಡೇ) ವನ್ನು ಎಂದು ಆಚರಿಸಲಾಗುತ್ತದೆ?

- ಎ. ಜುಲೈ 13
- ಬಿ. ಜೂನ್ 18
- ಸಿ. ಆಗಸ್ಟ್ 20
- ಡಿ. ಅಕ್ಟೋಬರ್ 15

ಉತ್ತರ : ಎ. ಜುಲೈ 13

ಮಾಹಿತಿ

ಅಂತರಾಷ್ಟ್ರೀಯ ಶಿಲಾ ದಿನವನ್ನು ಶಿಲೆಗಳ ಬಗ್ಗೆ ಮತ್ತು ಮನುಕುಲಕ್ಕೆ ಅವುಗಳ ಮಹತ್ವವನ್ನು ತಿಳಿಸಲು ಪ್ರತಿ ವರ್ಷ ಜುಲೈ 13 ರಂದು ಆಚರಿಸಲಾಗುತ್ತದೆ. ನಾವು ಪ್ರಮುಖವಾಗಿ ಶಿಲೆಗಳಲ್ಲಿ ಮೂರುವಿಧಗಳನ್ನು ಕಾಣುತ್ತೇವೆ - ಅಗ್ನಿ ಶಿಲೆ,ಸಂಚಿತ ಶಿಲೆ ಮತ್ತು ರೂಪಾಂತರ ಶಿಲೆ. ಭೂಮಿಯ ಹೊರಭಾಗದ ಘನ ಪದರ, ಲಿಥೋಸ್ಫಿಯರ್. ಇತಿಹಾಸದುದ್ದಕ್ಕೂ ಮಾನವಕುಲವು ಶಿಲೆಗಳನ್ನು ಬಳಸಿದೆ. ಶಿಲಾಯುಗದಿಂದ, ಇವುಗಳನ್ನು ಉಪಕರಣಗಳಾಗಿ ಬಳಸಲಾಗುತ್ತಿತ್ತು. ಶಿಲೆಗಳಲ್ಲಿ ಕಂಡುಬರುವ ಖನಿಜಗಳು ಮತ್ತು ಲೋಹಗಳು ಮಾನವ ನಾಗರಿಕತೆ ಸಾಗಿಬಂದ ದಾರಿಯನ್ನು ತೋರಿಸುತ್ತವೆ. ಬಂಡೆಯಲ್ಲಿನ ಖನಿಜಗಳ ವಿಧಗಳು ಮತ್ತು ಸಮೃದ್ಧಿಯನ್ನು ಕಲ್ಲು ರಚನೆಯಾದ ವಿಧಾನದಿಂದ ನಿರ್ಧರಿಸಲಾಗುತ್ತದೆ. ಅನೇಕ ಶಿಲೆಗಳು ಸಿಲಿಕಾದಿಂದ (ಖಜಿಣ2) ರಚಿಸಲ್ಪಟ್ಟಿವೆ; ಸಿಲಿಕಾನ್ ಮತ್ತು ಆಮ್ಲಜನಕದ ಸಂಯುಕ್ತವು ಭೂಮಿಯ ಹೊರಪದರದ ಶೇ.74 ಭಾಗವನ್ನು ರೂಪಿಸುತ್ತದೆ. ಈ ವಸ್ತುವು ಬಂಡೆಯಲ್ಲಿನ ಇತರ ಸಂಯುಕ್ತಗಳೊಂದಿಗೆ ಹರಳುಗಳನ್ನು ರೂಪಿಸುತ್ತದೆ. ಬಂಡೆಗಳು ಮತ್ತು ಖನಿಜಗಳಲ್ಲಿನ ಸಿಲಿಕಾದ ಪ್ರಮಾಣವು ಅವುಗಳ ಹೆಸರು ಮತ್ತು ಗುಣಲಕ್ಷಣಗಳನ್ನು ನಿರ್ಧರಿಸುವಲ್ಲಿ ಪ್ರಮುಖ ಅಂಶವಾಗಿದೆ. ಶಿಲೆಗಳ ಅಧ್ಯಯನವನ್ನು ಪೆಟ್ರೋಲಜಿ ಎಂದು ಕರೆಯಲಾಗುತ್ತದೆ, ಇದು ಭೂವಿಜ್ಞಾನದ ಅಡಿಯಲ್ಲಿ ಬರುತ್ತದೆ. ಈ ವಿಷಯದ ಕುರಿತು ಹೆಚ್ಚು ಸಂಶೋಧನೆ ಮಾಡಲು ಪ್ರಯತ್ನಿಸಿದಾಗ, ಅನೇಕ ಆಸಕ್ತಿದಾಯಕ ವಿವರಗಳು ಬೆಳಕಿಗೆ ಬರುತ್ತವೆ. ಚಿಕ್ಕ ಮಕ್ಕಳು ಮತ್ತು ವಯಸ್ಕರು ಶಿಲೆಗಳು ಮತ್ತು ಅವುಗಳ ರಚನೆಗಳ ಬಗ್ಗೆ ಹೆಚ್ಚು ತಿಳಿದುಕೊಳ್ಳುವುದು ಬಹಳ ಮಹತ್ವದ್ದಾಗಿದೆ ಮತ್ತು ಅಂತರರಾಷ್ಟ್ರೀಯ ರಾಕ್ ದಿನವು ಈ ನಿಟ್ಟಿನಲ್ಲಿ ಸಹಾಯ ಮಾಡುತ್ತದೆ.

ನಮ್ಮ ಕೌಶಲ್ಯಕ್ಕೆ ತಕ್ಕ ಕೆಲಸ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಮ್ಮೆ ವಿಜಯನಗರದ ರಾಜ ಕೃಷ್ಣದೇವರಾಯನ ಆಸ್ಥಾನಕ್ಕೆ ರಾಜವರ್ಮನೆಂಬ ಚಿತ್ರ ಕಲಾಕಾರನು ಬಂದು ಮಹಾರಾಜನ ಒಂದು ಸುಂದರವಾದ ಚಿತ್ರವನ್ನು ರಚಿಸಿದನು. ಆ ಚಿತ್ರ ತುಂಬಾ ಚೆನ್ನಾಗಿ ಮೂಡಿಬಂದಿತು. ಆ ಚಿತ್ರ ನೋಡಿ ರಾಜ ಸಂತೋಷದಿಂದ, ಆ ಕಲಾವಿದನನ್ನು ತನ್ನ ಮಂತ್ರಿಯನ್ನಾಗಿ ಮಾಡಿಕೊಂಡುಬಿಟ್ಟ. ರಾಜ್ಯಾಡಳಿತದ ಬಗೆ ಸ್ವಲ್ಪವೂ ಜ್ಞಾನವಿಲ್ಲದ ಕಲಾವಿದನನ್ನು, ಮಂತ್ರಿಯನ್ನಾಗಿ ಮಾಡಿದ್ದು, ಇತರ ಮಂತ್ರಿಗಳಿಗೂ ಹಾಗೂ ಪ್ರಜೆಗಳಿಗೂ ಇಷ್ಟವಾಗಲಿಲ್ಲ. ಅವನಿಗೆ ರಾಜ್ಯಾಡಳಿತದ ಕೆಲಸದಲ್ಲಿ ಯಾವ ಆಸಕ್ತಿ, ಕೌಶಲ್ಯತೆಯೂ ಇರಲಿಲ್ಲ. ಕಂಗಾಲಾದ ಪ್ರಜೆಗಳು, ತೆನ್ನಾಲಿ ರಾಮಕೃಷ್ಣನ ಬಳಿಗೆ, ಹೋಗಿ ಇದಕ್ಕೆ ನೀವೇ ಏನಾದರೂ ಪರಿಹಾರ ಸೂಚಿಸಿ, ಈ ಕಲಾವಿದನನ್ನು ಮಂತ್ರಿ ಸ್ಥಾನದಿಂದ ಹೇಗಾದರೂ ಇಳಿಸಬೇಕೆಂದು ಕೇಳಿಕೊಂಡರು. ರಾಮಕೃಷ್ಣನು ಅವರಿಗೆಲ್ಲಾ ಸಾಂತ್ವನ ಹೇಳಿ ಕಳಿಸಿದನು.

ಸ್ವಲ್ಪ ದಿನಗಳ ನಂತರ, ತೆನ್ನಾಲಿ ರಾಮಕೃಷ್ಣನು, ರಾಜನನ್ನು ಹಾಗೂ ಅವನ ಪರಿವಾರದವರನ್ನೂ ತನ್ನ ಮನೆಗೆ ಔತಣಕ್ಕೆ ಕರೆದನು. ಜೊತೆಯಲ್ಲಿ ಚಿತ್ರ ಕಲಾವಿದ,ಹೊಸ ಮಂತ್ರಿಯನ್ನೂ ಔತಣಕ್ಕೆ ಆಹ್ವಾನಿಸಿ, ತನಗೆ ಪರಿಚಯವಿದ್ದ ಬಡಗಿಯೊಬ್ಬನ ಕೈಲಿ ಅಡಿಗೆ ಮಾಡಿಸಿದನು. ಇವನು ಹೇಳಿದ ಸಮಯಕ್ಕೆ ಸರಿಯಾಗಿ, ರಾಜ ಹಾಗೂ ಅವನ ಪರಿವಾರದವರೂ, ಕಲಾವಿದ ಮಂತ್ರಿಯೂ ಊಟಕ್ಕೆ ಬಂದರು. ಎಲ್ಲರೂ ಊಟಕ್ಕೆ ಕುಳಿತರು. ಸ್ವತಹ ರಾಮಕೃಷ್ಣನೇ ಎಲ್ಲರಿಗೂ ಊಟ ಬಡಿಸತೊಡಗಿದನು. ರಾಮಕೃಷ್ಣ ಎಲ್ಲರಿಗೂ ಸಾವಕಾಶವಾಗಿ ಊಟ ಮಾಡಿರೆಂದು ಉಪಚಾರ ಮಾಡಿದನು.

ಬಾಯಲ್ಲಿ ಇನ್ನೂ ಒಂದು ತುತ್ತು ಕೂಡಾ ಇಳಿದಿಲ್ಲ, ಅಷ್ಟರಲ್ಲಿ ಎಲ್ಲರೂ, ಬಿಕ್ಕಳಿಸುತ್ತಾ 'ನೀರು ನೀರು' ಎಂದು ಕೂಗಾಡಿದರು. ಅಡುಗೆ ಅಷ್ಟು ಖಾರವಾಗಿ, ಕೆಟ್ಟದಾಗಿತ್ತು. ರಾಜನಿಗೆ ಬಹಳವಾಗಿ ಸಿಟ್ಟು ಬಂದು, 'ರಾಮಕೃಷ್ಣ! ಇದೇನಿದು? ನೀನು ನಮ್ಮನ್ನೆಲ್ಲಾ ಅವಮಾನಿಸಲೆಂದೇ, ಊಟಕ್ಕೆ ಕರೆದಿದ್ದಾ? ನಮ್ಮನ್ನೆಲ್ಲಾ ಊಟಕ್ಕೆ ಕರೆದು, ಅಡಿಗೆ ಮಾಡಲು ಬಾರದವನ ಕೈಲಿ ಅಡಿಗೆ ಮಾಡಿಸಿ, ಬೇಕೆಂದೇ ಅವಮಾನ ಮಾಡುತ್ತಿರುವೆಯಾ? ಎಷ್ಟು ಧೈರ್ಯ ನಿನಗೆ? ಈ ಅಡಿಗೆ ಮಾಡಿದ್ದು ಯಾರು?' ಎಂದು ಕೂಗಿದ. ರಾಮಕೃಷ್ಣ ಬಡಗಿಯನ್ನು ಕರೆದು ಅವನತ್ತ ಕೈ ತೋರಿಸಿ, 'ಪ್ರಭೂ, ಇಂದಿನ ಅಡಿಗೆ ಮಾಡಿದ ವ್ಯಕ್ತಿ ಈತನೇ' ಎಂದ.

ಅವನನ್ನು ನೋಡಿ, ರಾಜನಿಗೆ ಈಗ ಸ್ವಲ್ಪ ನಗು ಬಂದಿತು. ಅವನು ನಗುತ್ತಾ 'ಅಡುಗೆ ಮಾಡಿಕೊಡಲು ನಿನಗೆ ಬೇರೆ ಯಾರೂ ಸಿಗಲಿಲ್ಲವೇ? ಇವನೊಬ್ಬ ಮರಗೆಲಸದವ. ಅವನ ವೃತ್ತಿ, ಮರಗೆಲಸ ಮಾಡುವುದು. ಅದು ಬಿಟ್ಟು, ಅವನಿಂದ ರುಚಿಯಾಗಿ ಅಡಿಗೆ ಮಾಡಲು ಸಾಧ್ಯವೇ? ನೀನು ಮಹಾ ಬುದ್ಧಿವಂತನೆಂದು ನಾನು ತಿಳಿದಿದ್ದೆ' ಎಂದು ಹೇಳಿದ.

'ಯಾಕಾಗಬಾರದು ಪ್ರಭೂ? ರಾಜ್ಯದ ಆಡಳಿತದ ಬಗ್ಗೆ ಏನೂ ಅರಿಯದ ಒಬ್ಬ ಚಿತ್ರಕಲಾವಿದ ರಾಜ್ಯಕ್ಕೆ ಮಂತ್ರಿಯಾಗಬಹುದು! ಆದರೆ ಒಬ್ಬ ಬಡಗಿ, ಏಕೆ ಅಡಿಗೆ ಮಾಡಬಾರದು?' ಎಂದು ಕೇಳಿದ ರಾಮಕೃಷ್ಣ.

ತಕ್ಷಣ ಕೃಷ್ಣದೇವರಾಯನಿಗೆ, ರಾಮಕೃಷ್ಣನ ಕುಚೋದ್ಯ ಅರ್ಥವಾಯಿತು. ಕಲಾವಿದ ಮಂತ್ರಿಯೂ ಇದನ್ನು ಅರ್ಥಮಾಡಿಕೊಂಡು, ರಾಜ ಹೇಳುವ ಮೊದಲೇ ರಾಜೀನಾಮೆ ನೀಡಿ, ತನ್ನ ಕಲೆಯ ಬಗ್ಗೆ ಗಮನಹರಿಸತೊಡಗಿದ.

ಯಾರಿಗೆ ಯಾವ ಕೆಲಸದಲ್ಲಿ ಪರಿಣತಿ ಇರುತ್ತದೆಯೋ ಅವರು ಅದನ್ನು ಮಾಡಿದರೆ ಆ ಕೆಲಸ ಸಮರ್ಪಕವಾಗಿ ಆಗುತ್ತದೆ. ಕೆಲವೊಮ್ಮೆ ನಾವೇ ಎಲ್ಲಾ ಮಾಡಲು ಹೋಗಿ ಪೇಚಿಗೆ ಸಿಲುಕಿಕೊಳ್ಳುತ್ತೇವೆ. ಅಲ್ಲಿ ಒಂದಕ್ಕೆ ಎರಡು ಖರ್ಚು, ಜೊತೆಗೆ ಕೆಲಸವೂ ಸರಿಯಾಗಿ ಆಗಿರುವುದಿಲ್ಲ. ಆದ್ದರಿಂದಲೇ ಆಯಾ ಕೆಲಸಕ್ಕೆ ಅವರವರೇ ಸರಿಯಾದವರು. ಆರೋಗ್ಯ ಸರಿಯಿಲ್ಲವೆಂದು ನಾವೇ ಸ್ವಯಂ ವೈದ್ಯ ಮಾಡಲು ಹೋಗಿ ಔಷಧಿಯನ್ನು ಮಾರುಕಟ್ಟೆಯಿಂದ ಕೊಂಡು ತಂದು ಸೇವಿಸಿದರೆ ಮುಂದೊಂದು ದಿನ ಅದಕ್ಕೆ ಬೆಲೆ ತರಬೇಕಾದೀತು.

ಟೂತ್‌ಪೇಸ್ಟ್ ನುಂಗಿ ಬಿಟ್ಟರಿ ಜೋಕೆ !

ಡೂ ನಾಟ್ ಸ್ವಾಲೋ' – ಈ ಎಚ್ಚರಿಕೆಯ ಇಂಗ್ಲಿಷ್ ಪದಪುಂಜವನ್ನು ನೀವು ಯಾವುದೇ ಟೂತ್‌ಪೇಸ್ಟ್‌ನ ಕವರ್ ರ‍್ಯಾಪರ್ ಮೇಲೆ ಖಂಡಿತ ಕಾಣುತ್ತೀರಿ. ಇದರರ್ಥ, 'ಈ ಟೂತ್‌ಪೇಸ್ಟನ್ನು ನುಂಗಬೇಡಿ' ಎಂದು ! ನೀವೇನಾದರೂ ಈ ಟೂತ್‌ಪೇಸ್ಟ್ ತಯಾರಿಕಾ ಘಟಕಗಳು ಯಾವುದೆಂದು ತಿಳಿದಿರೋ ನೀವು ಪೇಸ್ಟ್ ನುಂಗುವುದಿರಲಿ, ಅದರ ಬಳಕೆಯನ್ನೇ ನಿಲ್ಲಿಸಿಬಿಡುತ್ತೀರೇನೊ? ನಾವು ಈಗ ಬಳಸುವ ಟೂತ್‌ಪೇಸ್ಟ್ ಬಳಕೆಗೆ ಬಂದು 100 ವರ್ಷಗಳಾಗಿರಬಹುದೇನೋ? ಇದು ಜನಪ್ರಿಯವಾಗಿದ್ದು ಪ್ರಥಮ ಮಹಾಯುದ್ಧದ ನಂತರ. 'ನಿಮ್ಮ ಹೊಳೆಯುವ ಹಲ್ಲಿಗಾಗಿ' ಎಂಬ ಮರುಳು ಮಾಡುವಂಥ ಜಾಹೀರಾತಿನೊಂದಿಗೆ ಅನೇಕ ಕಂಪನಿಗಳು ಟೂತ್‌ಪೇಸ್ಟ್ ತಯಾರಿಕೆ ಶುರು ಮಾಡಿಯೇಬಿಟ್ಟವು; ಅದರಲ್ಲಿ ಯಶಸ್ಸನ್ನು ಗಿಟ್ಟಿಸಿಯೂ ಬಿಟ್ಟವು. ಟೂಥ್ ಪೇಸ್ಟ್ ಮನೆಗೆ ತಂದರೆ ಅದರಲ್ಲಿ ಬರೆದಿರುವ ತಯಾರಿಕಾ ಘಟಕಗಳು ಯಾವುವು ಎಂದು ಓದುವ ತಾಳ್ಮೆ ಖಂಡಿತ ಇರುವುದಿಲ್ಲ ಬಿಡಿ.

ಟೂತ್‌ಪೇಸ್ಟ್‌ನಲ್ಲಿ ಏನಿದೆ ?

ಬನ್ನಿ ನಾವು ಬಳಸುವ ಟೂತ್‌ಪೇಸ್ಟ್‌ನಲ್ಲಿ 10 ತರಹದ ಬಗೆಬಗೆಯ ವಸ್ತುಗಳಿವೆ. ಅವೆಂದರೆ,

1.ಫಾರ್ಮಾಲ್ಡಿಹೈಡ್; ಫಾರ್ಮಾಲ್ಡಿಹೈಡ್ ಒಂದು ಕ್ರಿಮಿನಾಶಕ. ನಿಮ್ಮ ಹಲ್ಲಿನ ಸಂದುಗೊಂದುಗಳಲ್ಲಿರುವ ಬ್ಯಾಕ್ಟಿರಿಯಾಗಳನ್ನು ಕೊಲ್ಲಲು ಇದನ್ನು ಸೇರಿಸಲಾಗಿರುತ್ತದೆ. ನೀವೇನಾದರೂ ಹೆಚ್ಚು ಪ್ರಮಾಣದಲ್ಲಿ ಟೂತ್‌ಪೇಸ್ಟ್ ನುಂಗಿದಿರೋ ಅಪಾಯ ಕಟ್ಟಿಟ್ಟ ಬುತ್ತಿ ! ಇದು ಅರಿಶಿನ ಕಾಮಾಲೆ, ಮೂತ್ರಪಿಂಡ ವೈಫಲ್ಯ, ಯಕೃತ್ತಿನ ಹಾನಿ ಮುಂತಾದ ತೊಂದರೆಗಳನ್ನು ತರಬಲ್ಲದು.

2.ಸಾಬೂನು; ನೀವು ಹಲ್ಲನ್ನು ಉಜ್ಜುವಾಗ ಹೆಚ್ಚು ಹೆಚ್ಚು ನೊರೆ ಬಂದಷ್ಟೂ ನಿಮಗೆ ಮಹದಾನಂದ ಅಲ್ಲವೇ ? ಇದಕ್ಕೆ ಕಾರಣ ಈ ಸಾಬೂನು. ಈ ನೊರೆ ಅಥವಾ ಗುಳ್ಳೆಗಳು ನಮಗೆ ತಮಾಷೆಯಾಗಿ ಕಂಡರೂ ಇದನ್ನು ನುಂಗಿದರೆ ಅನ್ನನಾಳದಲ್ಲಿ ಉರಿಯೂತ ಗ್ಯಾರಂಟಿ ! ಇದರಿಂದ ಜೀರ್ಣಾಂಗ ತೊಂದರೆಗಳು ಕಟ್ಟಿಟ್ಟ ಬುತ್ತಿ.

3.ಸಮುದ್ರ ಕಳೆ; ನಿಮ್ಮ ಟೂತ್‌ಪೇಸ್ಟ್‌ನ ಬ್ರಶ್ ಮೇಲೆ ಎಳೆಎಳೆಯಾಗಿ ಬಳುಕುತ್ತಾ ಬೀಳುವ ಪರಿಯನ್ನು ನೋಡುವುದೇ ಒಂದು ಆನಂದ. ಇದಕ್ಕೆ ಕಾರಣ ಸಮುದ್ರ ಕಳೆ (ಪಾಚಿ). ಒಂದು ಸಂತಸದ ಸುದ್ದಿಯೆಂದರೆ ಈ ಸಮುದ್ರ ಕಳೆ ವಿಷಕಾರಿಯಲ್ಲ. ಈ ಸಮುದ್ರ ಕಳೆ ಸತ್ವಯುತ ಆಹಾರವೂ ಹೌದು. ಅಂದಮಾತ್ರಕ್ಕೆ ಟೂತ್‌ಪೇಸ್ಟನ್ನು ನುಂಗಲು ಹೋಗಬೇಡಿ !

ಪೆಪ್ಪರ್‌ಮಿಂಟ್ ಎಣ್ಣೆ; ನಿಮ್ಮ ಶ್ವಾಸವನ್ನು ಸುಗಂಧಯುತವನ್ನಾಗಿ ಮಾಡಲು ಈ ಎಣ್ಣೆ ಬೇಕೇ ಬೇಕು. ಇದೊಂದು ಸುವಾಸನಾ ಎಣ್ಣೆ. ಇದರ ಸೇವನೆಯಿಂದ ನಾಡಿಬಡಿತ ಮಂದವಾಗುವಿಕೆ, ಹೃದಯದ ಉರಿ ಮತ್ತು ಮಾಂಸಖಂಡಗಳ ನಡುಕ ಮುಂತಾದ ತೊಂದರ ಕಾಣಿಸಿಕೊಳ್ಳಬಹುದು.

ವಿಜ್ಞಾನ ವಿಸ್ಮಯ

ಕೆ. ನಟರಾಜ್

ಮೇಣ; ಬೆಳ್ಳಗೆ ಹೊಳೆಯುವ ಟೂತ್‌ಪೇಸ್ಟ್‌ಗೆ ಈ ಗುಣವನ್ನು ನೀಡುವುದೇ ಪ್ಯಾರಾಫಿನ್ ಮೇಣ. ಇದನ್ನು ಪೆಟ್ರೋಲಿಯಂ ಉತ್ಪನ್ನಗಳಿಂದ ಪಡೆಯಲಾಗುತ್ತದೆ. ಇದು ಹೊಟ್ಟೆ ಸೇರಿದರೆ ಹೊಟ್ಟೆನೋವು, ವಾಕರಿಕೆ, ವಾಂತಿ, ತೀವ್ರ ಮಲಬದ್ಧತೆ ಕಾಣಿಸಿಕೊಳ್ಳಬಹುದು.

ಗ್ಲಿಸರಿನ್; ನೀವು ಪರೀಕ್ಷೆ ಮಾಡಿ ನೋಡಿ; ಟೂತ್‌ಪೇಸ್ಟ್ ತಂದು ತಿಂಗಳುಗಳೇ ಕಳೆದರೂ ಅದು ಒಣಗಿ ಗಟ್ಟಿಯಾಗುವುದೇ ಇಲ್ಲ. ಇದಕ್ಕೆ ಕಾರಣ ಗ್ಲಿಸರಿನ್. ಗ್ಲಿಸರಿನ್ ವಿಷಕಾರಿಯಲ್ಲ. ಹಾಗಿದ್ದರೂ, ಅಪ್ಪಿತಪ್ಪಿ ತಿಂದರೆ, ವಾಕರಿಕೆ ಗ್ಯಾರಂಟಿ.

ಸುಣ್ಣ; ಹಲ್ಲಿನ ಮೇಲೆ ಕೂತಿರುವ ಪಾಚಿಯಂತಹ ಗಟ್ಟಿ ಪದಾರ್ಥವನ್ನು ಉಜ್ಜಿ ತೆಗೆಯಲು ಇನ್ನೊಂದು ಗಟ್ಟಿ ಪದಾರ್ಥ ಬೇಕು. ಅದೇ ಸುಣ್ಣ. ಟೂತ್‌ಪೇಸ್ಟ್‌ಲ್ಲಿ ಬಳಸುವ ಸುಣ್ಣವನ್ನು ಮೂಳೆಗಳಿಂದ ತಯಾರಿಸುತ್ತಾರೆ. ಇವು ಶ್ವಾಸಕೋಶದ ತೊಂದರೆಗಳನ್ನು ತರುವುದರ ಜತೆಗೆ ಆಂತರಿಕ ರಕ್ತಸ್ರಾವವನ್ನೂ ಉಂಟುಮಾಡವಬಲ್ಲವು.

ಟೈಟಾನಿಯಂ ಡೈಆಕ್ಸೈಡ್; ಇದೊಂದು ಬಿಳಿ ಬಣ್ಣದ ರಾಸಾಯನಿಕ ವಸ್ತು. ನಿಮ್ಮ ಹಲ್ಲುಗಳು ಹೊಳೆಯುವಂತೆ ಕಾಣಲು ಮಾಡುವುದೇ ಇದು. ಇದರ ಸೇವನೆ ಅಪಾಯಕಾರಿ ಅಲ್ಲದಿದ್ದರೂ ದೇಹದಲ್ಲಿ ಸೇರುವುದು ಸೂಕ್ತವಲ್ಲ.

ಸ್ಯಾಕರೀನ್; ಟೂತ್‌ಪೇಸ್ಟ್‌ನಲ್ಲಿರುವ ಬೇರೆಲ್ಲಾ ಘಟಕಗಳ ವಾಸನೆ ಮತ್ತು ರುಚಿಗಳನ್ನು ಹೋಗಲಾಡಿಸಬೇಕೆಂದರೆ ಈ ಸ್ಯಾಕರೀನ್ ಸೇರಿಸುವುದು ಅನಿವಾರ್ಯ. ಇದೊಂದು ಅತಿ ಸಿಹಿಯಾದ ವಸ್ತು. ಅಮೆರಿಕವು ಸ್ಯಾಕರೀನ್ ಅನ್ನು ಬಹಿಷ್ಕರಿಸಬೇಕೆಂದು ಹೇಳುತ್ತಲೇ ಇದೆ.

ಕರ್ಪೂರ; ನಿಮ್ಮ ಬಾಯಿಯನ್ನು ಯಾವಾಗಲೂ ತಾಜಾ ಆಗಿಡಲು ಮತ್ತು ದುರ್ವಾಸನೆಯನ್ನು ಹೊಡೆದೋಡಿಸಲು ಇದರ ಸೇರಿಸುವಿಕೆ ಅನಿವಾರ್ಯ. ಇದನ್ನು ಟೂತ್‌ಪೇಸ್ಟ್ ಮೂಲಕ ಸೇವಿಸುವುದಕ್ಕಿಂತ ಒಂದು ಮಿಂಟ್ ಚಪ್ಪರಿಸುವುದು ಒಳ್ಳೆಯದು. ಯಾವುದೇ ಇರಲಿ ನೆನಪಿಡಿ ಯಾವುದನ್ನೂ ಅಪ್ಪಿತಪ್ಪಿಯೂ ನುಂಗಬೇಡಿ!

ಪ | ದ | ಬಂ | ಧ

1				■	2			3
	■	■	■	4	■	■	■	
5	6		■		■	7	8	
■		■	9		10	■		■
11				■	12			
■		■	13	14		■		■
15			■		■	16		17
	■	■	■		■	■	■	
18				■	19			

ಎಡದಿಂದ ಬಲಕ್ಕೆ:

1. ತಮ್ಮ ಉತ್ಪನ್ನಗಳನ್ನು ಪ್ರಚಾರಮಾಡಲು ಬಳಸುವ ಪ್ರಕಟಣೆ (4)
2. ಕೃಷ್ಣನು ತನ್ನ ಬೆರಳಿನಿಂದಲೇ ಎತ್ತಿಹಿಡಿದ ಬೆಟ್ಟ (4)
5. ಬುದ್ಧನಿಗೆ ಮತ್ತೊಂದು ಹೆಸರು (3)
7. ಮರವನ್ನು ಕಟ್ಟಿಕೊಂಡಿರುವ ಕದನ (3)
9. ಮಾನವನಿಗೆ ಮತ್ತೊಂದು ಹೆಸರು (3)
11. ಗ್ರಂಥಗಳನ್ನು ಪ್ರಕಟಪಡಿಸುವವನು (4)
12. ಕೃಷ್ಣನಿಗೆ ಹೀಗೊಂದು ಹೆಸರು (4)
13. ಸ್ವಾದವನ್ನು ತಿಳಿಸುವ ನಾಲಗೆ (3)
15. ಮತ್ತೊಂದು ದನದೊಂದಿಗೆ ಆರಂಭವಾಗುವ ಸಣ್ಣ ಶಿಶು (4)
16. ಋಷಿಯು ಹೀಗೆ ಬಂದಿದೆ (3)
18. ಹಗೆತನವಲ್ಲ, ಮಿತ್ರತ್ವ (4)
19. ಸಹಿ ಅಥವಾ ರುಜು (4)

ಮೇಲಿನಿಂದ ಕೆಳಕ್ಕೆ:

1. ಕಸವನ್ನು ಗುಡಿಸು ಎಂದರ್ಥ (3)
3. ನರದ ಮಧ್ಯೆ ಸಿಲುಕಿದೆ ದೊಡ್ಡ ಪಟ್ಟಣ (3)
4. ಅರ್ಧ ಚಂದ್ರಾಕೃತಿಯ ರಚನೆಯ ಹೆಸರು (3)
6. ಮುಗಿಸು ಎಂದರ್ಥದ ನುಡಿಗಟ್ಟು (5)
8. ತಮ್ಮ ವಂಶದ ಪರಂಪರೆಯಿಂದ ಪೂಜಿಸುತ್ತಾ ಬಂದಿರುವ ದೈವ (5)
9. ಮರ ಹತ್ತುವುದೇ ಮೊಸಳೆ (3)
10. ಜನರ ಮಧ್ಯೆಯೇ ಇರುವ ಆಳು (3)
14. ಏಳು ದಿನಗಳ ಅವಧಿ (3)
15. ತಲೆ ಬಾಚಿಕೊಳ್ಳಲು ಬಳಸುವ ಸಾಧನ (3)
17. ನಿಯಮ ಅಥವಾ ಕರಾರು (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 2. ಅನಂಗ 5. ಗಿರಿಜನ 6. ದಸ್ತಗಿರಿ 7. ಚರಕ 10. ವಾಡಿಕೆ 12. ವರೋಪಚಾರ 13. ತಪನ 15. ಸುಹಾಸ 19. ಆಚಮನ 20. ತರಗತಿ 21. ವಕ್ತಾರ

ಮೇಲಿನಿಂದ ಕೆಳಕ್ಕೆ: 1. ಹರಿಹರ 2. ಅನನ್ಯ 3. ಗದರು 4. ಉಗಿಬಂಡಿ 7. ಚಕ್ಕೋತ 8. ಕವನ 9. ಕಪಟ 10. ವಾರಸು 11. ಕೆಲಸ 14. ಪರಿಚಯ 16. ಹಾಲುಗಲ್ಲ 17. ದಾನವ 18. ಅಂತರ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಬೆಕ್ಕಿನ ಕಿವಿ

ಅತಿ ಸೂಕ್ಷ್ಮವಾಗಿರುವ ಬೆಕ್ಕಿನ ಕಣ್ಣನ್ನು ಬಹಳಷ್ಟು ವಿಚಾರಗಳಿಗೆ ಹೋಲಿಕೆ ಮಾಡುತ್ತಾರೆ. ಕಣ್ಣಷ್ಟೇ ಅಲ್ಲ ಬೆಕ್ಕಿನ ಕಿವಿಯೂ ಅದ್ಭುತ ಅಂಗ. ಬೆಕ್ಕುಗಳು ತಮ್ಮ ಕಿವಿಗಳಲ್ಲಿ 32 ಸ್ನಾಯುಗಳನ್ನು ಹೊಂದಿವೆ. ಆ ಸ್ನಾಯುಗಳು ಅವುಗಳ ಕಿವಿಗಳನ್ನು ತಿರುಗಿಸಲು, ಶಬ್ದದ ನಿಖರವಾದ ಮೂಲವನ್ನು ತಿಳಿಯಲು ಸಹಾಯಮಾಡುತ್ತದೆ. ಹಾಗಾಗಿ ಬೆಕ್ಕುಗಳು ತಮ್ಮ ಕಿವಿಗಳನ್ನು ಸುಮಾರು 180 ಡಿಗ್ರಿಗಳಷ್ಟು ತಿರುಗಿಸಲು ಸಾಧ್ಯ! ಕಿವಿಗಳಲ್ಲಿರುವ ಸ್ನಾಯುಗಳಿಂದ ಬೆಕ್ಕುಗಳು ದೇಹದ ಸಮತೋಲನವನ್ನು ಕಾಯ್ದುಕೊಳ್ಳುತ್ತವೆ. ವಿಶೇಷವೆಂದರೆ ಬೆಕ್ಕುಗಳು ಸಂವಹನಕ್ಕೂ ಕಿವಿಗಳನ್ನೇ ಬಳಸಿಕೊಳ್ಳುವುದು.

ಪುಸ್ತಕ ಲೋಕ

ರಾಧೆ ಶಾಮನ ಪ್ರೇಮವಿಲಾಸ 1784

ಜನಪ್ರಿಯ ಲೇಖಕ ಯೋಗೇಶ್ ಮಾಸ್ಟರ್ ಅವರ ಕೃತಿ ರಾಧೆ ಶಾಮನ ಪ್ರೇಮವಿಲಾಸ 1784. ಟಿಪ್ಪುಸುಲ್ತಾನನ ಕಾಲಘಟ್ಟದಲ್ಲಿ ಓರ್ವ ಗೂಢಾಚಾರಿಯ ಮಗ ಮತ್ತು ಪಾಳೇಗಾರನ ಮಗಳ ನಡುವೆ ಮೂಡುವ ಪ್ರೇಮದ ಕತೆಯಿದು. ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಅಂತಸ್ತುಗಳು ಪ್ರೇಮಿಗಳ ಮೇಲೆ ಪ್ರಭಾವ ಬೀರದಿರಲು ಸಾಧ್ಯವೇ ಎಂಬ ಸಾಂದರ್ಭಿಕ ಚರ್ಚೆಗಳು ಇದರಲ್ಲಿವೆ. ಇವೆಲ್ಲದರ ಹೊರತಾಗಿ ಮರಾಠರು ಶೃಂಗೇರಿ ಮಠದ ಮೇಲೆ ದಾಳಿ ಮಾಡಿದ್ದು, ಟಿಪ್ಪುಸುಲ್ತಾನನ ಸಾವು ಕರ್ನಾಟಕದಲ್ಲಿ ಬೀರಿದ ಪ್ರಭಾವಗಳೂ ಕೂಡಾ ಕಥೆಯ ಮುಖ್ಯ ಭಾಗವೇ ಆಗಿವೆ.

ಟ್ವೀಟ್‌ಮೆಂಟ್

ಪ್ರೊಫೆಸರ್: ಪ್ರಜೆಗಳು ಮಾಧ್ಯಮಗಳು ವಿರೋಧ ಪಕ್ಷದ ಸ್ಥಾನದಲ್ಲಿ ನಿಂತು, ಆಡಳಿತ ಸರ್ಕಾರದ ತಪ್ಪುಗಳನ್ನು ತೋರಿಸಬೇಕು!

ಕಿರಣ್ ಕುಮಾರ್: ತಪ್ಪುಗಳನ್ನು ತೋರಿಸಿ ಐಟಿ ರೇಡ್ ಆಗ್ಲಿ ಅಂತಾ ಕಾಯಬೇಕಾ? ಬಕೆಟ್ ಹಿಡಿದರೆ ಪದ್ಮಶ್ರೀ ಕೊಡುವ ಸಮಯದಲ್ಲಿ ತಪ್ಪುಗಳನ್ನು ಎತ್ತಿ ತೋರಿಸಿ ದೇಶದ್ರೋಹಿ ಅನ್ನಿಸಿಕೋ ಎನ್ನುತ್ತೀರಲ್ಲ ಸರ್!

ಈ ದಿನ ಇತಿಹಾಸ



- 1931 – ಕಾಶ್ಮೀರವನ್ನು ಡೋಗ್ರಾ ಆಡಳಿತಗಾರರ ಕ್ರೌರ್ಯದಿಂದ ಮುಕ್ತಗೊಳಿಸಲು ಹುತಾತ್ಮರಾದ 22 ಕಾಶ್ಮೀರಿಗಳಿಗೆ ಗೌರವ ಸಲ್ಲಿಸುವ ದಿನ.
- 1905 – ಕಲ್ಕತ್ತಾದ ವಾರಪತ್ರಿಕೆ 'ಸಂಜೀವನಿ' ಮೊದಲ ಬಾರಿಗೆ ಬ್ರಿಟಿಷ್ ಸರಕುಗಳನ್ನು ಬಹಿಷ್ಕರಿಸುವಂತೆ ಸೂಚಿಸಿತು.
- 1945 – ಮೆಕ್ಸಿಕನ್ ಮರುಭೂಮಿಯಲ್ಲಿ ಮೊದಲ ಪರಮಾಣು ಬಾಂಬ್‌ನ್ನು ಪರೀಕ್ಷಿಸಲಾಯಿತು.

ಚಿತ್ರಸ್ಫೂರ್ತಿ

ಶೇಂಗಾ ಸೇವನೆಯಿಂದ ಆರೋಗ್ಯ ಸರಾಗ

● ಕೆ.ಶ್ರೀನಿವಾಸರಾವ್. ಹರಪನಹಳ್ಳಿ

ಬಾದಾಮಿಯಷ್ಟೇ ಪುಷ್ಟಿಕರ ಆದರೆ ಕಡಿಮೆ ವೆಚ್ಚದ ಶೇಂಗಾಬೀಜವೆಂದರೆ ಅಬಾಲ ವೃದ್ಧರಾದಿಯಾಗಿ ಸಕಲರಿಗೂ ಅಚ್ಚುಮೆಚ್ಚು. ಬಸ್ ನಿಲ್ದಾಣಗಳಲ್ಲಿ ಟೈಂಪಾಸ್ ಕಡ್ಲೆಕಾಯಿ ಎಂದರೆ ಭರ್ಜರಿ ವ್ಯಾಪಾರ ಗ್ಯಾರಂಟಿ. ಅಂತರರಾಷ್ಟ್ರೀಯ ಮಟ್ಟದಲ್ಲಿ ಪೀನಟ್ಸ್ ಎಂದೇ ಖ್ಯಾತಿಯಾಗಿರುವ ಶೇಂಗಾಬೀಜ ವಿದೇಶಿಯರನ್ನೂ ಆಕರ್ಷಿಸಿದೆ. ಹುರಿದ, ಬೇಯಿಸಿದ, ಉಪ್ಪು ಸೇರಿಸಿದ, ಕಡಲೆಹಿಟ್ಟಿನಲ್ಲಿ ಅದ್ದಿ ಕರಿದ, ಚಿಕ್ಕಿ, ಕಂಬರ ಕಟ್ಟು, ಪೀನಟ್ಸ್ ಬರ್ಟ, ಅಲ್ಲದೇ ತಿಂಡಿಗಳ ಜೊತೆಗೆ ರುಚಿಕರವಾದ ಚಟ್ನಿ ತಯಾರಿಸಲು ಉಪಯೋಗವಾ ಗುತ್ತದೆ. ಪ್ರತಿನಿತ್ಯ 20 ರಿಂದ 25 ಶೇಂಗಾಬೀಜಗಳನ್ನು ನೆನೆಸಿ ತಿನ್ನುವುದರಿಂದ ಶರೀರದ ತೂಕ ಇಳಿಯುವು ದಲ್ಲದೇ ಮತ್ತೆ ಪುನಃ ಏರುವುದಿಲ್ಲ. ಇದರ ಉಪಯುಕ್ತತೆಗಳು ಹಲವು

- ನೆನೆಸಿ ಬೆಲ್ಲದೊಂದಿಗೆ ತಿನ್ನುವುದರಿಂದ ದೇಹದಲ್ಲಿ ಕ್ಯಾಲ್ಸಿಯಂ ಉತ್ಪಾದನೆಯಾಗುತ್ತದೆ. ರಕ್ತ ವೃದ್ಧಿಯಾಗುತ್ತದೆ.
- ಇದರಲ್ಲಿನ ಫೋಲಿಕ್ ಆಮ್ಲವು ಗರ್ಭಿಣಿಯರಿಗೆ ಆರೋಗ್ಯಕ್ಕೆ ಉತ್ತಮ ಆಯ್ಕೆ.
- ಇದರಲ್ಲಿ ಒಮೆಗಾ- 3 ಇರುವುದರಿಂದ ಚರ್ಮದ ಸ್ಥಿತಿ ಸುಧಾರಿಸಿ ಹೊಳಪು ಲಭ್ಯವಾಗುತ್ತದೆ.
- ಅನೇಕ ಪೋಷಕಾಂಶಗಳ ಆಗರವೇ ಆಗಿರುವ ಶೇಂಗಾಬೀಜ ಸೇವನೆಯಿಂದ ದೇಹತೆ ಉಷ್ಣತೆ ಕಡಿಮೆಯಾಗುವುದರೊಂದಿಗೆ ರಕ್ತದೊತ್ತಡ, ಸಕ್ಕರೆ ಕಾಯಿಲೆ ತಹಬಂದಿಗೆ ಬರುತ್ತವೆ.
- ಇದರ ಪರಿಶುದ್ಧ ಎಣ್ಣೆ ಅಸಂತೃಪ್ತ ಕೊಬ್ಬು ಹೊಂದಿದ್ದು ಹೃದಯಾಘಾತವನ್ನು ತಡೆಯುತ್ತದೆ.
- ಇದರಲ್ಲಿನ ವಿಟಮಿನ್ 'ಇ' ಮೀನಖಂಡದ ನೋವನ್ನು ನಿವಾರಿಸುತ್ತದೆ.
- ಇದರಲ್ಲಿನ ಆ್ಯಂಟಿ ಆಕ್ಸಿಡೆಂಟುಗಳು ಉದರ ಸಂಬಂಧಿ ಕಾಯಿಲೆಗಳನ್ನು ಹಾಗೂ ಕ್ಯಾನ್ಸರನ್ನು ತಡೆಯುತ್ತವೆ.
- ಪ್ರತಿನಿತ್ಯ ಜಿಮ್ ಗೆ ಹೋಗುವವರು ನೆನೆಸಿದ ಶೇಂಗಾಬೀಜಗಳನ್ನು ಖಾಲಿ ಹೊಟ್ಟೆಯಲ್ಲಿ ತಿಂದರೆ ಪ್ರೋಟೀನ್ ಕ್ಯಾಲ್ಸಿಯಂ, ದೊರೆಯುತ್ತದೆ.
- ಇದರಿಂದ ದೇಹದ ಟಿ.ಎಸ್.ಎಚ್. ಮಟ್ಟ ಕಡಿಮೆಯಾಗುತ್ತದೆ. ಥೈರಾಯ್ಡ್ ರೋಗಕ್ಕೆ ರಾಮಬಾಣ.
- ನೆನೆಸಿದ ಶೇಂಗಾಬೀಜ ಸೇವನೆಯಿಂದ ಅಲರ್ಜಿ, ತುರಿಕೆ, ಯಕೃತ್ತಿನ ಸಮಸ್ಯೆ, ಮೊಣಕಾಲು ನೋವು, ಸಂಧಿವಾತ ಕಡಿಮೆಯಾಗುತ್ತದೆ. ನೆನಪಿಡಿ, ಇದರ ಅತಿಯಾದ ಸೇವನೆ ಆರೋಗ್ಯಕ್ಕೆ ಹಾನಿಕರ. ಸೇವನೆ ಮಿತಿಯಲ್ಲಿರಲಿ.

ಸಮಾಚಾರ ಸಣ್ಣದಲ್ಲ

ಟೆನ್ನಿಸ್ ಆಡಿದ್ದರೆ ಹೆಚ್ಚು ಯಶಸ್ಸು ಸಿಗುತ್ತಿತ್ತು

ದೆಹಲಿ: ಬ್ಯಾಡ್ಮಿಂಟನ್ ಬದಲಿಗೆ ಟೆನ್ನಿಸ್ ಆಡಿದ್ದರೆ ಹೆಚ್ಚಿನ ಯಶಸ್ಸು ಸಿಗುತ್ತಿತ್ತು ಎಂದು ಭಾರತದ ಖ್ಯಾತ ಬ್ಯಾಡ್ಮಿಂಟನ್ ಆಟಗಾರ್ತಿ ಸೈನಾ ನೆಹ್ವಾಲ್

ಹೇಳಿದ್ದಾರೆ. ರಾಷ್ಟ್ರಪತಿ ಭವನದಲ್ಲಿ ನಡೆದ ಅವಳ ಕಥೆ-ನನ್ನ ಕಥೆ' ಉಪನ್ಯಾಸ ಸರಣಿಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಬ್ಯಾಡ್ಮಿಂಟನ್ ಆಡುವ ಬದಲು ಟೆನ್ನಿಸ್ ಆಡುತ್ತಿದ್ದರೆ ಇನ್ನೂ ಹೆಚ್ಚಿನ ಯಶಸ್ಸು ಸಿಗುತ್ತಿತ್ತು. ನನ್ನ ಪೋಷಕರು ಬ್ಯಾಡ್ಮಿಂಟನ್‌ಗೆ ಬದಲಾಗಿ ಟೆನ್ನಿಸ್‌ಗ್ಗೆ ಸೇರಿಸುತ್ತಿದ್ದರೆ ಚೆನ್ನಾಗಿರುತ್ತಿತು. ನಾನು ಬ್ಯಾಡ್ಮಿಂಟನ್ ಬಿಟ್ಟು ಟೆನ್ನಿಸ್ ಅಥವಾ ಕ್ರಿಕೆಟ್ ಆಡುತ್ತಿದ್ದರೆ ನನ್ನ ಬಳಿ ಹೆಚ್ಚು ಹಣ ಮತ್ತು ಶಕ್ತಿ ಇರುತ್ತಿತ್ತು ಎಂದು ಹೇಳಿದ್ದಾರೆ. ನಾನು ಯಾವುದಾದರೊಂದು ಟೂರ್ನಿಯಲ್ಲಿ ಸೋತರೆ ಸಾಕು ಎಲ್ಲ ಕಡೆಗಳಿಂದ ಟೀಕೆಗಳು ಬರುತ್ತದೆ. ಬ್ಯಾಡ್ಮಿಂಟನ್ ಎನ್ನುವುದು ಅಷ್ಟು ಸುಲಭದ ಆಟವಲ್ಲ. ಇಲ್ಲಿ ಉಸಿರು ತೆಗೆಯಲು ಕೂಡ ಕಷ್ಟಪಡಬೇಕು. ಇದು ಬ್ಯಾಡ್ಮಿಂಟನ್ ಆಡಿದವರಿಗೆ ಮಾತ್ರ ಇದರ ಕಷ್ಟ ಅರಿವಾಗುತ್ತದೆ. ನಾನು ಒಬ್ಬರ ಬಗ್ಗೆ ಟೀಕೆ ಮಾಡುವುದು ಸಲಭ. ಆದರೆ ಈ ಕಷ್ಟ ಏನೆಂಬುದು ಕ್ರೀಡಾಪಟುಗಳಿಗೆ ಮಾತ್ರ ತಿಳಿದಿರುತ್ತದೆ ಎಂದಿದ್ದಾರೆ.

ಚಾಂಪಿಯನ್ಸ್ ಟ್ರೋಫಿಗೆ ಬನ್ನಿ: ಅಫ್ರಿದಿ ಆಹ್ವಾನ

ಕರಾಚಿ: ಪಾಕಿಸ್ತಾನದಲ್ಲಿ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾರತ ಭಾಗಿಯಾಗುವುದಿಲ್ಲ ಎಂಬ ಸುದ್ದಿ ಹರಿದಾಡುತ್ತಿದ್ದಂತೆ ಶಾಹಿದ್ ಅಫ್ರಿದಿ ಭಾರತ ತಂಡವನ್ನು ಪಾಕಿಸ್ತಾನಕ್ಕೆ ಆಹ್ವಾನಿ ಸಿದ್ದಾರೆ. ಈ ಬಗ್ಗೆ ಗಂಭಿರ ಹೇಳಿಕೆ ನೀಡಿದ ಅವರು, ನಾನು ಭಾರತ ತಂಡವನ್ನು ಪಾಕಿಸ್ತಾನಕ್ಕೆ ಆಹ್ವಾನಿಸುತ್ತಿದ್ದೇನೆ. ಪಾಕಿಸ್ತಾನ ಭಾರತಕ್ಕೆ ಹೋಗಿದ್ದಾಗ ನಮಗೆ ಸಾಕಷ್ಟು ಗೌರವ ಸಿಕ್ಕಿತ್ತು. ಕ್ರೀಡೆ ರಾಜಕೀಯದ ಹೊರತಾಗಿರಬೇಕು. ಎರಡೂ ತಂಡಗಳು ಆಡದೇ ಇರಲು ರಾಜಕೀಯವೇ ಕಾರಣ. ಭಾರತ ತಂಡ ಪಾಕಿಸ್ತಾನಕ್ಕೆ ಬರುವುದು, ಪಾಕಿಸ್ತಾನ ತಂಡ ಭಾರತಕ್ಕೆ ಹೋಗುವುದಕ್ಕಿಂತ ಸುಂದರ ಕ್ಷಣ ಇನ್ನೇನಿದೆ ಎಂದಿದ್ದಾರೆ. ಅಷ್ಟೇ ಅಲ್ಲದೆ, ವಿರಾಟ್ ಕೊಹ್ಲಿಗೆ ಪಾಕಿಸ್ತಾನದಲ್ಲಿ ಸಿಗಬಹುದಾದ ಪ್ರೀತಿ ಬಗ್ಗೆ ವಿಶೇಷವಾಗಿ ಹೇಳಿಕೊಂಡಿದ್ದು, 'ಪಾಕಿಸ್ತಾನಕ್ಕೆ ಬಂದರೆ ವಿರಾಟ್ ಕೊಹ್ಲಿಗೆ ಭಾರತದಲ್ಲಿ ತನ್ನನ್ನು ಎಷ್ಟು ಪ್ರೀತಿಸುತ್ತಾರೆ ಎಂಬುದೂ ಮರೆತು ಹೋಗಬಹುದು. ಅಷ್ಟರ ಮಟ್ಟಿಗೆ ಇಲ್ಲಿಯ ಜನ ಅವರನ್ನು ಪ್ರೀತಿಸುತ್ತಾರೆ. ಆತ ನನ್ನ ಫೇವರಿಟ್ ಕ್ರಿಕೆಟಿಗ. ಆತ ಟಿ20 ಕ್ರಿಕೆಟ್ ನಿಂದ ನಿವೃತ್ತಿಯಾಗಬಾರದಿತ್ತು ಎಂದು ಅಫ್ರಿದಿ ಹೇಳಿರುವ ವಿಡಿಯೋ ಇದೀಗ ವೈರಲ್ ಆಗಿದೆ.

ಜಿಂಬಾಬ್ವೆ, ಭಾರತ 4ನೇ ಟಿ20 ಪಂದ್ಯ ಇಂದು | ಆತ್ಮವಿಶ್ವಾಸದಲ್ಲಿ ಗಿಲ್ ಪಡೆ

ಸರಣಿ ವಶ ಮಾಡಿಕೊಳ್ಳಲು ಭಾರತ ಸಿದ್ಧ

ಹರಾರೆ: ವಿಶ್ವಕಪ್ ಗೆದ್ದ ನಂತರ ಭಾರತ ತನ್ನ ಬಿ ಟೀಂನೊಂದಿಗೆ ಜಿಂಬಾಬ್ವೆ ಪ್ರಾವಸದಲ್ಲಿ ಇದ್ದು, 3 ಪಂದ್ಯಗಳನ್ನು ಮುಗಿಸಿದೆ. 5 ಪಂದ್ಯಗಳ ಈ ಟಿ20 ಸರಣಿಯಲ್ಲಿ ಮೊದಲ ಮೂರು ಪಂದ್ಯಗಳೂ ಮುಕ್ತಾಯಗೊಂಡಿದ್ದು, ಭಾರತ ಎರಡು ಪಂದ್ಯ ಗೆದ್ದರೇ ಆತಿಥ್ಯ ಜಿಂಬಾಬ್ವೆ ಒಂದು ಪಂದ್ಯವನ್ನು ಗೆದ್ದಿದೆ. ಹರಾರೆಯಲ್ಲಿ ನಡೆಯುತ್ತಿರುವ ಈ ಸರಣಿಯ ಮೊದಲ ಪಂದ್ಯದಲ್ಲಿ ಜಿಂಬಾಬ್ವೆ ತನ್ನ ಬಲಿಷ್ಠ ಬೌಲಿಂಗ್ ದಾಳಿಯಿಂದ ಶುಭಮನ್ ಗಿಲ್ ನೇತೃತ್ವದ ಭಾರತದ ಯುವಕರ ತಂಡವನ್ನು ಸೋಲಿಸಿತ್ತು. ಅದಾದ ಬಳಿಕ ಭಾರತ ಪುಟಿದೆದ್ದು ಸತತ ಎರಡು ಪಂದ್ಯಗಳಲ್ಲಿ ಭರ್ಜರಿ ಗೆಲುವು ದಾಖಲಿಸಿತ್ತು. ಇದೀಗ ನಾಲ್ಕನೇ ಪಂದ್ಯ ಶನಿವಾರದಂದು ನಡೆಯಲಿದ್ದು, ಗಿಲ್ ಪಡೆ ಗೆದ್ದರೆ ಸರಣಿ ವಶ ಮಾಡಕೊಳ್ಳಲಿದೆ. ಅದರಂತೆ ಜಿಂಬಾಬ್ವೆ ಸತತ ಸೋಲಿನಿಂದ ಹೊರಬಂದು ಸರಣಿ ಸೋಲುವುದನ್ನು ತಪ್ಪಿಸಿಕೊಳ್ಳುವ ತವಕದಲ್ಲಿ ಇದೆ.

ಫಾರ್ಮ್‌ನಲ್ಲಿ ಇರುವ ಭಾರತ

ವಿಶ್ವಕಪ್ ಗೆದ್ದ ನಂತರ ಭಾರತ ತಂಡದ ಮತ್ತೊಂದು ತುಣುಕು ಜಿಂಬಾಬ್ವೆ ಪ್ರವಾಸದಲ್ಲಿ ಕಾಣಿಸಿಕೊಂಡಿದೆ. ಪ್ರಮುಖವಾಗಿ ಅನುಭವಿ ಆಟಗಾರರು ತಂಡದಲ್ಲಿ ಕಾಣಿಸುತ್ತಿಲ್ಲ. ರೋಹಿತ್ ಶರ್ಮ ವಿರಾಟ್ ಕೊಹ್ಲಿ ಹಾಗೂ ರವೀಂದ್ರ ಜಡೇಜಾ ನಿವೃತ್ತರಾಗಿದ್ದು, ಟೀಂ ಇಂಡಿಯಾದಲ್ಲಿ ಖಾಯಂ ಸ್ಥಾನ ಉಳಿಸಿಕೊಳ್ಳಲು ಭಾರತದ ಯುವ ಆಟಗಾರರು ಕಸರತ್ತನ್ನು ನಡೆಸಿದೆ. ಹೀಗಾಗಿ ಜಿಂಬಾಬ್ವೆ ವಿರುದ್ಧದ ಸರಣಿಯಲ್ಲಿ ಇರುವ ಆಟಗಾರರು ಎಲ್ಲರೂ ಸ್ಥಾನ ಉಳಿಸಿಕೊಳ್ಳಲು ಕಸರತ್ತನ್ನು ನಡೆಸಿದ್ದು, ಲಯ ಕಂಡುಕೊಳ್ಳುವುದು ಅನಿವಾರ್ಯವಾಗಿದೆ. ಜಿಂಬಾಬ್ವೆ ವಿರುದ್ಧದ ಮೊದಲ ಪಂದ್ಯದಲ್ಲಿ ವಿಫಲರಾದ ನಂತರ ಎರಡನೇ ಪಂದ್ಯದಲ್ಲಿ ಅಭಿಷೇಕ್ ಶರ್ಮ ಭರ್ಜರಿ ಶತಕವನ್ನು ಬಾರಿಸಿದ್ದರು. ಆಡಿರುವ ಮೂರು ಪಂದ್ಯಗಳ ಪೈಕಿ ಎರಡನೇ ಹಾಗೂ ಮೂರನೇ ಪಂದ್ಯದಲ್ಲಿ ಭರ್ಜರಿ ಪ್ರದರ್ಶನ ನೀಡಿರುವ ಋತುರಾಜ್ ಗಾಯಕ್‌ವಾಡ್ ಅವರ ಲಯ ಭಾರತದ ಶಕ್ತಿಯಾಗಿದೆ. ಗಿಲ್ ಸಹ ಮತ್ತೆ ಲಯ ಕಂಡುಕೊಂಡಿದ್ದು, ಬ್ಯಾಟಿಂಗ್ ವಿಭಾಗದ ಚಿಂತೆಯನ್ನು ದೂರು ಮಾಡಿದೆ. ಇನ್ನು ಬೌಲಿಂಗ್ ವಿಭಾಗದಲ್ಲಿ ಮೊದಲ ಬಾರಿಗೆ ಪಂದ್ಯ ಶ್ರೇಷ್ಠ ಪ್ರಶಸ್ತಿಯನ್ನು ಪಡೆದ ವಾಷಿಂಗ್ಟನ್ ಸುಂದರ್, ಹಾಗೂ ಭರ್ಜರಿ ಪ್ರದರ್ಶನ ತೋರುತ್ತಿರುವ ಮುಖೇಷ್ ಕುಮಾರ್ ಸೇರಿ ಹಲವರು ಫಾರ್ಮ್‌ನಲ್ಲಿ ಇದ್ದಾರೆ. ಹೀಗಾಗಿ ಭಾರತ ಆತ್ಮವಿಶ್ವಾಸದಲ್ಲಿ ಇದೆ.

ಜಿಂಬಾಬ್ವೆಗೆ ಗೆಲ್ಲಲೇ ಬೇಕಾದ ಪಂದ್ಯ

ಮೊದಲ ಪಂದ್ಯದಲ್ಲಿ ಗೆದ್ದು ಸತತ ಎರಡು ಪಂದ್ಯಗಳನ್ನು ಸೋತಿರುವ ಜಿಂಬಾಬ್ವೆಗೆ ಇದು ಮಾಡು ಇಲ್ಲವೆ ಮಡಿ ಪಂದ್ಯವಾಗಿದೆ. ಸರಣಿಯಲ್ಲಿ ಭಾರತ ಒಂದು ಪಂದ್ಯ ಮುಂದಿದ್ದು, ಈ ಪಂದ್ಯದಲ್ಲಿ ಸೋತರೆ ಜಿಂಬಾಬ್ವೆ ಸರಣಿ ಸೋತಂತಾಗುತ್ತದೆ. ಪ್ರಮುಖವಾಗಿ ಆರಂಭಿಕ ಹಂತದಲ್ಲಿ ಕುಸಿಯುತ್ತಿರುವ ತಂಡಕ್ಕೆ ಬಲಿಷ್ಠ ಆರಂಭ ಸಿಗಬೇಕಿದೆ. ಅದಲ್ಲದೇ ಮೂರನೇ ಹಾಗೂ ನಾಲ್ಕನೇ ಕ್ರಮಾಂಕದಲ್ಲೂ ಕುಸಿತ ಕಾಣುತ್ತಿದೆ. ನಾಯಕ ಸಿಕಂದರ್ ರಜಾ ಅವರ ಬ್ಯಾಟ್‌ನಿಂದ ರನ್‌ಗಳು ಬರಬೇಕಿದೆ. ಮೆಯರ್ಸ್ ಲಯದಲ್ಲಿದ್ದು, ತಂಡಕ್ಕೆ ಆಸರೆಯಾಗಿದ್ದಾರೆ. ಇನ್ನು ಬೌಲಿಂಗ್ ವಿಭಾಗದಲ್ಲಿ ಮೊದಲ ಪಂದ್ಯದಲ್ಲಿ ಭರ್ಜರಿ ಪ್ರದರ್ಶನ ತೋರಿದ ನಂತರ ವಿಫಲರಾಗಿದ್ದಾರ. ಹಾಗಾಗಿ ಪಂದ್ಯವನ್ನು ಗೆಲ್ಲಬೇಕಾದರೆ, ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಉತ್ತಮ ಪ್ರದರ್ಶನ ನೀಡಬೇಕಿದೆ.

ಋತುಗೆ ಅಗ್ನಿಪರೀಕ್ಷೆ

ಟೀಂ ಇಂಡಿಯಾದ ಬ್ಯಾಟಿಂಗ್ ಪಡೆಯ ಪಿಲ್ಲರ್ ಆಗಿದ್ದ ರೋಹಿತ್ ಶರ್ಮ ಹಾಗೂ ವಿರಾಟ್ ಕೊಹ್ಲಿ ಅವರು ನಿವೃತ್ತರಾಗಿದ್ದಾರೆ. ಹೀಗಾಗಿ ಭಾರತದಲ್ಲಿ ಇದೀಗ ಆರಂಭಿಕ ಹಾಗೂ ಮೂರನೇ ಕ್ರಮಾಂಕದಲ್ಲಿ ಸ್ಥಾನ ಗಿಟ್ಟಿಸಿಕೊಳ್ಳಲು ಯುವಕರು ಕಸರತ್ತನ್ನು ನಡೆಸಿದ್ದಾರೆ. ಆರಂಭಿಕರಾಗಿ ಗಿಲ್ ಹಾಗೂ ಜೈಸ್ವಾಲ್ ಸ್ಥಾನ ಭದ್ರಪಡಿಸಿಕೊಂಡಿದ್ದಾರೆ. ಆದರೆ ಮೂರನೇ ಹಾಗೂ ನಾಲ್ಕನೇ ಸ್ಥಾನವನ್ನು ಗಿಟ್ಟಿಸಿಕೊಳ್ಳಲುಋತುರಾಜ್ ಅವರನ್ನು ಅಗ್ನಿಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಮೊದಲೇರಡು ಪಂದ್ಯಗಳಲ್ಲಿ ಮೂರನೇ ಕ್ರಮಾಂಕದಲ್ಲಿ ಆಡಿದ್ದ ಅವರನ್ನು ಮೂರನೇ ಪಂದ್ಯದಲ್ಲಿ ನಾಲ್ಕನೇ ಕ್ರಮಾಂಕದಲ್ಲಿ ಆಡಿಸಲಾಗಿದೆ. ಅಲ್ಲದೆ, ಅವರು ಐಪಿಎಲ್‌ನಲ್ಲಿ ಆರಂಭಿಕರಾಗಿ ಆಡುತ್ತಾರೆ. ಇದೀಗ ಎಲ್ಲ ವಿಭಾಗದಲೂ ಫಿಟ್ ಕಾಣುತ್ತಿರುವ ಅವರನ್ನು ಮೂರನೇ ಕ್ರಮಾಂಕದಲ್ಲಿ ಆಡಿಸುವ ನಿಟ್ಟನಲ್ಲಿ ಪರೀಕ್ಷೆ ಮಾಡುತ್ತಿದ್ದಾರೆ ಎನ್ನಲಾಗಿದೆ.

ಚಾಂಪಿಯನ್ ಪಟ್ಟಕ್ಕೆ ಕೊಲಂಬಿಯಾ, ಅರ್ಜೆಂಟಿನಾ ಕಾದಾಟ

ಅಮೆರಿಕ: ಕೊಪಾ ಅಮೆರಿಕ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಉರುಗ್ವೆ ತಂಡದ ವಿರುದ್ಧ 1-0 ಗೋಲುಗಳಿಂದ ಕೊಲಂಬಿಯಾ ಭರ್ಜರಿ ಗೆಲುವು ಸಾಧಿಸಿದ್ದು, ಫೈನಲ್‌ಗೆ ಲಗ್ಗೆ ಇಟ್ಟಿದೆ.

ಫೈನಲ್‌ಗೇರಿದ ಅರ್ಜೆಂಟಿನಾ

ಹಾಲಿ ಚಾಂಪಿಯನ್ ಅರ್ಜೆಂಟೀನಾ ತಂಡವು 16ನೇ ಪ್ರಶಸ್ತಿ ಮೇಲೆ ಕಣ್ಣಿಟ್ಟಿದ್ದು, ಸತತ ಮೂರು ಬಾರಿ ಪ್ರಶಸ್ತಿ ಗೆದ್ದಿರುವ ಸ್ಪೇನ್ ತಂಡದ ದಾಖಲೆ ಸರಿಗಟ್ಟುವ ವಿಶ್ವಾಸದಲ್ಲಯೂ ಅರ್ಜೆಂಟೀನಾ ಇದೆ. ಸೆಮಿಫೈನಲ್ ಪಂದ್ಯದಲ್ಲಿ ಉಭಯ ತಂಡಗಳ ಆಟಗಾರರು ತಲಾ ಮೂರು ಹಳದಿ ಕಾರ್ಡ್ ಮತ್ತು ಒಂದು ಬಾರಿ ಕೆಂಪು ಕಾರ್ಡ್ ಪ್ರದರ್ಶನ ಮಾಡಿದ್ದಾರೆ. ಹಾಗೆ ನೋಡಿದರೆ ಪಂದ್ಯದಲ್ಲಿ ಉರುಗ್ವೆ ತಂಡವೇ ಚೆಂಡಿನ ಮೇಲೆ ಹೆಚ್ಚು ಸಮಯ ಹಿಡಿತ ಸಾಧಿಸಿತ್ತು. ನಿಖರ ಪಾಸ್‌ಗಳನ್ನು ನೀಡುವಲ್ಲಿಯೂ ಉರುಗ್ವೆಯೇ ಮುಂದಿತ್ತು. ಆದರೂ ಜಯದ ಅದೃಷ್ಟ ಒಲಿಯಲಿಲ್ಲ.

39ನೇ ನಿಮಿಷದಲ್ಲಿ ಗೋಲು ದಾಖಲಿಸಿದ ಜೆಫರ್ಸನ್ ಲೆಮಾರ್, ಗೆಲುವಿನ ರೂವಾರಿ ಎನಿಸಿದರು. ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಕೊಲಂಬಿಯಾ ತಂಡವು ಹಾಲಿ ಚಾಂಪಿಯನ್ ಅರ್ಜೆಂಟೀನಾದ ಸವಾಲನ್ನು ಎದುರಿಸಲಿದೆ. ಮತ್ತೊಂದೆಡೆ ಕೆನಡಾ ತಂಡವನ್ನು ಮಣಿಸಿರುವ ಅರ್ಜೆಂಟೀನಾ ಈಗಾಗಲೇ ಫೈನಲ್‌ಗೆ ಪ್ರವೇಶಿಸಿದೆ. 2001ರಲ್ಲಿ ಚಾಂಪಿಯನ್ ಆಗಿದ್ದ ಕೊಲಂಬಿಯಾ ಕೊಪಾ ಅಮೆರಿಕ ಟೂರ್ನಿಯಲ್ಲಿ ಒಂದು ಸಲ ಮಾತ್ರ ಕೊಲಂಬಿಯಾ ಟ್ರೋಫಿ ಗೆದ್ದಿದೆ. 2001ರಲ್ಲಿ ಮೆಕ್ಸಿಕೊ ತಂಡವನ್ನು ಮಣಿಸಿದ್ದ ಕೊಲಂಬಿಯಾ ಪ್ರಶಸ್ತಿ ಗೆದ್ದಿತ್ತು.

ಟೆಸ್ಟ್ ಇತಿಹಾಸದಲ್ಲಿ 700 ವಿಕೆಟ್ ಪಡೆದ ಬೌಲರ್ ವಿದಾಯ

ಕ್ರಿಕೆಟ್ ದಿಗ್ಗಜ ಆ್ಯಂಡರ್ಸನ್ ನಿವೃತ್ತಿ

ಲಾರ್ಡ್ಸ್: ಇಂಗ್ಲೆಂಡ್‌ನ ದಿಗ್ಗಜ ವೇಗಿ ಜೇಮ್ಸ್ ಆ್ಯಂಡರ್ಸನ್ ಅವರು ಟೆಸ್ಟ್‌ಗೆ ಅಧಿಕೃತವಾಗಿ ವಿದಾಯ ಹೇಳಿದ್ದಾರೆ. ಲಾರ್ಡ್ಸ್ ಮೈದಾನದಲ್ಲಿ ನಡೆದ ಇಂಗ್ಲೆಂಡ್ ಹಾಗೂ ವೆಸ್ಟ್ ಇಂಡೀಸ್ ನಡುವಿನ ಮೊದಲ ಟೆಸ್ಟ್ ಪಂದ್ಯ ಕೇವಲ ಮೂರೇ ದಿನಕ್ಕೆ ಅಂತ್ಯಗೊಂಡಿದೆ. ಈ ಪಂದ್ಯದಲ್ಲಿ ಆತಿಥೇಯ ಇಂಗ್ಲೆಂಡ್, ವಿಂಡೀಸ್ ಪಡೆಯನ್ನು ಇನ್ನಿಂಗ್ಸ್ ಹಾಗೂ 114 ರನ್‌ಗಳಿಂದ ಮಣಿಸಿದೆ. ಇದರೊಂದಿಗೆ ಈ ಮೊದಲೇ ನಿವೃತ್ತಿ ಪಡೆಯುದಾಗಿ ಹೇಳಿದ್ದ ಜೇಮ್ಸ್ ಆ್ಯಂಡರ್ಸನ್‌ಗೆ ಆಂಗ್ಲ ಪಡೆ ಗೆಲುವಿನ ಬೀಳ್ಕೊಡುಗೆ ನೀಡಿದೆ. ಬ್ಯಾಟರ್‌ಗಳನ್ನು ಕಾಟ ಕೊಟ್ಟ ಆ್ಯಂಡರ್ಸನ್ ವಿಂಡೀಸ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯ ತಮ್ಮ ವೃತ್ತಿಜೀವನದ ಕೊನೆಯ ಪಂದ್ಯ ಎಂದು ಈ ಮೊದಲೇ ಹೇಳಿದ್ದರು. ಅದರಂತೆ ಏಕಪಕ್ಷೀಯ ಗೆಲುವು ದಾಖಲಿಸುವ ಮೂಲಕ ಇಂಗ್ಲೆಂಡ್ ತಂಡ ದಿಗ್ಗನಿಗೆ ಅರ್ಹ ವಿದಾಯ ನೀಡಿದೆ. 2002 ರಲ್ಲಿ ತಮ್ಮ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ಜೇಮ್ಸ್ ಆಂಡರ್ಸನ್, 2003 ರಲ್ಲಿ ಮೊದಲ ಟೆಸ್ಟ್ ಪಂದ್ಯವನ್ನು ಆಡಿದ್ದರು. ಸುಮಾರು 22 ವರ್ಷಗಳ ಕಾಲ ಅಂತಾರಾಷ್ಟ್ರೀಯ ಕ್ರಿಕೆಟ್ ಆಡಿದ ಜೇಮ್ಸ್ ಆ್ಯಂಡರ್ಸನ್ ದೊಡ್ಡ ದೊಡ್ಡ ದಾಖಲೆಗಳನ್ನು ಬರೆದಿದ್ದಾರೆ. ಎಂದಿನಂತೆ ತಮ್ಮ ಕೊನೆಯ ಪಂದ್ಯದಲ್ಲೂ 4 ವಿಕೆಟ್‌ಗಳನ್ನು ಉರುಳಿಸಿದರು.

3 ಪೀಳಿಗೆಗೆ ಬೌಲಿಂಗ್ ಮಾಡಿದ ಜೇಮ್ಸ್

ಇಂಗ್ಲೆಂಡ್‌ನ ಜೇಮ್ಸ್ ಆ್ಯಂಡರ್ಸನ್ ಸುಮಾರು ಮೂರು ಪೀಳಿಗೆಯ ಬ್ಯಾಟ್‌ಗಳಿಗೆ ಬೌಲಿಂಗ್ ಮಾಡಿದ್ದಾರೆ. 2003ರಿಂದಲೂ ಬೌಲಿಂಗ್ ಮಾಡಿದ ಅವರು, ಭಾರತದ ಸಚಿನ್ ತೆಂಡೂಲ್ಕರ್, ವಿರಾಟ್ ಕೊಹ್ಲಿ, ಶುಭಮನ್ ಗಿಲ್ ಮೂರು ಪಿಳಿಗೆಯ ಬ್ಯಾಟರ್‌ಗಳಿಗೂ ಬೌಲಿಂಗ್ ಮಾಡಿದ ಏಕೈಕ ಬೌಲರ್ ಆಗಿದ್ದಾರೆ.

ದಾಖಲೆಯ ವೀರ: ಜೇಮ್ಸ್ ಆ್ಯಂಡರ್ಸನ್ ಮೊದಲೇ ಏಕದಿನ ಮತ್ತು ಟಿ20 ಮಾದರಿಗಳಿಂದ ನಿವೃತ್ತಿ ಹೊಂದಿದ್ದರು. ಇದೀಗ ಟೆಸ್ಟ್‌ಗೆ ವಿದಾಯ ಹೇಳುವ ಜತೆಗೆ ಅಂತರಾಷ್ಟ್ರೀಯ ಕ್ರಿಕೆಟ್‌ಗೆ ಪೂರ್ಣ ವಿದಾಯ ಹೇಳಿದ್ದಾರೆ. ಕ್ರಿಕೆಟ್ ಲೋಕದಲ್ಲಿ ತಮ್ಮದೇ ಛಾಪೂ ಮೂಡಿಸಿದ್ದ ಜೇಮ್ಸ್ ಅವರು, ಟೆಸ್ಟ್ ಮಾದರಿಯಲ್ಲಿ 188 ಪಂದ್ಯಗಳನ್ನಾಡಿದ್ದು, 704 ವಿಕೆಟ್‌ಗಳನ್ನು ಪಡೆದಿದ್ದಾರೆ. ಇದರೊಂದಿಗೆ ಟೆಸ್ಟ್‌ನಲ್ಲಿ 700 ವಿಕೆಟ್‌ಗಳನ್ನು ಪಡೆದ ಏಕೈಕ ವೇಗದ ಬೌಲರ್ ಎಂಬ ದಾಖಲೆಯೂ ಜೇಮ್ಸ್ ಆಂಡರ್ಸನ್ ಪಾಲಾಗಿದೆ. ಇದಲ್ಲದೆ ಟೆಸ್ಟ್ ಕ್ರಿಕೆಟ್‌ನಲ್ಲಿ ಅವರು 32 ಬಾರಿ ಐದು ವಿಕೆಟ್‌ಗಳನ್ನು ಮತ್ತು ಮೂರು ಬಾರಿ 10 ವಿಕೆಟ್‌ಗಳನ್ನು ಪಡೆದ ಸಾಧನೆ ಮಾಡಿದ್ದಾರೆ.

ಚಹಲ್ ಸನ್ಮಾನಿಸಿದ ಹರಿಯಾಣ ಸಿಎಂ

ಹರಿಯಾಣ: ಟಿ20 ವಿಶ್ವಕಪ್ ಗೆದ್ದ ಬೆನ್ನಲ್ಲೇ ತಂಡದ ಆಟಗಾರರಿಗೆ ಸನ್ಮಾನ, ಬಹುಮಾನಗಳ ಸುರಿಮಳೆಯೇ ಹರಿದು ಬರುತ್ತಿದೆ. ಗೆಲುವಿನ ನಾಗಾಲೋಟ ಬಾರಿಸಿದ ನಂತರ ಭಾರತಕ್ಕೆ ಬಿಸಿಸಿಐ ಸೇರಿದಂತೆ ವಿವಿಧ ಇಲಾಖೆಗಳು ಕರೆಸಿ ಸನ್ಮಾನ ಮಾಡಿ ಬಹುಮಾನ ನೀಡಿದ್ದವು. ಅದಲ್ಲದೆ, ಪ್ರತಿಯೊಂದು ರಾಜ್ಯ ಸರಕಾರಗಳೂ ಸಹ ತಮ್ಮ ತಮ್ಮ ರಾಜ್ಯದ ಆಟಗಾರರಿಗೆ ಬಹುಮಾನ ಸನ್ಮಾನಗಳನ್ನು ನೀಡಿತ್ತಿವೆ. ಇದರೊಂದಿಗೆ ಟೀಮ್ ಇಂಡಿಯಾ ಆಟಗಾರರನ್ನು ಆಯಾಯ ರಾಜ್ಯಗಳ ಮುಖ್ಯಮಂತ್ರಿಗಳು ಸನ್ಮಾನಿಸುತ್ತಿದ್ದಾರೆ. ಇದೀಗ ಚಾಂಪಿಯನ್ ಭಾರತ ತಂಡದ ಸ್ಪಿನ್ನರ್ ಯುಜ್ವೇಂದ್ರ ಚಹಾಲ್ ಅವರನ್ನು ಹರಿಯಾಣ ರಾಜ್ಯ ಸರ್‌ಕಾರ ಸನ್ಮಾನಿಸಿದೆ. ಹರಿಯಾಣ ಸಿಎಂ ನಯಾಬ್ ಸಿಂಗ್ ಸೈನಿ ಅವರು ಯುಜ್ವೇಂದ್ರ ಚಹಾಲ್ ಅವರನ್ನು ಭೇಟಿ ಮಾಡಿ ಸನ್ಮಾನಿಸಿದ್ದು, ಶಾಲು ಹೊದಿಸಿ ಮೂರ್ತಿಯನ್ನು ನೀಡಿ ಟೀಮ್ ಇಂಡಿಯಾ ಗೆಲುವಿಗೆ ಸಿಎಂ ಅಭಿನಂದನೆ ಸಲ್ಲಿಸಿದ್ದಾರೆ.

ಅಜಯ್‌ಗೆ ನಾಟ್ ಔಟ್ ಎಂದ ಅಂಬರೀಶ್

ಪ್ರಶಾಂತ್.ಟಿ.ಆರ್

ಸ್ಯಾಂಡಲ್‌ವುಡ್‌ನಲ್ಲಿ ಹೋಪ್ ಮೂಡಿಸಿದ ನಿರ್ದೇಶಕ ಎಂ.ಅಂಬರೀಶ್ ಈಗ ನಾಟ್‌ಔಟ್ ಕಥೆ ಹೇಳಲು ಬರುತ್ತಿದ್ದಾರೆ. ಡಾರ್ಕ್ ಹ್ಯೂಮರ್ ಜಾನರ್‌ನ ನಾಟ್ ಔಟ್ ಟ್ರೇಲರ್‌ನಲ್ಲಿಯೇ ಹೊಸ ಭರವಸೆ ಮೂಡಿಸಿದೆ. ಸಿನಿಮಾದ ಮೂಲಕ ಚಿತ್ರರಂಗದಲ್ಲಿ ಹೊಸ ಪ್ರಯೋಗಕ್ಕೂ ಚಿತ್ರತಂಡ ಮುಂದಾಗಿದೆ. ತಮ್ಮ ಚಿತ್ರದ ಕುರಿತಂತೆ ಅಂಬರೀಶ್ ವಿ. ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ವಿ.ಸಿನಿಮಾಸ್ :ನಾಟ್ ಔಟ್ ಶೀರ್ಷಿಕೆಯೇ ವಿಭಿನ್ನವಾಗಿದೆಯಲ್ಲ?

ಎಂ.ಅಂಬರೀಶ್ : ನಾಟ್ ಔಟ್ ಅನ್ನುವುದು ಕ್ರೀಡೆಗೆ ಸಂಬಂಧಿಸಿದ ಪದ. ಅದಕ್ಕೆ ಚಿತ್ರದ ಟ್ಯಾಗ್ ಲೈನ್‌ನಲ್ಲಿ, ಕಾಣದೆ ಇರುವ ಅಂಪೈರ್ ನೀಡುವ ತೀರ್ಪು ನಾಟ್‌ಔಟ್.. ಎಂದಿದೆ. ಎಲ್ಲರಲ್ಲೂ ಮಾನವೀಯತೆ ಎಂಬುದು ಇದ್ದೇ ಇರುತ್ತದೆ, ಅದು ವ್ಯಕ್ತವಾಗಲು ಸಮಯ, ಸಂದರ್ಭ ಒದಗಿಬರಬೇಕು ಎಂಬ ಸೂಕ್ಷ್ಮ ವಿಚಾರವನ್ನು ಚಿತ್ರದಲ್ಲಿ ಹೇಳಲಾಗಿದೆ. ಡಾರ್ಕ್ ಹ್ಯೂಮರ್ ಜಾನರ್‌ನಲ್ಲಿ ಸಿನಿಮಾ ಸಾಗಲಿದೆ.

ವಿ.ಸಿ : ಇದು ಕೋವಿಡ್ ಸಮಯದ ಕಥೆಯೆ ?

ಅಂಬರೀಶ್ : ಇದು ಕೋವಿಡ್ ಸಮಯದಲ್ಲಿ ಹೊಳೆದ ಕಥೆ. ಆಗ ಕೋವಿಡ್ ಡೈರೀಸ್ ಎಂಬ ಸರಣಿ ಸ್ಟೋರಿ ಬರೆಯುತ್ತಿದ್ದೆ. ಅದರಿಂದ ಸ್ಫೂರ್ತಿ ಪಡೆದು ಈ ಕಥೆ ಹೆಣೆದೆ, ಕೋವಿಡ್ ಕಾಡುತ್ತಿರುವ ಸಮಯದಲ್ಲಿ ಹಲವರು ನೋವಿನಿಂದ ನರಳಿದರೆ, ಕೆಲವರು ಅದನ್ನೇ ಬಂಡವಾಳವನ್ನಾಗಿ ಮಾಡಿಕೊಂಡು ಲಾಭ ಮಡಿಕೊಂಡರು ಅದೆಲ್ಲವೂ ಚಿತ್ರದಲ್ಲಿದೆ. ಕ್ಲೈಮ್ಯಾಕ್ಸ್‌ನಲ್ಲಿ ಎಮೋಷನ್ಸ್ ತುಂಬಿದೆ

ವಿ.ಸಿ : ರವಿಶಂಕರ್ ಅವರ ಪಾತ್ರ ಈ ಹಿಂದಿನ ಚಿತ್ರಗಳಿಂತ ವಿಭಿನ್ನವಾಗಿದೆಯೆ ?

ಅಂಬರೀಶ್ : ಹೌದು, ಈ ಹಿಂದಿನ ಸಿನಿಮಾಗಳಲ್ಲಿ ರವಿಶಂಕರ್ ಅವರನ್ನು ಖಳ ನಟರಾಗಿ, ಇಲ್ಲ ಕಮಿಡಿಯನ್ ಆಗಿ ತೋರಿಸಿದ್ದಾರೆ. ಆದರೆ ಈ ಎಲ್ಲಾ ಪಾತ್ರಗಳಿಗಿಂತ ವಿಶೇಷವಾದ ಪಾತ್ರದಲ್ಲಿ ರವಿಶಂಕರ್ ಮಿಂಚಿದ್ದಾರೆ. ಒಂಟಿಕೊಪ್ಪಲು ದೇವರಾಜ ಎಂಬ ಪಾತ್ರದಲ್ಲಿ ರವಿಶಂಕರ್ ಕಾಣಿಸಿಕೊಂಡಿದ್ದಾರೆ. ಅವರ ಪಾತ್ರದಲ್ಲಿ ಅಬ್ಬರವಿದೆ, ಕಾಮಿಡಿ ಇದೆ, ಎಲ್ಲಕ್ಕೂ ಹೆಚ್ಚಾಗಿ ಎಮೋಷನ್‌ನಲ್ಲಿ ಸೆಳೆಯುತ್ತಾರೆ. ಚಿತ್ರದ ಆರಂಭದಿಂದ ಅಂತ್ಯದವರೆಗೂ ಅವರ ಪಾತ್ರ ಸಾಗುತ್ತಾ ಪ್ರೇಕ್ಷರನ್ನು ರಂಜಿಸುತ್ತದೆ. ಅಜಯ್ ಪೃಥ್ವಿ ನಾಯಕನಾಗಿ ನಟಿಸಿದ್ದು ಆ್ಯಂಬುಲೆನ್ಸ್ ಡ್ರೈವರ್ ಆಗಿ ಕಾಣಿಸಿಕೊಂಡಿದ್ದಾರೆ. ರಚನಾ ಇಂದರ್ ನಾಯಕಿಯಾಗಿ ಬಣ್ಣಹಚ್ಚಿದ್ದು, ನರ್ಸ್ ಪಾತ್ರದಲ್ಲಿ ಅಭಿನಯಿಸಿದ್ದಾರೆ.

ವಿ.ಸಿ : ಚಿತ್ರದ ಮೂಲಕ ಹೊಸ ಪ್ರಯೋಗಕ್ಕೂ ಮುಂದಾಗಿದ್ದೀರಲ್ಲ ?

ಅಂಬರೀಶ್ : ನಾವು ಪ್ರೇಕ್ಷರಿಗಾಗಿ ಒಳ್ಳೆಯ ಸಿನಿಮಾ ಮಾಡಿದ್ದೇವೆ. ಅವರು ನೀಡುವ ಹಣಕ್ಕೆ ಖಂಡಿತಾ ಮೋಸವಾಗುವುದಿಲ್ಲ. ನಮ್ಮ ಚಿತ್ರದ ಮೊದಲಾರ್ಧವನ್ನು ಉಚಿತವಾಗಿ ನೋಡಬಹುದು, ಫಸ್ಟ್ ಹಾಪ್ ಹಿಡಿಸಿದರೆ ದ್ವಿತಿಯಾರ್ಧಕ್ಕೆ ಟಿಕೆಟ್ ತೆಗೆದುಕೊಂಡು ಸಿನಿಮಾ ನೋಡಬಹುದು. ಇದು ಭಾರತೀಯ ಚಿತ್ರರಂಗದಲ್ಲಿಯೇ ಹೊಸ ಪ್ರಯೋಗ. ಹಾಗಂತ ಈ ಆಫರ್ ಎಲ್ಲಾ ಚಿತ್ರಮಂದಿರಗಳಲ್ಲಿಯೂ ಸಿಗುವುದಿಲ್ಲ. ಸಿನಿಮಾದ ಬಿಡುಗಡೆಯ ಮೊದಲ ದಿನ ಆಯ್ದ ಏಕಪರದೆಯ ಚಿತ್ರಮಂದಿರಗಳಲ್ಲಿ ಈ ಆಫರ್ ಸಿಗಲಿದೆ. ಸಿಂಗಲ್ ಸ್ಕ್ರೀನ್ ಥಿಯೇಟರ್‌ಗೆ ಪ್ರೇಕ್ಷಕರು ಬರಲಿ ಎಂಬುದೇ ನಮ್ಮ ಉದ್ದೇಶ.

ಸಿಹಿಸುದ್ದಿ ನೀಡಿದ ಕಿಚ್ಚ

ಕಿಚ್ಚ ಸುದೀಪ್, ವಿಕ್ರಾಂತ್ ರೋಣ ಚಿತ್ರದ ಬಳಿಕ ಯಾವ ಸಿನಿಮಾದಲ್ಲಿಯೂ ನಟಿಸಲಿಲ್ಲ. ಅವರನ್ನು ತೆರೆಯಲ್ಲಿ ಕಾಣದೆ ಅಭಿಮಾನಿಗಳು ಬೇಸರಗೊಂಡಿದ್ದಾರೆ. ಸದ್ಯ ಸುದೀಪ್ ಮ್ಯಾಕ್ಸ್ ಚಿತ್ರದಲ್ಲಿ ನಟಿಸಿದ್ದು, ಈ ಚಿತ್ರವನ್ನು ಆದಷ್ಟು ಬೇಗ ಕಣ್ತುಂಬಿಕೊಳ್ಳಬೇಕು ಎಂದು ಸಿನಿಪ್ರಿಯರು ಕಾದು ಕುಳತ್ತಿದ್ದಾರೆ. ಈ ನಡುವೆಯೇ ಫ್ಯಾನ್ಸ್‌ಗೆ ಸುದೀಪ್ ಸಿಹಿ ಸುದ್ದಿ ನೀಡಿದ್ದಾರೆ. ಇದೇ 16 ರಂದು ಚಿತ್ರದ ಟೀಸರ್ ರಿಲೀಸ್ ಮಡುವುದಾಗಿ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಮಂಗಳವಾರ ಮಧ್ಯಾಹ್ನ ಮ್ಯಾಕ್ಸ್ ಚಿತ್ರದ ಹೊಸ ಟೀಸರ್ ರಿಲೀಸ್ ಆಗಲಿದ್ದು, ಅದರಲ್ಲಿ ಕಿಚ್ಚ ಸುದೀಪ್ ಅವರ ಲುಕ್ ಕೂಡ ರಿವಿಲ್ ಆಗಲಿದೆ. ಜತೆಗೆ ಚಿತ್ರದ ಬಿಡುಗಡೆಯ ದಿನಾಂಕವೂ ಘೋಷಣೆಯಾಗಲಿದೆ ಎಂಬ ನಿರೀಕ್ಷೆಯೂ ಇದೆ. ಮ್ಯಾಕ್ಸ್ ಅದ್ದೂರಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಚಿತ್ರವಾಗಿದ್ದು, ಈ ಚಿತ್ರದಲ್ಲಿ ಸುದೀಪ್ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ವರಲಕ್ಷ್ಮಿ ಶರತ್ ಕುಮಾರ್, ನಭಾ ನಟೇಶ್, ಸಂಯುಕ್ತಾ ಹೊರನಾಡು ಸೇರಿದಂತೆ ದೊಡ್ಡ

ತಾರಾಬಳಗವೇ ಚಿತ್ರದಲ್ಲಿದೆ. ಇದು ಕಿಚ್ಚ ಸುದೀಪ್ ಅಭಿನಯದ ನಲವತ್ತಾರನೇ ಸಿನಿಮಾವಾಗಿದ್ದು, ಕಲೈಪುಲಿ.ಎಸ್.ಧನು ಚಿತ್ರ ನಿರ್ದೇಶನದ ಮಾಡಿದ್ದಾರೆ. ಈ ಚಿತ್ರಕ್ಕಾಗಿ ಮಹಾಬಲಿಪುರಂನಲ್ಲಿ ಅದ್ದೂರಿ ಸೆಟ್ ನಿರ್ಮಾಣ ಮಾಡಿ ಅಲ್ಲಿಯೇ ಚಿತ್ರೀಕರಣ ನಡೆಸಲಾಗಿದೆ.

ಟೀಸರ್‌ನಲ್ಲಿ ರಣಗಲ್ ಸಾಮ್ರಾಜ್ಯ

ಶಿವರಾಜ್ ಕುಮಾರ್ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ಅವರ ಬರ್ತ್‌ಡೆಯಂದು ಅಭಿಮಾನಿಗಳಿಗೆ ಸಾಕಷ್ಟು ಉಡುಗೊರೆಗಳು ಸಿಕ್ಕಿವೆ. ಅದರಲ್ಲಿ ಬಹುನಿರೀಕ್ಷಿತ ಭೈರತಿ ರಣಗಲ್ ಸಿನಿಮಾದ ಟೀಸರ್ ಕೂಡ ಒಂದಾಗಿದೆ. ಭೈರತಿ ರಣಗಲ್ ಸ್ಯಾಂಡಲ್‌ವುಡ್‌ನಲ್ಲಿ ಹೊಸ ಭರವಸೆ ಮೂಡಿಸಿದೆ. ಸದ್ಯ ಬಿಡುಗಡೆಯಾಗಿರುವ ಟೀಸರ್ ನಿರೀಕ್ಷೆ ದುಪ್ಪಟ್ಟು ಮಾಡಿದೆ. ಟೀಸರ್‌ನಲ್ಲಿ ಭೈರತಿ ರಣಗಲ್ ಸಾಮ್ರಾಜ್ಯದ ದರ್ಶನವಾಗಿದ್ದು, ಇಲ್ಲಿ ಶಿವಣ್ಣ ಡಬಲ್ ಶೇಡ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಕಪ್ಪು ಲುಂಗಿ ಕಪ್ಪು ಶರ್ಟ್ ತೊಟ್ಟು ಸಿಂಪಲ್ ಲುಕ್‌ನಲ್ಲಿ ಮಿಂಚಿರುವ ಶಿವಣ್ಣ ಕರಿಕೋಟು ತೊಟ್ಟ ವಕೀಲರಾಗಿಯೂ ಕಂಗೊಳಿಸಿದ್ದಾರೆ. ಇದನ್ನು ನೋಡಿ ಫ್ಯಾನ್ಸ್ ಖುಷಿಯಾಗಿದ್ದಾರೆ. ಅದರಲ್ಲಿಯೂ ನಾನು ತಾಳ್ಮೆ ಕಳೆದುಕೊಂಡಾಗೆಲ್ಲಾ ತುಂಬಾ ಜನ ತಲೆ ಕಳೆದು ಕೊಂಡಿದ್ದಾರೆ.. ಎಂಬ ಡೈಲಾಗ್ ಟೀಸರ್‌ನ ಹೈಲೈಟ್ ಆಗಿದೆ. ರವಿಬಸ್ರೂರು ಹಿನ್ನೆಲೆ ಸಂಗೀತ ಟೀಸರ್‌ಗೆ ಹೊಸ ಮೆರುಗು ತಂದಿದೆ. ಭೈರತಿ ರಣಗಲ್, ಮಫ್ತಿ ಸೀಕ್ವೆಲ್ ಆಧರಿಸಿ ಮೂಡಿಬ ರುತ್ತಿರುವ ಸಿನಿಮಾವಾಗಿದ್ದು, ಇಲ್ಲಿ ಭೈರತಿಯ ವೃತ್ತಾಂತ ತೆರೆದು ಕೊಳ್ಳಲಿದೆ. ಮಫ್ತಿ ನಿರ್ದೇಶಕ



ನರ್ತನ್ ಈ ಚಿತ್ರವನ್ನು ನಿರ್ದೇಶನ ಮಾಡಿ ತೆರೆಗೆ ತರುತ್ತಿದ್ದಾರೆ. ಗೀತಾ ಪಿಕ್ಚರ್ಸ್ ಬ್ಯಾನರ್‌ನಲ್ಲಿ ಗೀತಾ ಶಿವರಾಜ್ ಕುಮಾರ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಸೆಪ್ಟೆಂಬ ರ್‌ನಲ್ಲಿ ಬೆಳ್ಳಿತೆರೆಯಲ್ಲಿ ಭೈರತಿ ರಣಗಲ್ ದರ್ಶನವಾಗಲಿದೆ.

ಟ್ರೇಲರ್‌ನಲ್ಲಿ ವಿದ್ಯಾರ್ಥಿಗಳ ಕಚಗುಳಿ

ಗಾಯಕ ಹಾಗೂ ಸಂಗೀತ ನಿರ್ದೇಶಕ ಚಂದನ್ ಶೆಟ್ಟಿ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ರಂಜಿಸಲು ಬರುತ್ತಿದ್ದಾರೆ. ಹೌದು, ಅರುಣ್ ಅಮುಕ್ತ ನಿರ್ದೇಶನದಲ್ಲಿ ಸಿದ್ಧವಾಗಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರೇ ಚಿತ್ರದಲ್ಲಿ ಚಂದನ್ ಶೆಟ್ಟಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಈ ಚಿತ್ರ ಮುಂದಿನ ವಾರ ಅದ್ದೂರಿಯಾಗಿ ತೆರೆಗೆ ಬರಲಿದೆ. ಈಗಾಗಲೇ ಸೈಡ್ ಎ ಟ್ರೇಲರ್ ಮೂಲಕ ಪ್ರೇಕ್ಷಕರನ್ನು ಸೆಳೆದಿರುವ ವಿದ್ಯಾರ್ಥಿಗಳು, ಈಗ ಸೈಡ್ ಬಿ ಟ್ರೇಲರ್‌ನಲ್ಲಿಯೂ ಕಾಮಿಡಿ ಕಚಗುಳಿ ಇಟ್ಟಿದ್ದಾರೆ. ಕಾಲೇಜು ಕಹಾನಿಯ ಸುತ್ತಾ, ಮೈನವಿರೇಳಿಸೋ ಸಸ್ಪೆನ್ಸ್, ಥ್ರಿಲ್ಲರ್ ಸ್ಟೋರಿ ಈ ಚಿತ್ರದಲ್ಲಿದೆ. ಸದ್ಯ ಬಿಡುಗಡೆಯಾಗಿರುವ ಸೈಡ್ ಬಿ ಟ್ರೇಲರ್‌ನಲ್ಲಿ ಪಾತ್ರಗಳ ಪರಿಚಯ ಮಾಡಿಕೊಡಲಾಗಿದೆ. ಚಂದನ್ ಶೆಟ್ಟಿ ಪಾತ್ರ ಬಲು ವಿಶೇಷವಾಗಿದೆ. ಅಮರ್, ಭಾವನಾ, ಮಾನಸಿ, ವಿವಾನ್, ಭವ್ಯಾ, ಸುನೀಲ್ ಪುರಾಣಿಕ್, ಅರವಿಂದ ರಾವ್, ಸಿಂಚನಾ, ರಘು ರಾಮನಕೊಪ್ಪ, ಪ್ರಶಾಂತ್ ಸಂಬರ್ಗಿ, ಕಾಕ್ರೋಚ್ ಸುಧಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ನಿರ್ದೇಶಕ ಅರುಣ್ ಅಮುಕ್ತ ವಿದ್ಯಾರ್ಥಿ ವಿದ್ಯಾರ್ಥಿನಿಯರ ಜತೆಗೆ ಮೋಡಿ ಮಾಡುವುದು ಖಚಿತವಾಗಿದೆ. ಸುಬ್ರಮಣ್ಯ ಕುಕ್ಕೆ ಮತ್ತು ಎ.ಸಿ ಶಿವಲಿಂಗೇಗೌಡ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಕುಮಾರ್ ಗೌಡ ಛಾಯಾಗ್ರಹಣ, ಭರ್ಜರಿ ಚೇತನ್ ಮತ್ತು ವಾಸುಕಿ ವೈಭವ್ ಸಾಹಿತ್ಯ, ವಾಸು ದೀಕ್ಷಿತ್ ಸಂಗೀತ ನಿರ್ದೇಶನ ಪವನ್ ಗೌಡ ಸಂಕಲನ, ಟೈಗರ್ ಶಿವು, ನರಸಿಂಹ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.

ಯಶ್ ಹೊಸ ಲುಕ್

ನಟ ಯಶ್, ಕೆಜಿಎಫ್ ಯಶಸ್ಸಿನ ಬಳಿಕ ಟಾಕ್ಸಿಕ್ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಮಲೆಯಾಳಂ ಖ್ಯಾತ ನಿರ್ದೇಶಕಿ ಗೀತು ಮೋಹನ್ ದಾಸ್ ನಿರ್ದೇಶನದಲ್ಲಿಮೂಡಿಬರುತ್ತಿರುವ ಟಾಕ್ಸಿಕ್ ಚಿತ್ರದ ಚಿತ್ರೀಕರಣ ಭರದಿಂದ ಸಾಗುತ್ತಿದೆ. ಈ ಚಿತ್ರದಲ್ಲಿ ಯಶ್ ಹೊಸ ಲುಕ್‌ನಲ್ಲಿ ಮಿಂಚಲಿದ್ದಾರೆ. ಯಶ್ ಲುಕ್ ಹೇಗಿರಲಿದೆ ಎಂಬ ಕುತೂಹಲ ಎಲ್ಲರಲ್ಲಿಯೂ ಇದೆ. ಹೌದು, ಅಂಬಾನಿ ಮಗನ ಮದುವೆಯಲ್ಲಿ ಪ್ರತ್ಯಕ್ಷವಾದ ಯಶ್ ಹೊಸ ಹೇರ್ ಸ್ಟೈಲ್‌ನಲ್ಲಿ ಕಂಗೊಳಿಸಿದರು. ಕೆಜಿಎಫ್ ರೀತಿಯ ನೀಳ ಕೇಶ ರಾಶಿಯ ಬದಲು ಹೊಸ ಹೇರ್ ಸ್ಟೈಲ್‌ನಲ್ಲಿ ಮಿಂಚಿದ್ದಾರೆ. ಯಶ್ ಕಂಡು ಅವರ ಅಭಿಮಾನಿಗಳು ಖುಷಿಯಾಗಿದ್ದಾರೆ. ಟಾಕ್ಸಿಕ್ ಭೂಗತ ಲೋಕದ ಕಥೆಯನ್ನು ಒಳಗೊಂಡಿದ್ದು, ಯಶ್ ಅಂಡರ್‌ವರ್ಲ್ಡ್ ಡಾನ್ ಆಗಿ ಕಾಣಿಸಿಕೊಳ್ಳುತ್ತಿದ್ದಾರೆ ಎನ್ನಲಾಗುತ್ತಿದೆ. ಟಾಕ್ಸಿಕ್ ಚಿತ್ರಕ್ಕಾಗಿ ಬೆಂಗಳೂರಿನ ಹೊರವಲಯದಲ್ಲಿ ಅದ್ದೂರಿ ಸೆಟ್ ಹಾಕಿ ಚಿತ್ರೀಕರಣ ನಡೆಸಲಾಗುತ್ತಿದೆ. ಬಳಿಕ ಶೂಟಿಂಗ್‌ಗಾಗಿ ಚಿತ್ರತಂಡ ಲಂಡನ್‌ಗೂ ಹಾರಲಿದೆ.